
ಕನ್ನಡ
ಜಾಣ

ನಡುಗನ್ನಡ ಕಾವ್ಯಸಂಗಮ



ಸಂಪಾದಕರು

ಡಾ. ಎಂ. ಟಿ. ರತಿ

ಪ್ರೊ. ಡಿ. ಸಿ. ಗೀತಾ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ನಡುಗನ್ನಡ ಕಾವ್ಯಸಂಗಮ

ಸಂಪಾದಕರು
ಡಾ. ಎಂ.ಟಿ. ರತಿ
ಪ್ರೊ. ಡಿ.ಸಿ. ಗೀತಾ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

NADUGANNADA KAVYASANGAMA
Edited by: Dr. M.T. Rati, prof. D.C. Geetha
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : v + 102 Price : **Rs.50=00** : **2010**

ಪ್ರಥಮ ಮುದ್ರಣ : ೨೦೧೦
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು

ಪಠ್ಯರಚನಾ ಸಮಿತಿ – ಸದಸ್ಯರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಡಾ. ಬೈರಮಂಗಲ ರಾಮೇಗೌಡ
ಪ್ರೊ. ಎಂ.ಜಿ. ಚಂದ್ರಶೇಖರಯ್ಯ

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಸಂಚಾಲಕರು – ಪ್ರೊ. ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಟಿ.ಎಸ್.ದಕ್ಷಿಣಾಮೂರ್ತಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ನಾಡೋಜ ಡಾ. ಗೀತಾ ನಾಗಭೂಷಣ
೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಶ್ರೀ ಶಿವು ವಿ. ಹೂಗಾರ

ಮುದ್ರಣ : ಕೀರ್ತಿ ಪ್ರಿಂಟರ್ಸ್, ನಂ.೨೪೦, ಎಫ್, ೨ನೇ ಬಿ ಮುಖ್ಯರಸ್ತೆ, ೨ನೇ ಡಿ. ಅಡ್ಡರಸ್ತೆ, ಮೊದಲನೇ ಹಂತ, ಗಿರಿನಗರ, ಬೆಂಗಳೂರು – ೫೬೦ ೦೮೫.

ಅಧ್ಯಕ್ಷರ ನುಡಿ

'ಪ್ರವೇಶ' 'ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಬಹಳಷ್ಟು ವರ್ಷಗಳಿಂದ ಸಾಹಿತ್ಯಪ್ರಿಯರು ಈ ಪರೀಕ್ಷೆಗಳಿಗೆ ನೋಂದಾವಣೆ ಮಾಡಿಸಿ, ಶ್ರದ್ಧೆಯಿಂದ ಅಭ್ಯಾಸ ಮಾಡಿ, ಪರೀಕ್ಷೆ ಬರೆದು ಅರ್ಹತಾ ಪತ್ರಗಳನ್ನು ಪಡೆದುಕೊಂಡಿದ್ದಾರೆ. ರ್‍ಯಾಂಕುಗಳಿಗೆ ನಿಶ್ಚಿತ ಮೊತ್ತದ ನಗದು ಬಹುಮಾನ ಗಳಿಸಿ ಹೆಮ್ಮೆಪಟ್ಟಿದ್ದಾರೆ. ಸಾಹಿತ್ಯ ಪರೀಕ್ಷೆಗಳ ರ್‍ಯಾಂಕ್ ವಿಜೇತರಿಗೆ ಬಹುಮಾನ ಪ್ರದಾನ ಮಾಡುವ ಸಮಾರಂಭವೇ ಪರಿಷನ್ಮಂದಿರದಲ್ಲಿ ನಡೆಯುವ ಪುಟ್ಟದೊಂದು ಸಾಹಿತ್ಯ ಹಬ್ಬದಂತಿರುತ್ತದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು. ಹಾಗೆಯೇ ಬಿ.ಎ. ಪದವಿಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಿರದಿದ್ದರೂ 'ರತ್ನ' ಪರೀಕ್ಷೆಯ ಅರ್ಹತಾ ಪತ್ರದ ನೆರವಿನಿಂದ ಕನ್ನಡ ಎಂ.ಎ. ತರಗತಿಗಳಿಗೆ ಗರಿಷ್ಠ ಇಬ್ಬರು ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾದ ಅನುಕೂಲವೂ ಇದೆ.

ಇಷ್ಟೆಲ್ಲ ಮಹತ್ವ ಪಡೆದುಕೊಂಡಿರುವ ಪರೀಕ್ಷೆಗಳಿಗೆ ಪಠ್ಯಕ್ರಮವನ್ನು ರೂಪಿಸಿ, ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಮೊದಲುಗೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವುಗಳ ವಿಭಿನ್ನ ಪ್ರಕಾರಗಳು, ಆಸಕ್ತಿಗಳು, ಚಳುವಳಿಗಳು, ಸಿದ್ಧಾಂತಗಳು – ಇವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಎಲ್ಲೂ ಅರೆಕೊರೆಯಾಗದಂತೆ, ಭಾರವಾಗದಂತೆ ಸಮತೋಲನವನ್ನು ಕಾಯ್ದುಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಸಮಕಾಲೀನ ಬದುಕು – ಅಭಿರುಚಿ-ಚಿಂತನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ವಿಶ್ವವಿದ್ಯಾಲಯಗಳು ರೂಪಿಸುವ ಇದೇ ಉದ್ದೇಶದ ಪಠ್ಯಗಳಿಗೆ ಹೊಯ್‌ಕಯ್ ಆಗಿ ನಿಲ್ಲಬೇಕಾಗುತ್ತದೆ. ನಮ್ಮ ಈ ಆಶಯಕ್ಕೆ ಸ್ಪಂದಿಸುವಂತೆ ಸಾಹಿತ್ಯ ಪರೀಕ್ಷೆಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರೂಪಿಸುವ ಜವಾಬ್ದಾರಿಯನ್ನು ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಂ.ಜಿ. ಚಂದ್ರಶೇಖರಯ್ಯ ಪ್ರೀತಿಯಿಂದ ನಿರ್ವಹಿಸಿದ್ದಾರೆ. ವಿವಿಧ ಪಠ್ಯಗಳ ಸಂಪಾದಕರು ಸಕಾಲದಲ್ಲಿ ಅಚ್ಚುಕಟ್ಟಾಗಿ ಪುಸ್ತಕಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿ ಸುಂದರ ವಿನ್ಯಾಸದೊಂದಿಗೆ ಪುಸ್ತಕಗಳನ್ನು ಮುದ್ರಿಸಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ. ಸಾಹಿತ್ಯ ವಿದ್ಯಾರ್ಥಿಗಳು ಈ ಪುಸ್ತಕಗಳಿಂದ ನಿರೀಕ್ಷಿತ ಪ್ರಯೋಜನ ಪಡೆಯುವರೆಂದು ಭಾವಿಸಿದ್ದೇನೆ.

ದಿನಾಂಕ : ೨೧-೦೭-೨೦೧೦

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಸಂಪಾದಕರ ಮಾತು

ಸಾಹಿತ್ಯ ಪರೀಕ್ಷೆಗಳ ಭಾಗವಾಗಿ 'ಜಾಣ' ಪರೀಕ್ಷೆಗೆ ಸಂಬಂಧಿಸಿದ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಹೊಣೆಗಾರಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ನಮಗೆ ವಹಿಸಿದೆ. ವಿದ್ಯಾರ್ಥಿಗಳು ಅವರೇ ಪಠ್ಯವನ್ನು ಓದಿಕೊಂಡು ಪರೀಕ್ಷೆ ಬರೆಯಬೇಕಾಗಿರುವುದರಿಂದ ಪಠ್ಯ ಸರಳ ಹಾಗೂ ಸುಲಭವಾಗಿರಬೇಕೆಂಬ ಉದ್ದೇಶದಿಂದ ವಚನ, ಕೀರ್ತನೆ, ತತ್ವಪದ, ಜಾನಪದ ಹೀಗೆ ಕನ್ನಡದ ವಿವಿಧ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದಂತೆ ಪಠ್ಯಭಾಗಗಳನ್ನು ಪಠ್ಯಪರಿಶೀಲನಾ ಸಮಿತಿಯ ಸೂಚನೆಯ ಮೇರೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರ ಜೊತೆಗೆ ಅಭ್ಯಾಸಗಳನ್ನು, ಮಾದರಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಲಾಗಿದೆ. ಇಂಥ ಗುರುತರವಾದ ಜವಾಬ್ದಾರಿಯನ್ನು ನಮಗೆ ವಹಿಸಿದ ಪಠ್ಯ ರಚನಾ ಸಮಿತಿಯ ತಜ್ಞರಾದ ಪ್ರೊ. ಎಂ.ಜಿ. ಚಂದ್ರಶೇಖರಯ್ಯನವರಿಗೂ ಡಾ. ಬೈರಮಂಗಲ ರಾಮೇಗೌಡರಿಗೂ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರಿಗೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್‌ರವರಿಗೂ ನಮ್ಮ ಕೃತಜ್ಞತೆಗಳು

ಡಾ. ಎಂ.ಟಿ.ರತಿ
ಪ್ರೊ. ಗೀತಾ ಡಿ.ಸಿ.

ಬೆಂಗಳೂರು

ಪರಿವಿಡಿ

ವಚನಗಳು

ಜೇಡರ ದಾಸಿಮಯ್ಯ

೧. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಸೂಸುವ ವಾಯು ನಿಮ್ಮ ದಾನ! ನಿಮ್ಮ
ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ ರಾಮನಾಥ

೨. ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ
ಕಳವೆಯೆಲ್ಲ ಹೋಗಿ ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

೩. ಬರುಸಟೆಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ

೪. ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ ॥
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ

೫. ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀನು ಬೆರೆಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ

೬. ಎನ್ನೊಡಲಾದರೆ ಎನ್ನಿಚ್ಚೆಯಲ್ಲಿರದೆ ?
ನಿನ್ನೊಡಲಾದರೆ ನಿನ್ನಿಚ್ಚೆಯಲ್ಲಿರದೆ ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ

೭. ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ
ಅರೆದು ನೋಡುವ ಚಂದನದಂತೆ,
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇದ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು

ಅಲ್ಲಮಪ್ರಭು

೧. ಶಿಲೆಯೊಳಗಣ ಪಾವಕನಂತೆ,
ಉದಯದೊಳಗಣ ಪ್ರತಿಬಿಂಬದಂತೆ,
ಬೀಜದೊಳಗಣ ವೃಕ್ಷದಂತೆ,
ಶಬ್ದದೊಳಗಣ ನಿಶ್ಶಬ್ದದಂತೆ, ಗುಹೇಶ್ವರ,
ನಿಮ್ಮ ಶರಣ ಸಂಬಂಧ

೨. ಎತ್ತಣ ಮಾಮರ? ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?

೩. ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು
ವೀರರೂ ಅಲ್ಲ! ಧೀರರೂ ಅಲ್ಲ!!
ಇದು ಕಾರಣ
ನೆರೆ ಮೂರು ಲೋಕವೆಲ್ಲವೂ
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರನೆಂಬ ಲಿಂಗವನವರೆತ್ತಬಲ್ಲರೋ?

೪. ಆಸೆಗೆ ಸತ್ತುದು ಕೋಟಿ,
ಆಮಿಷಕ್ಕೆ ಸತ್ತುದು ಕೋಟಿ,
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ,
ಗುಹೇಶ್ವರ, ನಿಮಗಾಗಿ ಸತ್ತವರಾರನೂ ಕಾಣೆ

೫. ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ

೬. ಕಾಲೇ ಕಂಭಗಳಾದವೆನ್ನ!
ದೇಹವೇ ದೇಗುಲವಾಯಿತಯ್ಯ!
ಎನ್ನ ನಾಲಗೆಯೆ ಘಂಟೆ, ಶಿರ ಸುವರ್ಣದ ಕಳಶ – ಇದೇನಯ್ಯ?
ಸರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯ
ಗುಹೇಶ್ವರ, ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ
ಪಲ್ಲಟವಾಗದಂತಿದ್ದೆನಯ್ಯ

೭. ದೇಹದೊಳಗೆ ದೇವಾಲಯವಿದ್ದು,
ಮತ್ತೆ ಬೇರೆ ದೇವಾಲಯವೇಕೆ?
ಎರಡಕ್ಕೂ ಹೇಳಲಿಲ್ಲಯ್ಯ !
ಗುಹೇಶ್ವರ, ನೀನು ಕಲ್ಲಾದರೆ ನಾನೇನಪ್ಪೆನು ?

೮. ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ!
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ!
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ!
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ! ಗುಹೇಶ್ವರ –
ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು

೯. ಕುರೂಪಿ

ಸುರೂಪಿಯ ನೆನೆದಡೆ
ಸುರೂಪಿಯಪ್ಪನೆ ?
ಆ ಸುರೂಪಿ
ಕುರೂಪಿಯ ನೆನೆದಡೆ
ಕುರೂಪಿಯಪ್ಪನೆ ?
ಧನವುಳ್ಳವರ ನೆನೆದಡೆ ದರಿದ್ರ ಹೋಹುದೇ ?
ಪುರಾತನರ ನೆನೆದು ಕೃತಾರ್ಥರಾದೆವೆಂಬರು ?
ತಮ್ಮಲ್ಲಿ ಭಕ್ತಿನಿಷ್ಠೆಯಿಲ್ಲದವರ ಕಂಡಡೆ
ಮೆಚ್ಚನು ಗುಹೇಶ್ವರನು

ಬಸವಣ್ಣ

೧. ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲಸಂಗಮದೇವನೆಂತೊಲಿವನಯ್ಯಾ ?

೨. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ,
ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ !
ಪ್ರಪಂಚನ ಡಂಬಿನಲ್ಲಿ, ಎನ್ನದೊಂದು ರೂಹುಮಾಡಿ
ನೀವಿರಿಸಿದಿರಿ, ಕೂಡಲಸಂಗಮದೇವಾ

೩. ಎನ್ನ ಕಾಯವ ದಂಡಿಗೆಯ ಮಾಡಯ್ಯಾ ;
ಎನ್ನ ಸಿರವ ಸೋರೆಯ ಮಾಡಯ್ಯಾ ;
ಎನ್ನ ನರವ ತಂತಿಯ ಮಾಡಯ್ಯಾ ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ ; ಉದರಲೊತ್ತಿ ಬಾರಿಸು
ಕೂಡಲಸಂಗಮದೇವಾ

೪. ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ? ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯಾ
ಕೂಡಲಸಂಗಮದೇವ, ಕೇಳಯ್ಯ ;
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ !

೫. ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ ?
ತನಗಾದ ಆಗೇನು ? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿತನದ ಕೇಡು !
ಮನದ ಕೋಪ ತನ್ನರುಹಿನ ಕೇಡು !
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ !

೬. ಹೊಯಿದವರೆನ್ನ ಹೊರೆದವರೆಂಬೆ, ಬಯಿದವರೆನ್ನ ಬಂಧುಗಳೆಂಬೆ
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಆಳಿಗೊಂಡವರೆನ್ನ ಆಳ್ದರೆಂಬೆ
ಜರೆದವರೆನ್ನ ಜನ್ಮಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನ ಶೂಲದಲಿಕ್ಕಿದರೆಂಬೆ
ಕೂಡಲಸಂಗಮದೇವಾ

೭. ನೆರೆಕೆನ್ನೆಗೆ ತೆರೆಗಲ್ಲಕ್ಕೆ, ಶರೀರಗೂಡುವೋಗದ ಮುನ್ನ,
ಹಲ್ಲುಹೋಗಿ, ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲಸಂಗಮದೇವನ

೮. ''ಏನಿ ಬಂದಿರಿ ಹದುಳವಿದ್ದಿರೆ''? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
''ಕುಳ್ಳಿರೆಂ'' ದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಸಿರ- ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮ ದೇವನು ?

೯. ಕಲ್ಲನಾಗರ ಕಂಡರೆ ಹಾಲನೆರೆಯೆಂಬರು,
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ!
ಉಂಬ ಜಂಗಮ ಬಂದರೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ!
ನಮ್ಮ ಕೂಡಲಸಂಗಮ ಶರಣರ ಕಂಡುದಾಸೀನವ ಮಾಡಿದರೆ,
ಕಲ್ಲುತಾಗಿದ ಮಿಟ್ಟೆಯಂತಪ್ಪರಯ್ಯಾ

೧೦. ವ್ಯಾಧನೊಂದು ಮೊಲನ ತಂದರೆ
ಸಲುವ ಹಾಗಕ್ಕೆ ಬಿಲಿವರಯ್ಯಾ,
ನೆಲನಾಳ್ದನ ಹೆಣನೆಂದರೆ
ಒಂದಡಕೆಗೆ ಕೊಂಬರಿಲ್ಲ ನೋಡಯ್ಯಾ!
ಮೊಲನಿಂದ ಕಡುಕಷ್ಟನರನ ಬಾಳುವೆ!
ಸಲೆ ನಂಬೋ ನಮ್ಮ ಕೂಡಲಸಂಗಮದೇವನ

೧೧. ಹಾವು ತಿಂದವರ ನುಡಿಸಬಹುದು!
ಗರ ಹೊಡೆದವರ ನುಡಿಸಬಹುದು!
ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯ!
ಬಡತನವೆಂಬ ಮಂತ್ರವಾದಿ ಹೊಗಲು-
ಒಡನೆ ನುಡಿವರಯ್ಯ ಕೂಡಲಸಂಗಮದೇವ.

೧೨. ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ;
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ;
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವಾ

೧೩. ಮನೆಯೊಳಗೆ ಮನೆಯೊಡೆಯನಿದ್ದಾನೊ – ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲಾ, ಕೂಡಲಸಂಗಮದೇವ!

೧೪. ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು;
ತೇಲಲಿಯದು ಗುಂಡು; ಮುಳುಗಲೀಯದು ಬೆಂಡು!
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ, ಕೂಡಲಸಂಗಯ್ಯಾ

೧೫. ಆನೆ ಅಂಕುಶಕ್ಕಂಜುವುದೆ, ಅಯ್ಯಾ
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ?
ಆನೀ ಬಿಜ್ಜಳಗಂಜುವೆನೆ, ಅಯ್ಯಾ
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ?

೧೬. ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯ ದುಃಖಕ್ಕೆ ಅಳುವವರ
ಮೆಚ್ಚ ಕೂಡಲ ಸಂಗಮದೇವ

೧೭. ಕಳಬೇಡ ಕೊಲಬೇಡ; ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ

೧೮. ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ!
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯ ನಂತಲ್ಲದೊಲ್ಲನಯ್ಯಾ

೧೯. ಪರಚಿಂತೆ ಎನಗೇಕಯ್ಯಾ?
ನಮ್ಮ ಚಿಂತೆ ನಮಗೆ ಸಾಲದೆ?
ಕೂಡಲಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು!

೨೦. ಎನಿಸುಕಾಲ ಕಲ್ಲು ನೀರೊಳಗಿರ್ದರೇನು;
ನೆನೆದು ಮೃದುವಾಗಬಲ್ಲುದೇ!
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ!
ಅದರ ವಿಧಿಯೆನಗಾಯಿತ್ತು ಕೂಡಲಸಂಗಮದೇವಾ!

ಸಿದ್ಧರಾಮಯ್ಯ

೧. ನದಿಯ ನೀರು ಹೋದುವಯ್ಯಾ ಸಮುದ್ರಕ್ಕೆ
ಸಮುದ್ರದ ನೀರು ಬಾರವಯ್ಯಾ ನದಿಗೆ
ನಾನು ಹೋದೆನಯ್ಯಾ ಲಿಂಗದ ಕಡೆಗೆ
ಲಿಂಗ ಬಾರದು ನೋಡಯ್ಯಾ ನನ್ನ ಕಡೆಗೆ !
ಮಗ ಮುನಿದಡೆ ತಂದೆ ಮುನಿಯನು ;
ನಾ ಮುನಿದಡೆ ನೀ ಮುನಿಯೆ ನೋಡಯ್ಯಾ ,
ಕಪಿಲಸಿದ್ಧಮಲ್ಲಿನಾಥಾ ।

೨. ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು,
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು,
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು,
ಅದು ಕಾರಣ
ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ;
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ !

೩. ಊರಿಗೊಂದು ಹಳ್ಳವಾದಡೆ
ನೀರು ಕುಡಿವವರಿಗೂ ಒಂದೇ ಹಳ್ಳವೇ ? ಇಲ್ಲಿಲ್ಲ!
ಅರಿವವರಿಗೆ ಒಬ್ಬ ದೇವರಾದಡೆ,
ಆ ಲೋಕದವರಿಗೂ ಒಬ್ಬನೆ ? ಇಲ್ಲಿಲ್ಲ!
ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲದೆ ಬೇರೆ ದೈವವಿಲ್ಲ

೪. ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೆ?
ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೆ ?
ಭೂಮಿಯ ಬಿಟ್ಟು ಜಗವ ತೆಗೆಯಬಹುದೆ?
ಜಂಗಮವಿರಹಿತ ಲಿಂಗವಿಲ್ಲ, ಲಿಂಗವಿರಹಿತ ಜಂಗಮವಿಲ್ಲ ಕೇಳಾ ,
ಕಪಿಲಸಿದ್ಧ ಮಲ್ಲಿಕಾರ್ಜುನಾ

೫. ಯೋಗಿಗೆ ಕೋಪವೆ ಮಾಯೆ;
ರೋಗಿಗೆ ಅಪಥ್ಯವೆ ಮಾಯೆ; ಜ್ಞಾನಿಗೆ ಮಿಥ್ಯವೆ ಮಾಯೆ,
ಅರಿದವನೆಂಬವಂಗೆ ನಾನು ನೀನು ಎಂಬುದೆ ಮಾಯೆ
ಕಪಿಲಸಿದ್ಧಮಲ್ಲಿಕಾರ್ಜುನಾ

೬. ಸಿಂಹ ಮದಕರಿಯ ಮೇಲೆ ಹಾರುವುದಲ್ಲದೆ,
ಮದ ಮಹಿಷಿಯ ಮೇಲೆ ಹಾರುವುದೆ ಅಯ್ಯಾ ?
ಪಕ್ಷಿ ಆಕಾಶದಲ್ಲಿ ಹಾರುವುದಲ್ಲದೆ,
ಪಂಜರದಲ್ಲಿ ಹಾರದು ನೋಡಯ್ಯಾ ,
ನಮ್ಮ ಕಪಿಲಸಿದ್ಧ ಮಲ್ಲೇಶನನರಿವವರು
ಜ್ಞಾನದ ಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು

ಅಂಬಿಗರ ಚೌಡಯ್ಯ

೧. ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯಾ !
ಗಾಳಿ ನಿನ್ನಾಧೀನವಲ್ಲವಯ್ಯಾ !
ನಾಳೆ ತೂರಿಹೆನೆಂದರೆ ಇಲ್ಲವಯ್ಯಾ !
ಶಿವಶರಣ ಎಂಬುದೊಂದು ಗಾಳಿ ಬಿಟ್ಟಲ್ಲಿ
ಬೇಗ ತೂರೆಂದ ಅಂಬಿಗರ ಚೌಡಯ್ಯ

೨. ನಾರಿವಾಣ ತಂದು ನಾಯ ಮುಂದೆ ಹಾಕಿದರೆ
ಒಡೆಯಲೀಯದು ತಿನಲರಿಯದು
ಅದರೊಲು ಜಂಗಮದೊಳಗೆ ಲಿಂಗವನರಿಯದವ ಭಂಗಿಯ ತಿಂದಂತೆ
ತನ್ನ ಹೊದ್ದಿದ ತನ್ನ ತಾ ತಿಳಿಯದಿದ್ದರೆ –
ತೆಂಗ ತಿನಲರಿಯದ ನಾಯಂತೆ ಎಂದನಂಬಿಗ ಚೌಡಯ್ಯ

೩. ಬಡತನಕ್ಕೆ ಉಂಬುವ ಚಿಂತೆ,
ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ,
ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ,
ಮಕ್ಕಳಾದರೆ ಬದುಕಿನ ಚಿಂತೆ
ಬದುಕಿದರೆ ಕೇಡಿನ ಚಿಂತೆ ,
ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರನು ಕಂಡೆನು–
ಶಿವನ ಚಿಂತೆಯಲಿದ್ದರೊಬ್ಬರನು ಕಾಣೆನೆಂದಾತ ನಮ್ಮ
ಅಂಬಿಗರ ಚೌಡಯ್ಯ ನಿಜಶರಣನು

೪. ಅಱಿಯದ ಗುರು ಅಱಿಯದ ಶಿಷ್ಯ
ಇವರಿಬ್ಬರಿಗೇನಪ್ಪುದೋ ?
ಕುರುಡ ಕುರುಡನ ಕೈವಿಡಿದು ಪಥವ ನಡೆಯಬಲ್ಲಡೆ
ತೊಱೆಯಲದ್ದಿ ಹೋಹವನ ಈಸಲಱಿಯದವ
ತೆಗೆದಂತಾಯಿತ್ತೆಂದನಂಬಿಗ ಚೌಡಯ್ಯ

ಅಕ್ಕಮಹಾದೇವಿ

೧. ಹರನೇ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಸಿದ್ದೆ ನೋಡಾ !
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ,
ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು !
ಭಸ್ಮವನೆ ಪೂಸಿ, ಕಂಕಣವನೆ ಕಟ್ಟಿದರು –
ಚೆನ್ನಮಲ್ಲಿಕಾರ್ಜುನ ನನಗೆ ನೀನಾಗಬೇಕೆಂದು

೨. ಅಕ್ಕ ಕೇಳವ್ವ ಅಕ್ಕಯ್ಯ ನಾನೊಂದು ಕನಸ ಕಂಡೆ
ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ !
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ದೆರೆದೆನು

೩. ಚಿಲಿಮಿಲಿ ಎಂದೋಡುವ ಗಿಳಿಗಳಿರಾ !
ನೀವು ಕಾಣಿರೇ ? ನೀವು ಕಾಣಿರೇ ??
ಸರವರದೊಳಗಾಡುವ ಹಂಸೆಗಳಿರಾ !
ನೀವು ಕಾಣಿರೇ ? ನೀವು ಕಾಣಿರೇ ??
ಸರವೆತ್ತಿ ಪಾಡುವ ಕೋಗಿಲೆಗಳಿರಾ !
ನೀವು ಕಾಣಿರೇ ! ನೀವು ಕಾಣಿರೇ ??
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೇ ನೀವು ಕಾಣಿರೇ ??
ಗಿರಿಗಹ್ವರದೊಳಾಡುವ ನವಿಲುಗಳಿರಾ !
ನೀವು ಕಾಣಿರೇ ? ನೀವು ಕಾಣಿರೇ ??
ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ
ಬಲ್ಲಡೆ ನೀವು ಹೇಳಿರೇ ?

೪. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗಾನೊಲಿದೆನವ್ವಾ
ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ
ಎಲೆ ಅವ್ವಾ, ನೀನು ಕೇಳಾ ತಾಯೆ, ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು. ಕುಲ ಸೀಮೆ ಇಲ್ಲದ
ನಿಸ್ಸೀಮ ಚೆಲುವಂಗೆ ನಾನೊಲಿದೆ – ಇದು ಕಾರಣ
ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ.
ಈ ಸಾವ ಕೆಡುವ ಗಂಡನೊಯ್ದು ಒಲೆಯೊಳಗಿಕ್ಕು

೫. ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು !
ತೃಷೆಯಾದರೆ ಕೆರೆ – ಭಾವಿ– ಹಳ್ಳಗಳುಂಟು !
ಶಯನಕ್ಕೆ ಹಾಳು ದೇಗುಲವುಂಟು !
ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು

೬. ಕಾಯ ಕರ್ರನೆ ಕಂದಿದರೇನಯ್ಯ?
ಕಾಯ ಮಿರ್ರನೆ ಮಿಂಚಿದರೇನಯ್ಯ ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನನೊಲಿದ ಕಾಯ
ಎಂತಾದಡೆಮಗೇನಯ್ಯ ?

೭. ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು ನೋಡಾ !
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ ! !
ಲೋಕವೆಂಬ ಮಾಯೆಗೆ
ಶರಣಚಾರಿತ್ರ ಮರುಳಾಗಿ ತೋರುವುದು ನೋಡಾ !
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ!!

೮. ಬಿಟ್ಟೆನೆಂದರೆ ಬಿಡದೀ ಮಾಯೆ!
ಬಿಡದಿದ್ದರೆ ಬೆಂಬತ್ತಿತ್ತು ಮಾಯೆ!
ಯೋಗಿಗೆ ಯೋಗಿಣಿಯಾಗಿತ್ತು ಮಾಯೆ!
ಸವಣಂಗೆ ಸವಣಿಯಾಯಿತ್ತು ಮಾಯೆ!
ಯತಿಗೆ ಪರಾಕಿಯಾಯಿತ್ತು ಮಾಯೆ!
ನಿನ್ನ ಮಾಯೆಗೆ ನಾನಂಜುವಳಲ್ಲ
ಚೆನ್ನಮಲ್ಲಿಕಾರ್ಜುನದೇವ, ನಿಮ್ಮಾಣೆ

೯. ತರಣಿಯ ಹುಳು ತನ್ನ ಸ್ನೇಹದಿಂದ ಮನೆಯಮಾಡಿ
ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ!
ಮನ ಬಂದುದ ಬಯಸಿ ಬಯಸಿ ಬೇವುತ್ತಿರುವೆನಯ್ಯ!
ಅಯ್ಯ, ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನ ಮಲ್ಲಿಕಾರ್ಜುನ

೧೦. ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗೆ ಅಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯಮಾಡಿ
ಶಬ್ದಕ್ಕೆ, ನಾಚಿದೊಡೆಂತಯ್ಯ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

೧೧. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ!
ಎನಗುಳ್ಳುದೊಂದು ಮನ,
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ? ಚೆನ್ನಮಲ್ಲಿಕಾರ್ಜುನಯ್ಯ

೧೨. ಮನೆಮನೆದೆಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ!
ಬೇಡಿದರೆ ಇಕ್ಕದಂತೆ ಮಾಡಯ್ಯ!
ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯ!
ನೆಲಕ್ಕೆ ಬಿದ್ದರೆ ನಾನೆತ್ತಿಕೊಂಬುದಕೆ ಮುನ್ನವೇ
ಶುನಿ ಎತ್ತಿಕೊಂಬಂತೆ ಮಾಡಾ,
ಚೆನ್ನಮಲ್ಲಿಕಾರ್ಜುನಯ್ಯ!

೧೩. ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು,
ಕಾಣೆಲಾರೆನಯ್ಯ ನಿಮ್ಮುವನು!
ಭೇದಿಸಲಾರೆನಯ್ಯ ನಿಮ್ಮ ಮಾಯೆಯನು!
ಮಾಯದ ಸಂಸಾರದಲ್ಲಿ ಸಿಲುಕಿದೆನು!
ಎನ್ನ ದೇವ, ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ

ಅಮುಗೆ ರಾಯಮ್ಮ

೧. ಕಾದ ಹಾಲ ನೊಣ ಮುಟ್ಟಬಲ್ಲುದೆ?
ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?
ಮರುಜವಣಿಯ ಕಡ್ಡಿ ಕಯ್ಯಲಿದ್ದವಂಗೆ ಸರ್ಪ ಕಡಿಯಬಲ್ಲುದೆ?
ಈ ತ್ರಿವಿಧವನರಿದವಂಗೆ ಹಿಂದೆ ಶಂಕೆಯಿಲ್ಲ, ಮುಂದೆ ಭೀತಿಯಿಲ್ಲ
ಕಳಂಕು ಇಲ್ಲದೆ ಅಮುಗೇಶ್ವರಲಿಂಗವು ಅಪ್ಪಿಕೊಂಡಿತ್ತು

೨. ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನ ಮರಿ ಆನೆಯಾಗಬಲ್ಲುದೆ ?
ಸೀಳುನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ

ಆಯ್ದಕ್ಕಿ ಲಕ್ಕಮ್ಮ

೧. ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯ ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮುಗೇಶ್ವರಲಿಂಗಕ್ಕೆ ದೂರ ಮಾರಯ್ಯ

೨. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು ;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮುಗೇಶ್ವರ ಲಿಂಗವ ಮುಟ್ಟದ ಭಕ್ತಿ

ಅಭ್ಯಾಸಗಳು

ವಚನಗಳು

ಕವಿ-ಕಾವ್ಯ ಪರಿಚಯ

ಹನ್ನೆರಡನೆ ಶತಮಾನದಲ್ಲಿ ಶಿವಶರಣರು ಅಥವಾ ವಚನಕಾರರು ನಡೆಸಿದ ಸಮಾಜೋಧಾರ್ಮಿಕ ಚಳುವಳಿಯ ಅಂಗವಾಗಿ ಮೂಡಿ ಬಂದ ಸಾಹಿತ್ಯ ಪ್ರಕಾರವೇ ವಚನಗಳು. ವರ್ಗ, ವರ್ಣ, ಜಾತಿ, ಲಿಂಗ ಇತ್ಯಾದಿ ಭೇದಗಳ ಅಸಮಾನತೆಯ ವಿರುದ್ಧ ತಿರುಗಿಬಿದ್ದು ಸಮಾನತೆಯ ನೆಲೆಯಲ್ಲಿ ಜನರನ್ನು ಒಗ್ಗೂಡಿಸಬೇಕೆಂಬ ಉದ್ದೇಶದಿಂದ ವಚನ ಚಳುವಳಿ ಪ್ರಾರಂಭವಾಯಿತು. ಹೀಗಾಗಿ ಇದೊಂದು ಜನಪರ ಚಳುವಳಿಯಾಗಿದೆ. ಅಧ್ಯಾತ್ಮ, ಧರ್ಮ, ನೀತಿ ಇವುಗಳ ನಿರೂಪಣೆಯೇ ವಚನಗಳ ವಸ್ತು. ವಚನಗಳನ್ನು

'ಕನ್ನಡದ ಉಪನಿಷತ್ತು'ಗಳೆಂದು ಕರೆಯಲಾಗಿದೆ. ಇಷ್ಟದೈವಗಳನ್ನು ಅಂಕಿತಗಳನ್ನಾಗಿಸಿಕೊಂಡು ರಚಿತವಾಗಿರುವ ವಚನಗಳು ಶಿವಶರಣರ ಅನುಭವ, ಆಲೋಚನೆಗಳ ಪ್ರತಿಫಲವಾಗಿವೆ.

ಜೇಡರದಾಸಿಮಯ್ಯ :

ಜೇಡರದಾಸಿಮಯ್ಯ ಆದ್ಯವಚನಕಾರ. ಈತನಿಗೆ ದೇವರದಾಸಿಮಯ್ಯ ಎಂಬ ಹೆಸರೂ ಉಂಟು. ಗುಲ್ಬರ್ಗ ಜಿಲ್ಲೆಯ ಮುದನೂರು ದಾಸಿಮಯ್ಯನವರ ಸ್ಥಳ. ದುಗ್ಗಳೆ ಈತನ ಹೆಂಡತಿ. ಈ ದಂಪತಿಗಳಿಬ್ಬರೂ ತೃಪ್ತಿಯಲ್ಲಿ ಜೀವನ ನಡೆಸುತ್ತ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿಕೊಂಡವರು. 'ರಾಮನಾಥ' ದಾಸಿಮಯ್ಯನ ವಚನಾಂಕಿತವಾಗಿದೆ. ಈತನ ವಚನಗಳಲ್ಲಿ ದೇವರು, ಭಕ್ತಿಯಿಲ್ಲದ ಮನಸ್ಸಿನ ತಳಮಳ, ದೇಹದ ಅಸ್ತಿತ್ವ ಇವೇ ಮೊದಲಾದ ವಿಚಾರಗಳು ಅಭಿವ್ಯಕ್ತಿಗೊಂಡಿದ್ದು, ಚಿಕ್ಕ ವ್ಯಾಪ್ತಿಯಲ್ಲಿ ಅಪಾರವಾದ ಅರ್ಥಗಳು ತುಂಬಿಕೊಂಡಿವೆ.

ಅಲ್ಲಮಪ್ರಭು :

ಹನ್ನೆರಡನೆ ಶತಮಾನಕ್ಕೆ ಸೇರಿದ ಅಲ್ಲಮಪ್ರಭು ಬಹುದೊಡ್ಡ ಅನುಭಾವಿ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ ಹುಟ್ಟಿದ್ದ ಅಲ್ಲಮನ ವಚನಾಂಕಿತ ಗುಹೇಶ್ವರ. ಇವನು ಅನುಭವ ಮಂಟಪದ ಮೊದಲ ಅಧ್ಯಕ್ಷ. ಈತನ ವಚನಗಳು ಪ್ರಖರವಾದ ವೈಚಾರಿಕತೆ, ಆಳವಾದ ಅನುಭಾವಿಕತೆ, ಖಂಡಿತ ನಿಲುವಿಗೆ ಹೆಸರುವಾಸಿಯಾಗಿದೆ.

ಬಸವಣ್ಣ :

ಬಿಜಾಪುರ ಜಿಲ್ಲೆಯ ಬಾಗೇವಾಡಿ ಬಸವಣ್ಣನ ಜನ್ಮಸ್ಥಳ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಮೌಲಿಕವಾದ ವಚನ ರಚನೆಯ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಬಸವಣ್ಣನವರು ಏಕದೇವೋಪಾಸನೆ, ಅಸ್ಪೃಶ್ಯತಾ ನಿವಾರಣೆ, ಸ್ತ್ರೀ ಸಮಾನತೆ, ಕಾಯಕ ಮಹತ್ವ , ಮಾನವೀಯತೆ ಮೊದಲಾದ ಜೀವನ ಮೌಲ್ಯಗಳನ್ನು ತಮ್ಮ ವಚನಗಳ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ. 'ಕೂಡಲಸಂಗಮದೇವ' ಇವರ ವಚನಗಳ ಅಂಕಿತ. ಮನುಷ್ಯನಲ್ಲಿರಬೇಕಾದ ಮಾನವೀಯ ಸಹಜ ಗುಣಗಳು , ಕೋಪದಿಂದ ವ್ಯಕ್ತಿಯ ನಾಶ, ಶ್ರದ್ಧೆಯಿಲ್ಲದ ಭಕ್ತಿ ವ್ಯರ್ಥ, ಸಮಾಜದಲ್ಲಿರುವ ಲೋಪದೋಷಗಳು ಇವೇ ಮುಂತಾದ ವಿಚಾರಗಳನ್ನು ತಮ್ಮ ವಚನಗಳ ಮೂಲಕ ಹೇಳಿದ್ದಾರೆ.

ಸಿದ್ಧರಾಮಯ್ಯ:

೧೨ನೆ ಶತಮಾನದ ವಚನಕಾರರಾದ ಅಲ್ಲಮ, ಬಸವ, ಅಕ್ಕಮಹಾದೇವಿ ಇವರೇ ಮೊದಲಾದ ಶಿವಶರಣರ ಸಮಕಾಲೀನನಾದ ಸಿದ್ಧರಾಮಯ್ಯ ಶ್ರೇಷ್ಠ ವಚನಕಾರ. 'ಕಪಿಲಸಿದ್ಧ ಮಲ್ಲಿಕಾರ್ಜುನಾ' ಅಥವಾ 'ಕಪಿಲಸಿದ್ಧಮಲ್ಲಿನಾಥಾ' ಎಂಬುದು ಈತನ ವಚನಾಂಕಿತ. ಬಸವಣ್ಣನಂತೆ ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತಿದ್ದ ಸಿದ್ಧರಾಮನ ವಚನಗಳಲ್ಲಿ ದೈವದ ಸಾಕ್ಷಾತ್ಕಾರಕ್ಕಾಗಿ ಪಟ್ಟ ನೋವು, ಹಂಬಲಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕಪಿಲಸಿದ್ಧಮಲ್ಲಿನಾಥನ ಮಹಿಮೆಯನ್ನರಿತು ಆತನ ಕೃಪೆಗಾಗಿ ಹಂಬಲಿಸುವ – ಮನಸ್ಥಿತಿಯನ್ನು ಕಾಣಬಹುದಲ್ಲದೆ ಸತಿಪತಿಭಾವದ ವಚನಗಳೂ ಇವೆ.

ಅಂಬಿಗರ ಚೌಡಯ್ಯ:

ಧಾರವಾಡ ಜಿಲ್ಲೆಯ ಶಿವಪುರ ಎಂಬ ಸ್ಥಳದಲ್ಲಿ ಜನಿಸಿದ ಅಂಬಿಗರ ಚೌಡಯ್ಯ ೧೨ನೆ ಶತಮಾನಕ್ಕೆ ಸೇರಿದ ಒಬ್ಬ ವಚನಕಾರ. ದೋಣಿ ನಡೆಸುವ ಕಾಯಕ ಕೈಗೊಂಡಿದ್ದರಿಂದ ಈತನಿಗೆ ಅಂಬಿಗರ ಚೌಡಯ್ಯ ಎಂಬ ಹೆಸರು ಬಂದಿರಬೇಕು. ಕಾಯಕವನ್ನೇ ದೇವರೆಂದು ಭಾವಿಸಿ ಬದುಕಿದ ಚೌಡಯ್ಯನ ವಚನಗಳ ಅಂಕಿತ 'ಅಂಬಿಗರ ಚೌಡಯ್ಯ' ನೆಂದಾಗಿದೆ. ಪ್ರಸ್ತುತ ವಚನಗಳಲ್ಲಿ ಪೂಜೆ, ಅರಿವು, ಭಕ್ತನ ಮನಸ್ಥಿತಿ, ಸಮಾಜ ವಿಡಂಬನೆ ಇವೇ ಮುಂತಾದ ವಿಚಾರಗಳನ್ನು ಕಾಣಬಹುದು.

ಅಕ್ಕಮಹಾದೇವಿ :

ಅಕ್ಕಮಹಾದೇವಿ ಕನ್ನಡದ ಮೊದಲ ಕವಯಿತ್ರಿ. ಈಕೆ ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಹತ್ತಿರದ ಉಡುತಡಿ ಎಂಬ ಗ್ರಾಮದಲ್ಲಿ. 'ಚೆನ್ನಮಲ್ಲಿಕಾರ್ಜುನ' ಅಕ್ಕನ ವಚನಾಂಕಿತ. ಅಕ್ಕನ ವಚನಗಳಲ್ಲಿ ಸ್ವತಂತ್ರ ಮನೋಭಾವ, ಆಧ್ಯಾತ್ಮಿಕ ಹಂಬಲ, ಮಾಯೆಯ ಆಕರ್ಷಣೆಯಿಂದ ಬಿಡಿಸಿಕೊಳ್ಳುವಲ್ಲಿ ಉಂಟಾಗುವ ಮಾನಸಿಕ ತೊಳಲಾಟ, ಸಾಧನೆ, ಸಿದ್ಧಿಗಳನ್ನು ಕಾಣಬಹುದು. ಅಲ್ಲದೆ ಈಕೆ 'ಯೋಗಾಂಗ ತ್ರಿವಿಧಿ' ಎಂಬ ಕೃತಿಯನ್ನು ಬರೆದಿದ್ದಾಳೆ.

ಅಮುಗೆ ರಾಯಮ್ಮ :

ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಅಮುಗೆ ರಾಯಮ್ಮನೂ ಒಬ್ಬಳು. ಈಕೆ ಸೊನ್ನಲಿಗೆಯವಳು.(ಈಗಿನ ಸೊಲ್ಲಾಪುರ) ಪತಿ ಅಮುಗೆ ದೇವಯ್ಯ. ನೇಯ್ಗೆ ಇವರ ಕಾಯಕ. 'ಅಮುಗೇಶ್ವರ' ಇವಳ ವಚನಾಂಕಿತವಾಗಿದೆ. ಇವಳ ವಚನಗಳು ಕೆಚ್ಚು, ಧೈರ್ಯ, ಛಲ, ನಿಷ್ಠುರತೆ, ಆಧ್ಯಾತ್ಮ, ಸ್ವಾಭಿಮಾನ ವಿಡಂಬನೆಗಳಿಂದ ಕೂಡಿವೆ.

ಆಯ್ದಕ್ಕಿ ಲಕ್ಕಮ್ಮ :

ಶರಣರು ರೂಪಿಸಿದ ಕಾಯಕ ಮತ್ತು ದಾಸೋಹ ತತ್ತ್ವಗಳನ್ನು ತನ್ನ ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದ ಲಕ್ಕಮ್ಮ ಶರಣಶ್ರೇಷ್ಠ. ಆಯ್ದಕ್ಕಿ ಮಾರಯ್ಯನ ಹೆಂಡತಿ. ಮೂಲತಃ ಇವರಿಬ್ಬರು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು ಅಮರೇಶ್ವರ ಗ್ರಾಮದವರು. ಬಸವಣ್ಣನವರ ಕೀರ್ತಿ ಹರಡಿ ಇಲ್ಲಿಗೂ ತಲುಪಿ ಕಲ್ಯಾಣಕ್ಕೆ ಬಂದು ನೆಲೆ ನಿಲ್ಲುತ್ತಾರೆ. ಅಲ್ಲಿ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ಜಂಗಮದಾಸೋಹ ಮಾಡುವ ಕಾಯಕವನ್ನು ಕೈಗೊಳ್ಳುತ್ತಾರೆ.

ಲಕ್ಕಮ್ಮನ ೨೫ ವಚನಗಳು ಲಭ್ಯವಾಗಿವೆ. ಮಾರಯ್ಯಪ್ರಿಯಅಮರೇಶ್ವರಲಿಂಗ ಈಕೆಯ ವಚನಗಳ ಅಂಕಿತ. ಇವು ಸನ್ನಿವೇಶ ಪ್ರೇರಣೆಯಿಂದ ಹುಟ್ಟಿಕೊಂಡಿವೆ. ಬಿಡಿಬಿಡಿಯಾಗಿದ್ದರೂ ಅವುಗಳಲ್ಲಿ ಭಾವದ ಏಕಸೂತ್ರತೆಯನ್ನು ಗಮನಿಸಬಹುದಾಗಿದೆ.

ಕಠಿಣ ಪದಗಳ ಅರ್ಥ :

ಕುನ್ನಿ =ನಾಯಿ, ನಾಯಿಮರಿ; ಬಿನ್ನಾಣ =ಒನಪು, ವೈಯ್ಯಾರ; ತಿರಿ =ತಿರುಗು, ಭಿಕ್ಷೆಬೇಡು, ಕಳವೆ =ಭತ್ತ; ಅಳಿಮನದವ =ಕೀಳು ಮನಸ್ಸಿನವ ; ಬರುಸಟೆಗ= ದೊಡ್ಡಸುಳ್ಳುಗಾರ ; ಒಡಲು= ದೇಹ; ಪಾವಕ= ಬೆಂಕಿ; ಹಲ್ಲಣ = ಕುದುರೆಯ ಜೀನು, ತಡಿ; ಝುಂಕಿಸಿ= ಬೆದರಿಸಿ; ಕೃತಾರ್ಥ=ಸಾರ್ಥಕತೆ; ಡಂಬ =ಮೋಸ, ಸುಳ್ಳು ರೂಹು= ರೂಪ; ಬತ್ತೀಸ =ಮುವ್ವತ್ತೆರಡು; ಚೇಗು =ಹಾನಿ, ಕೇಡು ; ಹದುಳ =ಕ್ಷೇಮ ; ಮೈಸಿರಿ =ಸೌಂದರ್ಯ; ಹಾಗ= ಒಂದು ನಾಣ್ಯ ವಿಶೇಷ ; ರಜ =ಧೂಳು ; ವಿಷಯ = ಇಂದ್ರಿಯ ವಸ್ತುಗಳು ; ಶರಧಿ = ಸಮುದ್ರ ; ಅಳಿವು =ನಾಶ ; ನಖ =ಉಗುರು ; ಬೆಂತರ = ಪಿಶಾಚಿ ; ಘೃತ =ತುಪ್ಪ ; ಸುಲಿಪಲ್ಲ =ಹಾಲುಹಲ್ಲು ; ಭವ = ಹುಟ್ಟು ; ಕುರುಹು = ಚಿಹ್ನೆ ; ಬೆಂಬತ್ತು (ಬೆನ್+ಪತ್ತು) = ಬೆನ್ನುಹತ್ತು ; ಗುಂಡ= ಉಕ್ಕು ಅಥವಾ ಕಬ್ಬಿಣದ ಗೋಲಾಕಾರದ ವಸ್ತು; ಸಮ್ಯಜ್ಞಾನ= ಅರಿವು, ಆಚಾರಗಳಿಂದ ಕೂಡಿದ ತಿಳಿವಳಿಕೆ; ಗಾವಿಲ = ದಡ್ಡ.

ಟಿಪ್ಪಣಿಗಳು

ಲಿಂಗ : ಶಿವನೇ ಲಿಂಗ. ಭಕ್ತನು ಶಿವನನ್ನು ಪೂಜಿಸಬೇಕಾದದ್ದು ಗುರುವು ತನಗೆ ನೀಡಿದ ಇಷ್ಟಲಿಂಗದ ರೂಪದಲ್ಲಿ. ಇಷ್ಟಲಿಂಗವನ್ನು ಸದಾ ದೇಹದ ಮೇಲೆ ಧರಿಸಿರಬೇಕು. ಪೂಜಾಕಾಲದಲ್ಲಿ ಅದನ್ನು ಎಡ ಅಂಗೈ ಮೇಲೆ ಇಟ್ಟುಕೊಂಡು ಪೂಜಿಸಬೇಕು. ಲಿಂಗವು ಇಷ್ಟಲಿಂಗ, ಪ್ರಾಣಲಿಂಗ ಹಾಗೂ ಭಾವಲಿಂಗ ಎಂಬ ಮೂರು ರೂಪಗಳಲ್ಲಿ ಇರುತ್ತದೆ.

ಮಾಯೆ : ಅದ್ವೈತಿಗಳಿಗೆ ಜಗತ್ತು ಮಾಯೆ ಅಥವಾ ಸುಳ್ಳು. ವಚನಕಾರರಿಗೆ ಜಗತ್ತು ಸುಳ್ಳಲ್ಲ. ಕ್ರಿಯೆಗಳಲ್ಲಿ ಕೆಡುಕಿಗೆ ಪ್ರೇರಣೆ ನೀಡುವುದೇ ಮಾಯೆ. ಈ ಮಾಯೆಯಿಂದ ಮೊದಲು ದೂರವಾಗಲು ಭಕ್ತನು ಹವಣಿಸುತ್ತಾನೆ.

ಗುರು : ಮೋಕ್ಷಾಪೇಕ್ಷೆಯಿಂದ ಸಾಧನೆಗೆ ತೊಡಗುವ ಶಿಷ್ಯನಿಗೆ ಮಂತ್ರೋಪದೇಶವನ್ನು ನೀಡುವವನೇ ಗುರು. ಅರ್ಹತೆಯಿದ್ದವನೇ ಗುರುವಾಗ ಬೇಕೆಂಬುದನ್ನು ವಚನ ಧರ್ಮ ಒತ್ತಿ ಹೇಳುತ್ತದೆ. ಶಿಕ್ಷಾಗುರು, ದೀಕ್ಷಾಗುರು, ಜ್ಞಾನಗುರು ಎಂದು ಗುರುವಿನಲ್ಲಿ ಮೂರು ಭೇದಗಳುಂಟು.

ಜಂಗಮ : ಜ್ಞಾನವನ್ನು ಪಡೆದವನಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚರಿಸುವ ಸಾಧಕರಿಗೆ ನೆರವು ನೀಡುವವನು ಜಂಗಮ. ಜಂಗಮ ಎಂದರೆ ಸದಾ ಸಂಚರಿಸುವವನು ಎಂದು ಅರ್ಥ. ಜಂಗಮ ಎಂದರೆ ಶರಣ ಅಥವಾ ಶಿವನ ಮತ್ತೊಂದು ರೂಪ. ಸಾಧಕನಾದವನು ದೇಹವನ್ನು ಗುರುವಿಗೂ ಎಂದರೆ ಗುರುಸೇವೆಗೂ ಮನವನ್ನು ಲಿಂಗಕ್ಕೂ ಎಂದರೆ ಭಗವಂತನಿಗೂ ಧನವನ್ನು ಜಂಗಮನಿಗೂ ಎಂದರೆ ಭಕ್ತರ ಸೇವೆಗೂ ವಿನಿಯೋಗಿಸಬೇಕು.

ಸತಿಪತಿಭಾವ : ವೀರಶೈವ ಧರ್ಮದಲ್ಲಿ ಶಿವನನ್ನು ಗಂಡನೆಂದೂ, ಭಕ್ತನನ್ನು ಹೆಂಡತಿಯೆಂದೂ ಪರಿಗಣಿಸುವ ರೀತಿಯೆ ಸತಿಪತಿ ಭಾವ.

ಈಸಕ್ಕಿಯಾಸೆ ನಿಮಗೇಕೆ ? : ಇದು ಆಯ್ದಕ್ಕಿ ಲಕ್ಕಮ್ಮಳ ವಚನದಲ್ಲಿ ಕಂಡುಬರುವ ಒಂದು ಸಾಲು. ವಚನಕಾರರು 'ಕಾಯಕ' ಎಂದರೆ ದೇಹಶ್ರಮಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರು. ವ್ಯಕ್ತಿಯು ಎಂಥ ಉನ್ನತ ಮಟ್ಟದ ಆಧ್ಯಾತ್ಮಿಕ ಜೀವಿಯೇ ಆಗಿರಲಿ ಸೋಮಾರಿಯಾಗಿರದೆ ಇತರರು ಸಂಪಾದಿಸಿದ ಅನ್ನವನ್ನು ತಿನ್ನದೆ ತಾನೇ ಸ್ವತಃ ದುಡಿದು ಸಂಪಾದಿಸಬೇಕು. ಅಗತ್ಯಕ್ಕಿಂತಲೂ ಹೆಚ್ಚಿಗೆ ಸಂಪಾದಿಸಕೂಡದು. ಆಯ್ದಕ್ಕಿ

ಲಕ್ಕಮ್ಮಳ ಗಂಡನಾದ ಆಯ್ದಕ್ಕಿ ಮಾರಯ್ಯನು ಬಸವಣ್ಣನವರ ಮನೆಯ ಮುಂದೆ ಉದುರಿದ್ದ ಅಕ್ಕಿಯನ್ನು ಆಯ್ದು ತಂದು ಅದನ್ನು ಮಾರಿ ಸಂಸಾರ ನಡೆಸುತ್ತಿದ್ದನು. ಒಂದು ದಿನ ಆತನು ಅಗತ್ಯಕ್ಕಿಂತ ಹೆಚ್ಚಿಗೆ ಅಕ್ಕಿಯನ್ನು ಆಯ್ದು ತಂದ ಕಾರಣಕ್ಕೆ ಲಕ್ಕಮ್ಮಳು 'ಈಸಕ್ಕಿಯಾಸೆ ನಿಮಗೇಕೆ ?' ಅಂದರೆ ಇಷ್ಟೊಂದು ಅಕ್ಕಿಯ ಆಸೆ ನಿಮಗೇಕೆ ? ಎಂದು ತನ್ನ ಗಂಡನನ್ನು ಆಕ್ಷೇಪಿಸಿ ಕಾಯಕತತ್ವವನ್ನು ಮೆರೆಯುತ್ತಾಳೆ.

ಸಂದರ್ಭ ಬಯಸುವ ವಾಕ್ಯಗಳು

೧. ಅಳಿಮನದವನ ಭಕ್ತಿ ಇಂತಾಯಿತ್ತು.
೨. ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ.
೩. ನೀನು ಬೆರೆಸಿದ ಭೇದಕ್ಕೆ.
೪. ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ.
೫. ನಿಮಗಾಗಿ ಸತ್ತವರಾರನೂ ಕಾಣೆ.
೬. ಮನದ ಮುಂದಣ ಆಶೆಯೇ ಮಾಯೆ.
೭. ಕಾಲದ ಕಟ್ಟಳೆಯ ಕಲಿತನಕ್ಕೆ ಬೆರಗಾದೆ.
೮. ನುಡಿಯೊಳಗಾಗಿ ನಡೆಯದಿದ್ದಡೆ.
೯. ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ!
೧೦. ಹೊನ್ನಶೂಲದಲಿಕ್ಕಿದರೆಂಬೆ.
೧೧. ಅನ್ಯ ವಿಷಯಕ್ಕೆಳಸದಂತೆ ಇರಿಸು.
೧೨. ಮನೆಯೊಳಗೆ ಮನೆಯೊಡೆಯನಿಲ್ಲಾ.
೧೩. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
೧೪. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ.
೧೫. ದಯವೇ ಧರ್ಮದ ಮೂಲ.
೧೬. ನಿಧಾನವ ಕಾಯ್ದಿರ್ದ ಬೆಂತರನಂತೆ.
೧೭. ನಾ ಮುನಿದಡೆ ನೀ ಮುನಿಯೆ.
೧೮. ಹೆಣ್ಣು ಪ್ರತ್ಯಕ್ಷ.
೧೯. ಜ್ಞಾನಿಗೆ ಮಿಥ್ಯವೆ ಮಾಯೆ.

೧೦. ತೆಂಗ ತಿನಲರಿಯದ ನಾಯಂತೆ.

೨೧. ಶಿವನ ಚಿಂತೆಯಲಿದ್ದರೊಬ್ಬರನು ಕಾಣೆ.

೨೨. ಈಸಲಱಿಯದವ ತೆಗೆದಂತಾಯಿತ್ತು.

೨೩. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

೨೪. ನಿನ್ನ ಮಾಯೆಗೆ ನಾನಂಜುವಳಲ್ಲ.

೨೫. ಶಬ್ದಕ್ಕೆ ನಾಚಿದೊಡೆಂತಯ್ಯ.

೨೬. ಶುನಿ ಎತ್ತಿಕೊಂಬಂತೆ ಮಾಡಾ .

೨೭. ಹಿಂದೆ ಶಂಕೆಯಿಲ್ಲ, ಮುಂದೆ ಭೀತಿಯಿಲ್ಲ.

೨೮. ಗಾವಿಲರ ಮುಖವ ನೋಡಲಾಗದು.

೨೯. ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ.

ಪ್ರಶ್ನೆಗಳು :

೧. ಜೇಡರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ವಿಶೇಷತೆಯೇನು? ಪರಿಚಯ ಮಾಡಿಕೊಡಿ.

೨. ಭಕ್ತನಿಗೂ ಗುಹೇಶ್ವರ ಲಿಂಗಕ್ಕೂ ಇರಬೇಕಾದ ಸಂಬಂಧವನ್ನು ಅಲ್ಲಮಪ್ರಭುಗಳು ತಮ್ಮ ವಚನಗಳ ಮೂಲಕ ಹೇಗೆ ವ್ಯಕ್ತಪಡಿಸಿದ್ದಾರೆ? ವಿವರಿಸಿ.

೩. ಸಮಾಜದಲ್ಲಿರುವ ಲೋಪವನ್ನು ಕುರಿತಂತೆ ಬಸವಣ್ಣನವರ ನಿಲುವುಗಳೇನು? ಸ್ಪಷ್ಟಪಡಿಸಿ.

೪. ಸಿದ್ಧರಾಮಯ್ಯನ ವಚನ ವೈಶಿಷ್ಟ್ಯವೇನು? ವಿಶ್ಲೇಷಿಸಿ.

೫. ಅಂಬಿಗರ ಚೌಡಯ್ಯ ತನ್ನ ವಚನಗಳಲ್ಲಿ ಹೇಳಿರುವ ವಿಚಾರಗಳನ್ನು ವಿವರಿಸಿ.

೬. ಮಾಯೆಯ ಬಗ್ಗೆ ಅಕ್ಕಮಹಾದೇವಿಯವರ ನಿಲುವುಗಳೇನು?

೭. ಅಮುಗೆ ರಾಯಮ್ಮ ಮತ್ತು ಆಯ್ದಕ್ಕಿ ಲಕ್ಕಮ್ಮ ಇವರಿಬ್ಬರ ವಚನಗಳ ವಿಶಿಷ್ಟತೆಯನ್ನು ಕುರಿತು ಬರೆಯಿರಿ.

ಕೀರ್ತನೆಗಳು

ಹೃದಯ ಕಮಲದೊಳು ನೆಲೆಸಿರು

- ಶ್ರೀಪಾದರಾಯ

೧. ನಾನು ನಿನಗೇನು ಬೇಡುವುದಿಲ್ಲ ಎನ್ನ
ಹೃದಯ ಕಮಲದೊಳು ನೆಲೆಸಿರು ಹರಿಯೆ

ಶಿರ ನಿನ್ನ ಚರಣಕ್ಕೆರಗಲಿ ಚಕ್ಷು
ಎರಕದಿಂದಲಿ ನಿನ್ನ ನೋಡಲಿ ಹರಿಯೆ
ಕರಣ ಗೀತಂಗಳ ಕೇಳಲಿ ನಾಸಿಕ
ನಿರುಮಾಲ್ಯಾನುದಿನ ಘ್ರಾಣಿಸಲಿ ಹರಿಯೆ

ನಾಲಗೆ ನಿನ್ನ ಕೊಂಡಾಡಲಿ ಎನ್ನ
ತೋಳು ಕರಂಗಳ ಮುಗಿಯಲಿ ಹರಿಯೆ
ಕಾಲು ತೀರ್ಥಯಾತ್ರೆಗೆ ಪೋಗಲಿ ಮನ
ಖ್ಯಾಲಿನಿಂದಲಿ ನಿನ್ನ ಸ್ಮರಿಸಲಿ ಹರಿಯೆ

ಚಿತ್ತ ನಿನ್ನೊಳು ಮುಳುಗಾಡಲಿ ನಿನ್ನ
ಭಕ್ತ ಜನರ ಸಂಗ ದೊರಕಲಿ ಹರಿಯೆ
ವೃತ್ತಿ ತತ್ವಯೋಗಾಭ್ಯಾಸಕ್ಕಾಗಲಿ ರಂಗ
ವಿಠಲ ನಿನ್ನ ದಯವಾಗಲಿ ಹರಿಯೆ

ನಾ ನಿನ್ನ ಕಂದನಲ್ಲವೇನೆ

೨. ಗೊಲ್ಲತಿಯರು ಕೂಡಿ ಎನ್ನ ಮೇಲೆ ಇಲ್ಲದ ಸುದ್ದಿ ಪುಟ್ಟಿಸಿ
ಕಳ್ಳನೆಂದು ದೂರುತಾರೆ ಗೋಪಿ ಎನ್ನ ಕೊಲ್ಲಬೇಕೆಂಬ ಬಗೆಯೆ

ಹರವಿಯ ಹಾಲು ಕುಡಿಯಲು ಎನ್ನ ಹೊಟ್ಟೆ
ಕೆರೆಯೇನೇ ಹೇಳಮ್ಮಯ್ಯ ?

ಕರೆದು ಅಣ್ಣನ ಕೇಳುಂಟಾದರೆ
ಒರಳಿಗೆ ಕಟ್ಟು ಅಮ್ಮಯ್ಯ
ಮೀಸಲು ಬೆಣ್ಣೆಯ ಮೇಲುವುದದು ಎನಗೆ
ದೋಷವಲ್ಲವೇನಮ್ಮಯ್ಯ
ಆಸೆ ಮಾಡಿದರೆ ದೇವರು ಕಣ್ಣ
ಮೋಸದಿ ಕುಕ್ಕೋನಮ್ಮಯ್ಯ

ಅಟ್ಟವನೇರಿ ಹಿಡಿವುದು ಅದು ಎನಗೆ
ಕಷ್ಟವಲ್ಲವೆ ಹೇಳಮ್ಮಯ್ಯ ನೀ?
ಕೊಟ್ಟ ಹಾಲು ಕುಡಿಯಲಾರದೆ ನಾನು
ಬಟ್ಟಲೊಳಗಿಟ್ಟು ಪೋದೆನೆ

ಪುಂಡತನವ ಮಾಡಲು ನಾನು ದೊಡ್ಡ
ಗಂಡಸೇನೆ ಹೇಳಮ್ಮಯ್ಯ ? ಎನ್ನ
ಕಂಡವರು ದೂರುತಾರೆ ಗೋಪಮ್ಮ ನಾ ನಿನ್ನ
ಕಂದನಲ್ಲವೇನೆ ಅಮ್ಮಯ್ಯ ?

ಉಂಗುರದ ಕರದಿಂದ ಗೋಪಮ್ಮ ತನ್ನ
ಶೃಂಗಾರದ ಮಗನನೆತ್ತಿ
ರಂಗವಿಠಲನ ಪಾಡಿ ಉಡುಪಿನ ಉ–
ತ್ತುಂಗ ಕೃಷ್ಣನ ತೂಗಿದಳು

೧. ಮಾನವ ಜನ್ಮ ದೊಡ್ಡದು

-ಪುರಂದರದಾಸ

ಮಾನವ ಜನ್ಮ ದೊಡ್ಡದು – ಇದ
ಹಾನಿಮಾಡಲಿ ಬೇಡಿ ಹುಚ್ಚಪ್ಪಗಳಿರಾ

ಕಣ್ಣು ಕೈ ಕಾಲ್ಕಿವಿ ನಾಲಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಳಾಗುವರೆ ?
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ ?

ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ ?
ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲು ಬ್ಯಾಡಿ
ಏನು ಕಾರಣ ಯದುಪತಿಯನು ಮರೆತಿರಿ
ಧನಧಾನ್ಯ ಪುತ್ರರು ಕಾಯುವರೆ ?
ಇನ್ನಾದರೂ ಏಕೋಭಾವದಿ ಭಜಿಸಿರಿ
ಚನ್ನ ಶ್ರೀಪುರಂದರ ವಿಠಲರಾಯನ

೨. ಉದರ ವೈರಾಗ್ಯವಿದು

ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ

ಉದಯಕಾಲದಲೆದ್ದು ಗಡಗಡ ನಡುಗುತ
ನದಿಯಲಿ ಮಿಂದೆವೆಂದು ಹಿಗ್ಗುತಲಿ
ಮದ ಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು
ಬದಿಯಲ್ಲಿದ್ದವರಿಗಾಶ್ಚರ್ಯವ ತೋರುವು– ದುದರ

ಕಂಚುಗಾರನ ಬಿಡಾರದಂದದಿ
ಕಂಚು ಹಿತ್ತಾಳೆ ಪ್ರತಿಮೆಗಳ ನೆರಹಿ
ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ
ವಂಚನೆಯಿಂದಲಿ ಪೂಜೆ ಮಾಡುವು– ದುದರ

ಕರದಲಿ ಜಪಮಣಿ ಬಾಯಲಿ ಮಂತ್ರವು
ಅರಿವೆ ಮುಸುಕು ಮೋರೆಗೆ ಹಾಕಿ
ಪರಸತಿಯರ ಗುಣ ಮನದಲಿ ಸ್ಮರಿಸುತ
ಪರಮ- ವೈರಾಗ್ಯಶಾಲಿಯದೆನಿಸುವು - ದುದರ

ಬೂಟಕತನದಲಿ ಬಹಳ ಭಕುತಿ ಮಾಡಿ
ದಿಟನೀತ ಸರಿಯಾರಿಲ್ಲೆನಿಸಿ
ನಾಟಕ ಸ್ತ್ರೀಯಂತೆ ಬಯಲ ಡಂಬವ ತೋರಿ
ಊಟದ ಮಾರ್ಗದ ಜ್ಞಾನವಿದಲ್ಲದೆ

ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ
ಏನಾದರೂ ಹರಿ ಪ್ರೇರಣೆಯೆಂದು
ಧ್ಯಾನಿಸಿ ಮೌನದಿ ಪುರಂದವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲವು

೩. ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ

ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ - ಹರಿ
ಕೊಡದ ಕಾಲಕೆ ಬಾಯಬಿಡುವೆಲ್ಲೊ ಪ್ರಾಣಿ

ಹತ್ತು ಸಾವಿರ ಹೊನ್ನು ತಿಪ್ಪೇಲಿ ಹೂಳಿಟ್ಟು
ಮತ್ತೆ ಉಪ್ಪಿಲ್ಲದೆ ಉಂಡೆಲ್ಲೊ ಪ್ರಾಣಿ
ಹತ್ತು ಸಾವಿರ ಹೊನ್ನು ತಿಪ್ಪೇಲಿ ಪೋಪಾಗ
ಮೃತ್ತಿಕೆ ಬಾಯಲ್ಲಿ ಬಿತ್ತಲ್ಲೊ ಪ್ರಾಣಿ

ಹುಗ್ಗಿಯು ತುಪ್ಪವು ಅಗ್ಗವಾಗಿರಲಿಕ್ಕೆ
ಗುಗ್ಗರಿಯನ್ನವ ತಿಂದೆಲ್ಲೊ ಪ್ರಾಣಿ
ಹೆಗ್ಗಳದ ಭಾಗ್ಯವು ಘಳಿಗೇಲಿ ಪೋಪಾಗ
ಬುಗ್ಗೆಯ ಹೊಯ್ಕೊಂಡು ಹೋದೆಲ್ಲೊ ಪ್ರಾಣಿ

ನೆಂಟರಿಷ್ಟರು ಬಂದು ಮನೆಮುಂದೆ ಕುಳಿತಿರೆ
ಕುಂಟ ಸುದ್ದಿಯನಾಡಿದಲ್ಲೊ ಪ್ರಾಣಿ
ಕಂಟಕ ಯಮನವರು ಕುಂಟಿಸುತ್ತೆಳೆವಾಗ
ನಂಟ ಶ್ರೀ ಪುರಂದರವಿಠಲನು ಪ್ರಾಣಿ

೪. ಮಡಿ ಮಾಡುವ ಬಗೆ ಬೇರುಂಟು

ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ
ಮಡಿ ಮಾಡುವ ಬಗೆ ಬೇರುಂಟು
ಪೊಡವಿಪಾಲಕನ ಪಾದಧ್ಯಾನವನು
ಬಿಡದೆ ಮಾಡುವುದು ಅದು ಮಡಿಯು

ಬಟ್ಟೆಯ ನೀರೊಳಗದ್ದಿ ಒಣಗಿಸಿ
ಉಟ್ಟುಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮಕ್ರೋಧವ
ಬಿಟ್ಟು ನಡೆದರೆ ಅದು ಮಡಿಯು
ಇಚ್ಛೆಯಿಂದ ಮಲಮೂತ್ರ ಶರೀರವ
ನೆಚ್ಚಿ ತೊಳೆಯಲು ಅದು ಮಡಿಯೆ ?
ಅಚ್ಚುತಾನಂತನ ನಾಮವ ನೆನೆದು
ಸಚ್ಚಿತ್ತದಿ ನಡೆದರೆ ಅದು ಮಡಿಯು

ಹಸಿದು ಭೂಸುರರು ಮಧ್ಯಾಹ್ನ ಕಾಲದಿ
ಕುಸಿದು ಮನೆಗೆ ಬಳಲುತ ಬರಲು
ಹುಸಿಯತನದಿ ಗತಿಯಿಲ್ಲವೆಂದು ನೀ
ಹಸನಾಗಿ ಉಂಬುವುದು ಹೊಲೆ ಮಡಿಯು

ದಶಮಿ ದ್ವಾದಶಿ ಪುಣ್ಯಕಾಲದಲಿ
ವಸುದೇವ ಸುತನನು ಪೂಜಿಸದೆ
ದೋಷಕಂಜದೆ ಪರಾನ್ನವನುಂಡ್ಯಮ
ಪಾಶಕೆ ಬೀಳ್ವುದು ಅದು ಮಡಿಯೆ?

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕುತಿಯಲಿ
ಪರಿಪಾಲಿಸು ಎಂದು ಪುರಂದರ ವಿಠಲನ
ಇರುಳು ಹಗಲು ನೆನೆವುದೆ ಮಡಿಯು

೫. ಜಾಲಿಯ ಮರದಂತೆ

ಜಾಲಿಯ ಮರದಂತೆ ಧರೆಯೊಳು ದುರ್ಜನರು
ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ

ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ

ಊರಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ?
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ?

ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣ ಮಾತಿಗೆ ಕೊನೆಯಿಲ್ಲವು
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ

೬. ಬೇವು ಬೆಲ್ಲದೊಳಿಡಲೇನು ಫಲ

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ

ಕಪಟತನದಲಿ ಕಾಡುವ ಜನರನು
ಜಪವನು ಮಾಡಿದರೇನು ಫಲ
ಕುಪಿತತನವನು ಬಿಡದೆ ನಿರಂತರ
ಜಪವನು ಮಾಡಿದರೇನು ಫಲ

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

ಪತಿಗಳ ನಿಂದಿಪ ಸತಿಯರು ಬಹು ವಿಧ
ವ್ರತಗಳ ಮಾಡಿದರೇನು ಫಲ
ಅತಿಥಿಗಳೆಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನು ಫಲ

ಹೀನ ಗುಣಂಗಳು ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರ ವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ

೭. ಆಚಾರವಿಲ್ಲದ ನಾಲಗೆ

ಆಚಾರವಿಲ್ಲದ ನಾಲಗೆ – ನಿನ್ನ
ನೀಚ ಬುದ್ಧಿಯ ಬಿಡು ನಾಲಗೆ
ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ
ಚಾಚಿಕೊಂಡಿರುವಂಥ ನಾಲಗೆ

ಪ್ರಾತಃಕಾಲದೊಳೆದ್ದು ನಾಲಗೆ – ಸಿರಿ
ಪತಿಯೆನ್ನಬಾರದೆ ನಾಲಗೆ
ಪತಿತ ಪಾವನ ನಮ್ಮ ರತಿಪತಿ ಜನಕನ
ಸತತವು ನುಡಿ ಕಂಡ್ಯ ನಾಲಗೆ

ಚಾಡಿ ಹೇಳಲಿಬೇಡ ನಾಲಗೆ – ನಿನ್ನ
ಬೇಡಿಕೊಂಬುವೆನು ನಾಲಗೆ
ರೂಢಿಗೊಡೆಯ ಶ್ರೀರಾಮನ ನಾಮವ
ಪಾಡುತಲಿರು ಕಂಡ್ಯ ನಾಲಗೆ

ಹರಿಯ ಸ್ಮರಣೆ ಮಾಡು ನಾಲಗೆ ನರ
ಹರಿಯ ಭಜಿಸು ಕಂಡ್ಯ ನಾಲಗೆ
ವರದ ಪುರಂದರ ವಿಠಲರಾಯನ
ಚರಣಕಮಲವ ನೆನೆ ನಾಲಗೆ

೮. ರೊಕ್ಕ ಎರಡಕ್ಕು ದುಃಖ ಕಾಣಕ್ಕ

ರೊಕ್ಕ ಎರಡಕ್ಕು ದುಃಖ ಕಾಣಕ್ಕ
ಮಕ್ಕಳಮರಿಗಳ ಮಾಡೋದು ರೊಕ್ಕ
ಸಕ್ಕರೆ ತುಪ್ಪವ ತಿನಿಸೋದು ರೊಕ್ಕ
ಕಕ್ಕುಲಾತಿಯನು ಬಿಡಿಸೋದು ರೊಕ್ಕ
ಫಕ್ಕನೆ ಹೋದರೆ ಘಾತ ಕಾಣಕ್ಕ
ನೆಂಟರ ಇಷ್ಟರ ಮರೆಸೋದು ರೊಕ್ಕ
ಕಂಟಕಗಳ ಪರಿಹರಿಸೋದು ರೊಕ್ಕ
ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ
ತುಂಟತನಗಳನು ಬಲಿಸೋದು ರೊಕ್ಕ
ಇಲ್ಲದ ಗುಣಗಳ ತರಿಸೋದು ರೊಕ್ಕ
ಸಲ್ಲದ ನಾಣ್ಯವ ನಡಿಸೋದು ರೊಕ್ಕ
ಬೆಲ್ಲಕ್ಕಿಂತಲು ಬಹು ಸವಿ ರೊಕ್ಕ
ಇಲ್ಲದಿರಲು ಬಹು ದುಃಖ ಕಾಣಕ್ಕ

ಉಂಟಾದ ಗುಣಗಳ ಮರೆಸೋದು ರೊಕ್ಕ
ಬಂಟರನೆಲ್ಲರ ಬರಿಸೋದು ರೊಕ್ಕ
ಕಂಠಸರಿಗೆಯನು ಗಳಿಸೋದು ರೊಕ್ಕ
ಒಂಟೆ ಕುದುರೆ ಆನೆ ತರಿಸೋದು ರೊಕ್ಕ

ವಿದ್ಯದ ಮನುಜರ ಕರೆಸೋದು ರೊಕ್ಕ
ಹೊದ್ದಿದ ಜನರನು ಬಿಡಿಸೋದು ರೊಕ್ಕ
ಮುದ್ದು ಪುರಂದರವಿಠಲನ ಮರೆಸುವ
ಬಿದ್ದುಹೋಗೋ ರೊಕ್ಕವ ಸುಡು ನೀನಕ್ಕ.

೧. ತಲ್ಲಣಿಸದಿರು ತಾಳು ಮನವೆ

-ಕನಕದಾಸರು

ತಲ್ಲಣಿಸದಿರು ಕಂಡ್ಯ ತಾಳು ಮನವೆ ॥ ಪ ॥
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ ಅ.ಪ. ॥

ಬೆಟ್ಟದ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ ?
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದ ಮೇಲೆ
ಗಟ್ಯಾಗಿ ಸಲಹುವನು ಇದಕೆ ಸಂಶಯಬೇಡ

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ ?
ಪಡೆದ ಜನನಿಯ ತೆರದೆ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರವಿತ್ತವರು ಯಾರೊ ?
ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

೨. ಕುಲಕುಲ ಕುಲವೆಂದು ಹೊಡೆದಾಡದಿರಿ

ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ ॥ ಪ ।
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ

ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆಕಂಡ್ಯ ಮನುಜ

ಹರಿಯೇ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾದಿ ಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ

೩. ಕುಲವ್ಯಾವುದು ?

ಕುಲ ಕುಲ ಕುಲವೆನ್ನುತಿಹರು ॥ ಪ ॥
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ ? ॥ ಅ.ಪ. ॥

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗೆ ಅರ್ಪಿಸಲ್ಲಿಲವೆ ?
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳು ಭೂಸುರರು ಉಣಲಿಲ್ಲವೆ ?

ಮೃಗಗಳ ಮೈಯಲ್ಲಿ ಪುಟ್ಟಲು ಕಸ್ತೂರಿ
ತೆಗೆದು ಪೂಸುವರಯ್ಯ ದ್ವಿಜರೆಲ್ಲರು
ಬಗೆಯಿಂದ ನಾರಾಯಣನಾವ ಕುಲವಯ್ಯ
ಜಗದ ವಲ್ಲಭನಾವ ಕುಲ ಪೇಳಿರಯ್ಯ ?

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ ?
ಆತ ಮಹಾತ್ಮನು ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ ?

೪. ಎಲ್ಲಾರು ಮಾಡುವುದು ಹೊಟ್ಟೆಗಾಗಿ !

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು
ಬಟ್ಟೆಗಾಗಿ - ತುತ್ತು ಹಿಟ್ಟಿಗಾಗಿ ॥ ಪ ॥

ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ

ಚಂಡಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡ ತುಂಡ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ

ಅಂಗಡಿಗಳನು ಹೂಡಿ ವ್ಯಂಗ್ಯ ಮಾತುಗಳನಾಡಿ
ಭಂಗಬಿದ್ದು ಗಳಿಸುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ

ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಬೆಲ್ಲದಂತೆ ಮಾತನಾಡಿ ಎಲ್ಲರನು ಮರಳು ಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಕೊಟ್ಟಣವ ಕುಟ್ಟಿಕೊಂಡು ಕಟ್ಟಿಗೆಯ ಹೊತ್ತುಕೊಂಡು
ಕಷ್ಟಮಾಡಿ ತಿಂಬುವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ತಾಳ ದಂಡಿಗೆ ಶ್ರುತಿ ಮೇಳ ತಂಬೂರಿಗೊಂಡು
ಸೂಳೆಯಂತೆ ಕುಣಿವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಸಂನ್ಯಾಸಿ ಜಂಗಮಜೋಗಿ ಜಟ್ಟಿ ಮೊಂಡ ಬೈರಾಗಿ
ನಾನಾ ವೇಷಗಳೆಲ್ಲ ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಹಳ್ಳದಲ್ಲಿ ಕುಳಿತುಕೊಂಡು ಕಲ್ಲುದೊಣ್ಣೆ ಹಿಡಿದುಕೊಂಡು
ಕಳ್ಳತನವ ಮಾಡುವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಅಂದಣ ಪಲ್ಲಕ್ಕಿ ಏರಿ ಮಂದಿ ಮಾರ್ಬಲ ಕೂಡಿ
ಚಂದದಿಂದ ಮೆರೆವುದು ಹೊಟ್ಟೆಗಾಗಿ , ಗೇಣು ಬಟ್ಟೆಗಾಗಿ

ಉನ್ನತ ನೆಲೆಯಾದಿ ಕೇಶವನ ಧ್ಯಾನವನ್ನು
ಮನ ಮುಟ್ಟಿ ಮಾಡುವುದು ಮುಕ್ತಿಗಾಗಿ, ಆನಂದಕಾಗಿ

೫. ಆರು ಹಿತವರು ಎಂದು ನಂಬಬೇಡ

ಆರು ಹಿತವರು ಎಂದು ನಂಬಬೇಡ ||ಪ||
ಯಾರ್‍ಯಾರಿಗಿಲ್ಲ ಆಪತ್ತು ಬಂದೊದಗಿದಡೆ || ಅ.ಪ||

ಜನಕ ಹಿತದವನೆಂದು ನಂಬಬಹುದೇ ಹಿಂದೆ
ತನಯ ಪ್ರಹ್ಲಾದನಿಗೆ ಪಿತ ಮುನಿದನು
ಜನನಿಯೇ ರಕ್ಷಿಪಳೆಂತೆಂಬೆನೆ ಆ ಕುಂತಿ
ತನಯ ರಾಧೇಯನಿಗೆ ಎರಡೆಣಿಸಿದ ಮೇಲೆ

ಮಗನು ತೆತ್ತಿಗನೆನಲು ಕಂಸ ತನ್ನಯ ಪಿತನ
ನಿಗಡ ಬಂಧನದಿಂದ ಬಂಧಿಸಿದನು
ಜಗವರಿಯೆ ಸೋದರನು ಮಮತೆಯುಳ್ಳವನೆನಲು
ಹಗೆವೆರಸಿ ವಾಲಿಯನು ಅನುಜ ಕೊಲಿಸಿದ ಮೇಲೆ

ತನಗೆ ದೇಹಾನುಬಂಧಗಳೇ ಬಂಧುಗಳೆಂದು
ಮನದಿ ನಿಶ್ಚಯವಾಗಿ ನಂಬಬೇಡ
ಘನಕೃಪಾನಿಧಿ ಕಾಗಿನೆಲೆಯಾದಿ ಕೇಶವನ
ಅನುದಿನ ನಂಬಿದವಗಿಹಪರದಿ ಸುಖವು

೬. ಏನು ಇಲ್ಲದ ಎರಡು ದಿನದ ಸಂಸಾರ

ಏನು ಇಲ್ಲದ ಎರಡು ದಿನದ ಸಂಸಾರ || ಪ ||
ಜ್ಞಾನದಲಿ ದಾನ ಧರ್ಮವ ಮಾಡಿರಯ್ಯ || ಅ.ಪ.||

ಹಸಿದು ಬಂದವರಿಗೆ ಅಶನವೀಯಲು ಬೇಕು
ಶಿಶುವಿಗೆ ಪಾಲ್ಬೆಣ್ಣೆಯುಣಿಸಬೇಕು
ಹಸನಾದ ಭೂಮಿಯನು ಧಾರೆಯೆರೆಯಲು ಬೇಕು
ಪುಸಿಯಾಡದಲೆ ಭಾಷೆ ನಡೆಸಲೇ ಬೇಕು

ಕಳ್ಳತನಗಳ ಮಾಡಿ ಒಡಲು ಹೊರೆಯಲು ಬೇಡ
ತಳ್ಳಿಗಾರನು ಆಗಿ ತಿರುಗಬೇಡ
ಕುಳ್ಳಿರ್ದ ಸಭೆಯೊಳಗೆ ಕುತ್ಸಿತವು ಬೇಡ
ಉಳ್ಳವನು ನಾನೆಂದು ಉಬ್ಬಬೇಡ

ದೊರೆತನವು ಬಂದಾಗ ಕೆಟ್ಟನುಡಿಯಲು ಬೇಡ
ಸಿರಿ ಬಂದ ಕಾಲಕ್ಕೆ ಉರಿಯಬೇಡ
ಸಿರಿವಂತ ಶ್ರೀ ಕಾಗಿನೆಲೆಯಾದಿ ಕೇಶವನ
ಚರಣ ಕಮಲವ ಸೇರಿ ಸುಖಿಯಾಗು ಮನುಜಾ

ಹೆಳವನಕಟ್ಟೆ ಗಿರಿಯಮ್ಮ

೧. ಯಾತಕೆ ಮರುಳಾದಿ ಹಿಂಗೆ

ಯಾತಕೆ ಮರುಳಾದಿ ಹೀಂಗೆ ಎಲೆ ಮನವೆ
ಕಾಕು ಬುದ್ಧಿಯ ಬಿಡು ಬಿಡು ಸುಮ್ಮನೆ ಎಲೆ ಮನವೆ
ತನ್ನ ಬುದ್ಧಿ ತಲೆಗೆ ಸುತ್ತಿ ಸಂಸಾರ ಭ್ರಮೆಗೊಂಡು ಬಳಲದಿರು ಮನವೆ
ತೊಳಲದಿರು ನೆಲದಾಸೆಗೆ ನೀನದ ಅನುಸರಿಸಿ ಹರಿಯ ಸ್ಮರಿಸು ಮನವೆ॥ ೧ ॥

ದೇಹ ಸ್ಥಿರವಲ್ಲವು ಕಾಲನ ಬಾಧೆಗೊಳಗಾಗದಿರು ಮನವೆ
ಭೇದ ದುರ್ಗುಣವ ತ್ಯಜಿಸು ನೀ ಗೇರುಬೀಜದಂದದಿ ತಿಳಿಯೊ ಮನವೆ॥ ೨ ॥

ಅನ್ಯರ ಗುಣದೋಷವ ಎಣಿಸದಲೆ ನಿನ್ನಿರವ ನೋಡು ಕಂಡ್ಯ ಮನವೆ
ಬಣ್ಣಗಾರಿಕೆಯು ಬರಿದೆ ಔದಂಬ್ರ ಹಣ್ಣಿನಂತೀ ಕಾಯವು ಮನವೆ ॥ ೩॥

ಮಾಡು ಹರಿಸೇವೆಯನ್ನು ಮನದಣಿಯೆ ಬೇಡು ಹರಿಭಕ್ತಿಯನ್ನು
ಕೂಡು ಹೆಳವನಕಟ್ಟೆಯ ವೆಂಕಟನ ಬೇಡಿ ಮುಕ್ತಿಯನ್ನು ಪಡೆಯೋ ಮನವೆ॥

ಅಭ್ಯಾಸಗಳು

ಕೀರ್ತನೆಗಳು

ಕವಿ-ಕಾವ್ಯ ಪರಿಚಯ

ಕ್ರಿ.ಶ. ೧೫ನೆ ಶತಮಾನದಲ್ಲಿ ಮೂಡಿಬಂದ ದಾಸಸಾಹಿತ್ಯವು ೧೬ನೆ ಶತಮಾನದಲ್ಲಿ ಶಿಖರಪ್ರಾಯವನ್ನು ತಲುಪಿತು. ದೈವಸ್ತುತಿಯ ಬಿಡಿ ರಚನೆಗಳ ಸಮೂಹವೇ ಕೀರ್ತನೆಗಳು. ಕೀರ್ತನೆಗಳು ಭಕ್ತಿ ಪ್ರಧಾನವಾಗಿದ್ದರೂ, ದಾಸರ ಜೀವನಾನುಭವಗಳೆಲ್ಲ ಇಲ್ಲಿ ಮೂಡಿ ಬಂದಿವೆ. ಆತ್ಮ ವಿಮರ್ಶೆ, ಸಮಾಜ ವಿಮರ್ಶೆ, ಅಂತರಂಗದ ಭಕ್ತಿ ಇವೆಲ್ಲ ವಿಚಾರಗಳಿಂದ ಕೂಡಿರುವ ಕೀರ್ತನೆಗಳು ಪಲ್ಲವಿ, ಅನುಪಲ್ಲವಿ, ನುಡಿಗಳು ಎಂಬ ಮೂರು ಅಂಶಗಳಿಂದ ಕೂಡಿವೆ. ದಾಸಸಾಹಿತ್ಯದಲ್ಲಿ ಶ್ರೀಪಾದರಾಯರು, ಶ್ರೀವ್ಯಾಸರಾಯರು, ವಿಜಯದಾಸರು, ಪುರಂದರದಾಸರು ಹಾಗೂ ಕನಕದಾಸರು ಮುಖ್ಯರಾಗಿರುತ್ತಾರೆ.

ಶ್ರೀಪಾದರಾಯ :

ಶ್ರೀಪಾದರಾಯರು ಮುಳುಬಾಗಿಲ ಮಠದ ೯ನೆ ತಲೆಮಾರಿನ ಯತಿಯಾಗಿದ್ದವರು. ಇವರು ದೇವರನಾಮಗಳನ್ನಲ್ಲದೆ 'ಭ್ರಮರಗೀತೆ', 'ವೇಣುಗೀತೆ', 'ಗೋಪಿಗೀತೆ' ಗಳಂತಹ ಕೃತಿಗಳನ್ನು ರಚಿಸಿದ್ದಾರೆ. ಇವರ ಕಾಲ ೧೫ನೆ ಶತಮಾನ. 'ರಂಗವಿಠಲ' ಎಂಬುದು ಇವರ ಅಂಕಿತವಾಗಿದೆ. ಕೀರ್ತನೆಗಳ ಜೊತೆಗೆ ಸುಳಾದಿ ಉಗಾಭೋಗಗಳನ್ನು ರಚಿಸಿ ದಾಸಸಾಹಿತ್ಯದ ಮೂಲನಕ್ಷೆಯನ್ನು ರೂಪಿಸಿದ ವ್ಯಕ್ತಿ.

ಪುರಂದರದಾಸ :

ಹರಿದಾಸ ಪರಂಪರೆಯಲ್ಲಿ ಪುರಂದದಾಸರದು ಬಹು ದೊಡ್ಡ ಹೆಸರು. ೧೬ನೆ ಶತಮಾನದಲ್ಲಿ ಬಾಳಿ ಬದುಕಿದ ಪುರಂದರದಾಸರು ತಮ್ಮ ಗುರುವಿನಿಂದಲೇ 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಪ್ರಶಂಸೆ ಪಡೆದವರು. ಪೂರ್ವ ಜೀವನದಲ್ಲಿ ಇವರು ಶ್ರೀನಿವಾಸನಾಯಕನೆಂಬ ಹೆಸರಿನಿಂದ ಜಿಪುಣ ವ್ಯಾಪಾರಿಯಾಗಿದ್ದರೆಂದೂ ಯಾವುದೋ ಪ್ರಸಂಗದಲ್ಲಿ ಎಲ್ಲವನ್ನೂ ತ್ಯಾಗ ಮಾಡಿ ಹೆಂಡತಿ ಮಕ್ಕಳೊಡನೆ ವಿಜಯನಗರಕ್ಕೆ ಬಂದು ವ್ಯಾಸರಾಯರ ಶಿಷ್ಯರಾದರೆಂದೂ ಪ್ರತೀತಿ ಇದೆ. ಸಾವಿರಕ್ಕೂ ಮೇಲ್ಪಟ್ಟು ಕೀರ್ತನೆಗಳನ್ನು ರಚಿಸಿರುವ ಇವರು ಕರ್ನಾಟಕ ಸಂಗೀತದ ಪಿತಾಮಹರೆನಿಸಿಕೊಂಡಿದ್ದಾರೆ. 'ಪುರಂದರ ವಿಠಲ' ಇವರ ಕೀರ್ತನೆಗಳ ಅಂಕಿತ. ಇವರ ಕೀರ್ತನೆಗಳಲ್ಲಿ ದೈವಸ್ತುತಿ ಹಾಗೂ ಸಮಾಜ ವಿಮರ್ಶೆಯ ಅಂಶಗಳು ಪ್ರಧಾನವಾಗಿವೆ.

ಕನಕದಾಸ :

ಪುರಂದರದಾಸರ ಸಮಕಾಲೀನರಾದ ಕನಕದಾಸರು ಧಾರವಾಡ ಜಿಲ್ಲೆಯ ಬಾಡವೆಂಬ ಗ್ರಾಮದಲ್ಲಿ ಜನಿಸಿದರು. ಪುರಂದರ ದಾಸರಂತೆ ಇವರೂ ವ್ಯಾಸರಾಯರ ಶಿಷ್ಯರಾಗಿದ್ದರು. ಕನಕದಾಸರು ಕೀರ್ತನೆಗಳನ್ನಲ್ಲದೆ ನಳಚರಿತ್ರೆ, ಮೋಹನ ತರಂಗಿಣಿ, ಹರಿಭಕ್ತಸಾರ, ರಾಮಧಾನ್ಯಚರಿತೆ ಎಂಬ ಕೃತಿಗಳನ್ನೂ ರಚಿಸಿದ್ದಾರೆ. ಕನಕದಾಸರ ಕೀರ್ತನೆಗಳಲ್ಲಿ ಪ್ರಪಂಚಾನುಭವದ ಪರಿಪಕ್ವತೆ, ಸಮಾಜದ ಕುಂದು ಕೊರತೆಗಳನ್ನು ಖಂಡಿಸುವ ವಿಚಾರಗಳನ್ನು ಕಾಣಬಹುದು. ಇವರ ಅಂಕಿತ ಕಾಗಿನೆಲೆ ಆದಿಕೇಶವ.

ಹೆಳವನಕಟ್ಟೆ ಗಿರಿಯಮ್ಮ :

'ಹೆಳವನಕಟ್ಟೆ ರಂಗ' ಎಂಬ ಅಂಕಿತದೊಂದಿಗೆ ಕನ್ನಡದಲ್ಲಿ ಕೀರ್ತನೆಗಳನ್ನು, ದೀರ್ಘವಾದ ಕಾವ್ಯಗಳನ್ನು ರಚಿಸಿರುವ ಹೆಳವನಕಟ್ಟೆ ಗಿರಿಯಮ್ಮ ಅವರು ಹುಟ್ಟಿದ್ದು ಧಾರವಾಡ ಜಿಲ್ಲೆಯ ರಾಣಿಬೆನ್ನೂರಿನಲ್ಲಿ. ಎಳವೆಯಲ್ಲೇ ತಂದೆ - ತಾಯಿಯರನ್ನು ಕಳೆದುಕೊಂಡ ಗಿರಿಯಮ್ಮ ಆಧ್ಯಾತ್ಮದ ಕಡೆಗೆ ಒಲವು ತೋರಿದರು. ಹಿರಿಯರ ಒತ್ತಾಯಕ್ಕೆ ಮಣಿದು ಮದುವೆಯಾದರೂ ಗಂಡನಿಗೆ ಮರುಮದುವೆ ಮಾಡಿಸಿದ ಗಿರಿಯಮ್ಮ ತಾನು ಆಜೀವ ವಿರಾಗಿಣಿಯಾಗಿಯೇ ಉಳಿದರು. ಸಂಸಾರದಲ್ಲಿ ಇದ್ದು ಇಲ್ಲದಂತೆ ಬದುಕಿ ಊರಿಗೆ ಉಪಕಾರಿಯಾಗಿ ಹೆಸರು ಮಾಡಿದರು. ಮಲೆಬೆನ್ನೂರಿಗೆ ಸಮೀಪದ ಹೆಳವನಕಟ್ಟೆಯ ರಂಗನಾಥನೇ ಆಕೆಯ ಇಷ್ಟದೈವ ಹಾಗೂ ಅಂಕಿತ. ಇವರು ಗೋಪಾಲದಾಸರ ಸಮಕಾಲೀನರು. ಇವರ ಕಾಲ ಹದಿನೆಂಟನೆಯ ಶತಮಾನದ ಪೂರ್ವಾರ್ಧ (೧೭೫೦).

ಕಠಿಣ ಪದಗಳ ಅರ್ಥ :

ಚರಣ = ಪಾದ; ಚಕ್ಷು = ಕಣ್ಣು ; ಕರಣ , ಕರ್ಣ = ಕಿವಿ ; ಘ್ರಾಣಿಸು= ಮೂಸಿನೋಡು; ನಿರುಮಾಲ್ಯಾ = ನಿರ್ಮಾಲ್ಯ = ದೇವರಿಗೆ ಅರ್ಪಿಸಿದ್ದ ಹೂವು ; ಖ್ಯಾಲು = ಧ್ಯಾನ ; ಹರವಿ = ಗಡಿಗೆ ; ಡಂಬ = ಮೋಸ ; ತೋರಿಕೆ = ನಟನೆ ; ಮೃತ್ತಿಕೆ = ಮಣ್ಣು; ಹೆಗ್ಗಳದ =ಹೆಚ್ಚಾದ, ವಿಶೇಷವಾದ ; ಪೊಡವಿಪಾಲಕ =ಹರಿ, ವಿಷ್ಣು; ಭೂಸುರ = ಬ್ರಾಹ್ಮಣ ; ಹಸನಾಗಿ = ಚೆನ್ನಾಗಿ ; ಮೂಲಾಗ್ರ = ಬುಡದಿಂದ ತುದಿಯವರೆಗೆ ಷಟ್ + ರಸ = ಷಡ್ರಸ, ಆರು ಬಗೆಯ ರುಚಿ (ಉಪ್ಪು, ಖಾರ, ಸಿಹಿ,ಕಹಿ, ಹುಳಿ, ಒಗರು) ಕುಟಿಲ= ಕಪಟ ; ಸಟೆ = ಸುಳ್ಳು ; ಕುಪಿತತನ = ಕೋಪ ; ತಪ = ತಪಸ್ಸು ; ಘಾತಕ = ದ್ರೋಹ ; ಗೀತೆ = ಭಗವದ್ಗೀತೆ; ಎಡೆ = ನಡುವೆ, ಊಟ (ಎರಡೂ ಅರ್ಥಗಳು ಇಲ್ಲಿ ಅನ್ವಯವಾಗುತ್ತವೆ) ಗತಿ = ಸದ್ಗತಿ, ಮೋಕ್ಷ; ಹಿಂಗದೆ = ಬತ್ತದೆ, ನಾಶವಾಗದೆ; ನೆನೆ= ಸ್ಮರಿಸು , ಧ್ಯಾನಿಸು ; ರತಿಪತಿ = ಮನ್ಮಥ; ರೊಕ್ಕ =ದುಡ್ಡು; ಕಕ್ಕುಲಾತಿ =ಪ್ರೀತಿ, ಮಮಕಾರ; ಕಂಟಕ = ಕಷ್ಟ ಹೊಣೆಗೇಡಾಗಿ = ಜವಾಬ್ದಾರಿ ತಾಳಿ ; ಬೊಬ್ಬುಳಿ = ನೀರುಗುಳ್ಳೆ ; ಚಂಡ = ಶೂರ ; ಢಾಲು = ಗುರಾಣಿ ; ಭಂಗಬಿದ್ದು = ಕಷ್ಟಪಟ್ಟು ; ರೆಂಟೆ = ನೇಗಿಲು ; ಕೊಟ್ಟಣ ಕುಟ್ಟು =ಭತ್ತ ಕುಟ್ಟಿ ಅಕ್ಕಿ ಮಾಡು ; ದಂಡಿಗೆ = ವೀಣೆ ; ಅಂದಣ=ಪಲ್ಲಕ್ಕಿ ; ಆಪತ್ತು=ತೊಂದರೆ, ಕಷ್ಟ ; ತೆತ್ತಿಗ = ಸೇವಕ; ಅನುಜ =ತಮ್ಮ; ಅಶನ = ಅನ್ನನೀರು (ಆಹಾರ);

ಹಸನಾದ=ಸಾರವತ್ತಾದ; ಪುಸಿ>ಹುಸಿ=ಸುಳ್ಳು; ಕುತ್ಸಿತ= ನಿಂದೆ, ದೂಷಣೆ, ಕೆಡುಕು; ತತ್ತ್ವೇಂದ್ರಿಯ = ಜ್ಞಾನೇಂದ್ರಿಯ ; ಕಾಕು = ಕಷ್ಟ ತೊಂದರೆ, ಹಿಂಸೆ ; ಔದಂಬ್ರ ಔದುಂಬರ = ಅತ್ತಿಯ ಮರ, ಅತ್ತಿಯ ಹಣ್ಣು; ಕಾಯ = ಶರೀರ, ದೇಹ.

ಟಿಪ್ಪಣಿಗಳು :

ಕೀರ್ತನೆ :

ಹಾಡುವುದಕ್ಕಾಗಿಯೇ ರಚಿಸಿದ ರಾಗ ತಾಳಯುಕ್ತವಾದ ರಚನೆ. ಪ್ರಾರಂಭದಲ್ಲಿ ಒಂದು ಪಲ್ಲವಿಯೂ ಇದ್ದು, ಪ್ರತಿನುಡಿಯ ನಂತರ ಅದು ಪುನರುಚ್ಚಾರಗೊಳ್ಳುತ್ತದೆ. ಕೆಲವು ಕಡೆಗಳಲ್ಲಿ ಪಲ್ಲವಿಯನ್ನು ಅನುಸರಿಸಿ ಅನುಪಲ್ಲವಿಯೂ ಬರುವುದುಂಟು. ಮುಂದಿನ ಪ್ರತಿ ಪದ್ಯವನ್ನು ನುಡಿ ಅಥವಾ ಚರಣ ಎಂದು ಕರೆಯುತ್ತಾರೆ. ಕೀರ್ತನೆಯ ಕೊನೆಯ ಭಾಗದಲ್ಲಿ ರಚನೆಕಾರನ ಅಂಕಿತವಿರುತ್ತದೆ. ಪುರಂದರ ವಿಠಲ, ಕಾಗಿನೆಲೆ ಆದಿಕೇಶವ ಇತ್ಯಾದಿ.

ಉಗಾಭೋಗ :

ಇದು ಕಾವ್ಯದ ಒಂದು ರೂಪ. ದಾಸರ ಪದಗಳಲ್ಲಿ ಮುಖ್ಯವಾಗಿ ಜಗನ್ನಾಥದಾಸರು, ಪುರಂದರದಾಸರು ಮತ್ತು ಗೋಪಾಲದಾಸರು ಈ ಕಾವ್ಯ ರೂಪವನ್ನು ಬಳಸಿದ್ದಾರೆ. ದಾಸರ ಪದಗಳಂತಲ್ಲದೆ ಇದರ ರಚನೆ ತುಂಬಾ ದೀರ್ಘವಾಗಿರುತ್ತದೆ. ಅಲ್ಲದೆ ಇದರ ಹಾಡಿನ ಪರಿಯೂ ವಿಶಿಷ್ಟವಾಗಿರುತ್ತದೆ. ಇದು ಕರ್ನಾಟಕ ಸಂಗೀತ ಪರಂಪರೆಯಲ್ಲಿ ಕಂಡುಬರುವ ಒಂದು ಮಟ್ಟು ಅಥವಾ ಹಾಡಿನ ರೂಪ ಎಂದು ಹೇಳಲಾಗುತ್ತದೆ. ಉದ್ಗ್ರಾಹ ಮತ್ತು ಆಭೋಗ ಎಂಬ ಎರಡು ಸಂಗೀತ ರೂಪಗಳು ಸೇರಿ ಕನ್ನಡದಲ್ಲಿ ಉಗಾಭೋಗ ಎಂದಾಗಿರಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ.

ಸಂದರ್ಭಗಳು

೧. ನಾಲಗೆ ನಿನ್ನ ಕೊಂಡಾಡಲಿ

೨. ಚಿತ್ತ ನಿನ್ನೊಳು ಮುಳುಗಾಡಲಿ

೩. ಎನ್ನ ಹೊಟ್ಟೆ ಕೆರೆಯೇನೆ

೪. ನಾನು ದೊಡ್ಡ ಗಂಡಸೇನೆ

೫. ಉಣ್ಣದೆ ಉಪವಾಸ ಇರುವರೆ

೬. ಧನಧಾನ್ಯ ಪುತ್ರರು ಕಾಯುವರೆ?
೭. ನಾಟಕ ಸ್ತ್ರೀಯಂತೆ ಬಯಲು ಡಂಭವ ತೋರಿ
೮. ಉಪ್ಪಿಲ್ಲದೆ ಉಂಡೆಲ್ಲೊ ಪ್ರಾಣಿ
೯. ಕುಂಟ ಸುದ್ದಿಯನಾಡಿದಲ್ಲೊ ಪ್ರಾಣಿ
೧೦. ಕಾಮಕ್ರೋಧವ ಬಿಟ್ಟು ನಡೆದರೆ ಅದು ಮಡಿಯು
೧೧. ನೀ ಹಸನಾಗಿ ಉಂಬುವುದು ಹೊಲೆ ಮಡಿಯು
೧೨. ನಾರುವ ದುರ್ಗಂಧ ಬಿಡಬಲ್ಲುದೆ ?
೧೩. ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
೧೪. ನಿರಂತರ ತಪವನು ಮಾಡಿದರೇನು ಫಲ
೧೫. ಭೇದವ ಮಾಡುತ ಗತಿಯನು ಬಯಸಿದರೇನು ಫಲ
೧೬. ಚಾಡಿ ಹೇಳಲೀಬೇಡ ನಾಲಗೆ
೧೭. ಹರಿಯ ಭಜಿಸು ಕಂಡ್ಯ ನಾಲಗೆ
೧೮. ಕಕ್ಕುಲಾತಿಯನು ಬಿಡಿಸೋದು ರೊಕ್ಕ
೧೯. ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ
೨೦. ಬೆಲ್ಲಕ್ಕಿಂತಲು ಬಹು ಸವಿ ರೊಕ್ಕ
೨೧. ಗಟ್ಯಾಗಿ ಸಲಹುವನು
೨೨. ಅಡಿಗಡಿಗೆ ಆಹಾರವಿತ್ತವರು ಯಾರೊ ?
೨೩. ಜಲದ ಕುಲವನೇನಾದರೂ ಬಲ್ಲಿರ
೨೪. ಕಸ್ತೂರಿ ತೆಗೆದು ಪೂಸುವರಯ್ಯ
೨೫. ಬೆಲ್ಲದಂತೆ ಮಾತನಾಡಿ ಎಲ್ಲರನು ಮರಳುಮಾಡಿ
೨೬. ನಾನಾ ವೇಷಗಳೆಲ್ಲ ಹೊಟ್ಟೆಗಾಗಿ
೨೭. ರಾಧೇಯನಿಗೆ ಎರಡೆಣಿಸಿದ ಮೇಲೆ
೨೮. ಹಸಿದು ಬಂದವರಿಗೆ ಅಶನವೀಯಲು ಬೇಕು.
೨೯. ಕುಳ್ಳಿರ್ದ ಸಭೆಯೊಳಗೆ ಕುತ್ಸಿತವು ಬೇಡ
೩೦. ಸಿರಿಬಂದ ಕಾಲಕ್ಕೆ ಉರಿಯಬೇಡ.
೩೧. ಅನ್ಯರ ಗುಣದೋಷ ಎಣಿಸದಲೆ ನಿನ್ನಿರವ ನೋಡು ಕಂಡ್ಯ ಮನವೆ
೩೨. ಬಣ್ಣಗಾರಿಕೆಯು ಬರಿದೆ ಔದಂಬ್ರ ಹಣ್ಣಿನಂತೀ ಕಾಯುವ ಮನವೆ
೩೩. ದೇಹ ಸ್ಥಿರವಲ್ಲವು ಕಾಲನ ಬಾಧೆಗೊಳಗಾಗದಿರು ಮನವೆ
೩೪. ಭೇದ ದುರ್ಗುಣವ ತ್ಯಜಿಸು ನೀ ಗೇರುಬೀಜದಂದದಿ ತಿಳಿಯೊ ಮನವೆ

ಪ್ರಶ್ನೆಗಳು

೧. ಶ್ರೀಪಾದರಾಯರ ಕೀರ್ತನೆಗಳ ಕಾವ್ಯಸೌಂದರ್ಯವನ್ನು ಪರಿಚಯ ಮಾಡಿಕೊಡಿ

೨. ಮಾನವ ಜನ್ಮ ದೊಡ್ಡದೆಂದು ಪುರಂದರದಾಸರು ಪರಿಭಾವಿಸಲು ಕಾರಣವೇನು?

೩. ಪುರಂದರದಾಸರ ಕೀರ್ತನೆಗಳಲ್ಲಿ ಸಮಾಜ ವಿಡಂಬನೆ ಹೇಗೆ ಚಿತ್ರಿತಗೊಂಡಿದೆ?

೪. ಧರೆಯಲ್ಲಿರುವ ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಲು ಕಾರಣವೇನು?

೫. ನಾಲಗೆಯನ್ನು 'ಆಚಾರವಿಲ್ಲದ ನಾಲಗೆ' – ಎಂದು ನಿಂದಿಸಲು ಕಾರಣವೇನು?

೬. ರೊಕ್ಕ , ಮನುಷ್ಯನನ್ನು ಯಾವ್ಯಾವ ರೀತಿಯಲ್ಲಿ ಬದಲಾಯಿಸುತ್ತದೆಂದು ಪುರಂದರದಾಸರು ಹೇಳಿದ್ದಾರೆ

೭. ಜನರ ಡಾಂಭಿಕತೆಯನ್ನು ಪುರಂದರದಾಸರು ಹೇಗೆ ವಿಡಂಬಿಸಿದ್ದಾರೆ?

೮. ಬರಿಯ ಸ್ನಾನ – ಮೌನಾದಿಗಳು ವ್ಯರ್ಥವೆಂದು ದಾಸರು ಏಕೆ ಹೇಳಿದ್ದಾರೆ?

೯. ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ದೈವಭಕ್ತಿಯ ವಿವಿಧ ಸ್ವರೂಪಗಳನ್ನು ವಿವರಿಸಿ.

೧೦. ಕುಲದ ಬಗ್ಗೆ ಕನಕದಾಸರ ಅಭಿಪ್ರಾಯಗಳೇನು?

೧೧. ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ಸಮಾಜ ವಿಡಂಬನೆಯನ್ನು ಪರಿಚಯಿಸಿ.

೧೨. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' – ಕೀರ್ತನೆಯ ಸಾರವನ್ನು ಸಂಗ್ರಹಿಸಿ ಬರೆಯಿರಿ.

೧೩. 'ಯಾರ್‍ಯಾರಿಗಿಲ್ಲ ಆಪತ್ತು ಬಂದೊದಗಿದೊಡೆ ' – ಎಂಬಲ್ಲಿ ಕನಕದಾಸರು ಕೊಡುವ ಕಾರಣಗಳೇನು?

೧೪. 'ಏನು ಇಲ್ಲದ ಎರಡು ದಿನದ ಸಂಸಾರ'ದಲ್ಲಿ ಮನುಷ್ಯ ಹೇಗೆ ನಡೆದುಕೊಳ್ಳಬೇಕು?

೧೫. 'ಯಾತಕೆ ಮರುಳಾದಿ ಹೀಂಗೆ' –ಎಂಬ ಕೀರ್ತನೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮ ಹೇಳಿರುವ ವಿಚಾರಗಳೇನು?

೧೬. ಹರಿಸೇವೆ ಮಾಡಿ ಮುಕ್ತಿ ಹೊಂದಲು ಮನಸ್ಸು ಇರಬೇಕಾದ ಪರಿಯನ್ನು ಗಿರಿಯಮ್ಮ ತನ್ನ ತತ್ವಪದದಲ್ಲಿ ನಿರೂಪಿಸುವ ಬಗೆ ಹೇಗೆ ?

ತತ್ತ್ವಪದಗಳು

೧. ಬಯಲು ಭ್ರಾಂತು

ಮುಪ್ಪಿನ ಷಡಕ್ಷರಿ

ಏಕೆ ಬಯಲು ಭ್ರಾಂತು ನಿನಗೆ
ಸಾಕು ಪರರ ತಿಳುಹದಿರು ವಿ
ವೇಕಿಯಾಗಿ ನಿನ್ನ ನೀನೆ ತಿಳಿದು ನೋಡಲೈ

ತನ್ನ ತಾನೆ ಪಕ್ವಮಾದ
ಹಣ್ಣು ತೊಟ್ಟು ಕಳಚಿಬಿದ್ದು
ಮುನ್ನಿನಂತೆ ಹೋಗಿ ತೊಟ್ಟು ಹತ್ತಬಲ್ಲದೆ ?
ಬನ್ನಬಡುವ ಜನ್ಮ ತೀರಿ
ತನ್ನ ನಿಜವ ಅರಿದ ಆತ್ಮ
ಮುನ್ನಿನಂತೆ ಲೋಕದವರ ಕೂಡಬಲ್ಲನೇ ?

ಹಸಿಯ ಕಾಯ ಕೊಯ್ದು ತಂದು
ಬಿಸಿಯ ತೋರಿ ಮುಸುಕಿ ಇಡಲು
ನಸಿದು ಹೋದುದಲ್ಲದದುವೆ ಪಕ್ವವಪ್ಪುದೇ ?
ವಸುಧೆಯಾತ್ಮನನ್ನು ತಂದು
ಸಸಿನೆ ಇಟ್ಟು ಬೋಧಿಸಿದಡೆ
ಅಸಮಜ್ಞಾನಿಯಾಗಿ ಶರಣರೊಳಗೆ ಬೆರೆವನೇ ?

ಸತ್ಯಜ್ಞಾನ ತಪವು ಮೌನ
ನಿತ್ಯಕ್ಷಮೆಯು ದಮೆಯು ಶಾಂತಿ
ಉತ್ತಮತ್ವವಿರಲು ಪಕ್ವವೆಂದು ತಿಳಿವುದು
ಒತ್ತಿ ನೋಡಲವರ ಮನವ
ಮತ್ತೆ ಬೈಯ್ದು ಹೊಯ್ದು ನೋಡೆ
ಚಿತ್ರದಲ್ಲಿ ಸ್ಪಷ್ಟವಾಗಿ ಕಲಕದಿರ್ಪುದು

ಹುಸಿಯು ಹುಳುಕು ಡಂಭಕತ್ವ
ಕೊಸರು ಕೋಪ ನೀಚಹೃದಯ
ನುಸುಳು ವಿಷಯ ವಿರಲಪಕ್ವವೆಂದು ಅರಿವುದು
ಸಸಿನೆ ಅವನ ಕೆಣಕಿ ನೋಡೆ
ಕಿಸುಕುಳತ್ವ ತೋರುತಿಹುದು
ಒಸೆದು ಅವರ ತಿಳುಹೆ ಸ್ವಸ್ಥಶರಣರಪ್ಪರೆ ?

ಇವರ ಭೇದ ಅರಿಯದನಕ
ಅವರ ತಿಳುಹಿ ಫಲವದೇನು?
ಭವಕೆ ಹೋಗಲವರು ತನಗೆ ಕೊರತೆಯಪ್ಪುದೇ ?
ಭವದಕಡೆಯ ಕಂಡ ಬಳಿಕ
ಶಿವನ ನಿಜವು ತಾನೆಯಹುದು
ಶಿವ ಷಡಕ್ಷರಾಂಕ ನಿಮ್ಮ ಶರಣಪ್ಪರು

೧. ಶರೀರನೆಂದೆಂಬುವ ಹೊಲ

ಸರ್ವಭೂಷಣ ಶಿವಯೋಗಿ

ಶರೀರನೆಂದೆಂಬುವ ಹೊಲನ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೋ

ಶಮದಯೆಯೆಂಬುವ ಎರಡೆತ್ತುಗಳ ಹೂಡಿ
ವಿಮಲ ಮಾನಸವ ನೇಗಿಲನೆ ಮಾಡಿ
ಮಮಕಾರವೆಂದೆಂಬ ಕರಿಕೆಯ ಕಳೆದಿಟ್ಟು
ಸಮತೆಯೆಂದೆಂಬ ಗೊಬ್ಬರವ ಚೆಲ್ಲಿ

ಗುರುವರನ ಉಪದೇಶವೆಂಬ ಬೀಜವ ಬಿತ್ತಿ
ಮೆರೆವ ಸಂಸ್ಕಾರವೃಷ್ಟಿಯ ಬಲದಿ
ಅರಿವೆಂಬ ಪೈರನೆ ಬೆಳೆಸುತ ಮುಸಗಿರ್ದ
ದುರಿತ ದುರ್ಗುಣವೆಂಬ ಕಳೆಯ ಕಿತ್ತು

ಸ್ಥಿರಮುಕ್ತಿಯೆಂದೆಂಬ ಧಾನ್ಯವ ಬೆಳೆದುಂಡು
ಪರಮಾನಂದದೊಳು ತಣ್ಣನೆ ದಣಿದು
ಗುರುಸಿದ್ಧ ನಡಿಗಳಿಗೆರಗುತ್ತೆ ಭವವೆಂಬ
ಬರವನು ತಮ್ಮ ಸೀಮೆಗೆ ಕಳುಹಿ

೨. ಅನುಭಾವದಡಿಗೆ

ಅನುಭಾವದಡಿಗೆಯ ಮಾಡಿ ಅದ –
ಕ್ಕನುಭಾವಿಗಳು ಬಂದು ನೀವೆಲ್ಲ ಕೂಡಿ

ತನುವೆಂಬ ಭಾಂಡವ ತೊಳೆದು ಕೆಟ್ಟ –
ಮನದ ಜಂಜಡವೆಂಬ ಮುಸುರೆಯ ಕಳೆದು
ಘನವೆಂಬ ಮನೆಯನೆ ಬಳಿದು ಅಲ್ಲಿ
ಬಿನುಗು ತ್ರಿಗುಣವೆಂಬ ಒಲೆಗುಂಡ ತುಳಿದು
ವಿರತಿಯೆಂಬುವ ಮಡಿಯುಟ್ಟು ಪೂರ್ಣ
ಹರಿಭಕ್ತಿಯೆಂಬ ನೀರಿನ ಎಸರಿಟ್ಟು

ಅರಿವೆಂಬ ಬೆಂಕಿಯ ಕೊಟ್ಟು ಮಾಯಾ
ಮರವೆಯೆಂಬುವ ಕಾಷ್ಟಗಳನ್ನೆಲ್ಲ
ವರವೆಂಬ ಸಾಮಗ್ರಿಗೂಡಿ ಸಾರ
ತರ ಮೋಕ್ಷವೆಂದೆಂಬ ಪಾಕವ ಮಾಡಿ
ಹರಶರಣರು ಸವಿದಾಡಿ ನಮ್ಮ
ಗುರುಸಿದ್ಧ ದೇವನ ಚರಣವ ಪಾಡಿ

೧. ಮಾತಿನ ನೀತಿ ತಿಳಿಯಬೇಕು

ಕಡಕೋಳ ಮಡಿವಾಳಪ್ಪ

ಮೂಕನಾಗಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು
ಕಾಕಬುದ್ಧಿ ಕಡಿಗಿ ಹಾಯಿಸಲಾರದ
ಲೋಕದ ಗೊಡವಿ ನಿನಗ್ಯಾತಕ ಬೇಕು

ಮಾತು ಕಲಿಯಬೇಕು
ಮಾತಿನ ನೀತಿ ತಿಳಿಯಬೇಕು
ಮಾತು ಬಲ್ಲ ಮಹಾಜ್ಞಾನಿಯ ಕೂಡ
ಕೋತಿ ಹಂಗ ಬೆನ್ನು ಹತ್ತಿರಬೇಕು

ತತ್ವ ಕಲಿಯಬೇಕು
ತತ್ವದ ಅರ್ಥ ತಿಳಿಯಬೇಕು
ಮಾತು ಬಲ್ಲ ಮಹಾಜ್ಞಾನಿಯ ಕೂಡ
ಕತ್ತಿ ಹಾಂಗ ಬೆನ್ನು ಹತ್ತಿರಬೇಕು
ಆಸಿ ಅಳಿಯ ಬೇಕು ಮನಸಿನ
ಹೇಸಿಗೆ ತೊಳಿಯಬೇಕು
ಆಸಿ ತಿಳಿದು ಹೇಸಿಗೆ ತೊಳೆದು
ಈಶ ಮಹಾಂತನ ಪಾದ ಹಿಡಿಯಬೇಕು

೨. ಸುಳ್ಳೇ ಶೀಲ ಮಾಡ್ತೀರಿ

ಬಾಯಿಲೊಂದು ಆಡ್ತೀರಿ ! ಮನಿಸಿನೊಳಗೊಂದ ಮಾಡ್ತೀರಿ
ಬರೆದಿಟ್ಟದ್ದೋದಿಕೊಂಡು
ಭ್ರಾಂತಿಗೆಟ್ಟು ಹೋಗುತೀರಿ

ಶೀಲವಂತರಂತೀರಿ । ಸುಳ್ಳೆ ಶೀಲ ಮಾಡ್ತೀರಿ
ಸಂತೆ ಸಂಗ ಕಟ್ಟಿಕೊಂಡು
ಸತ್ಯನಾಶಾಗಿ ಹೋಗುತೀರಿ

ಮುಸಲ್ಮಾನರಂತೀರಿ । ತುರ್ತ ಸುಂತೀ ಮಾಡ್ತೀರಿ
ಉಸಲ ಬಿಟ್ಟು ಫಾತ್ಯಾಕೊಟ್ಟು
ಬಿಸ್ಮಿಲ್ಲಾ ಅಂತೀರಿ

ಬ್ರಾಹ್ಮಣರಂತೇಳ್ತೀರಿ । ನೀರಾಗ ಮುಣಮುಣಿಗೇಳ್ತೀರಿ
ಬೋಳ್‌ನೆತ್ತಿಗೆ ಗಂಟ್ಹಾಕಿ
ದೀಪ ಬಡಕೊಂಡು ಹೋಗ್ತೀರಿ

ಸಾಧುರಂತ ಹೇಳ್ತೀರಿ । ಸೋಹಂ ಭಜನಿ ಮಾಡ್ತೀರಿ
ಅಟ್ಟ ದುಡ್ಡಿಗೆ ಆಶಾ ಮಾಡಿ
ದಡ್ಡರಾಗಿ ಹೋಗ್ತೀರಿ

ಪಟ್ಟಚರಮೂರ್ತಿ ಅಂತೀರಿ । ಪಾರಮಾರ್ಥ ಹೇಳ್ತೀರಿ
ಪರನಾರಿ ಸ್ನೇಹವ ಮಾಡಿ
ಗುಡ್ಡದ ಮಹಂತಗ ಹಾಕ್ತೀರಿ

೧. ಅಗಸರೋ ನಾವು

ಕೂಡಲೂರ ಬಸವಲಿಂಗ ಶರಣರು

ಅಗಸರೋ ನಾವು ಅಗಸರೋ
ಮಾಸಿದ ಅರವಿಯ
ಸೋಸಿ ಗಂಜಿ ಮಾಡುವಂಥ
ಅಗಸರೋ ನಾವು ಅಗಸರೋ

ಬ್ರಹ್ಮಾಂಡವೆಂತೆಂಬ ಹರವಿಯ ಹೂಡಿ
ಪಿಂಡಾಂಡವೆಂತೆಂಬ ಬಟ್ಟೆಯ ಕುದಿಸಿ
ಕುರುಹು ಎಂಬೊ ಸವಳು ಸುಣ್ಣವ ಹಚ್ಚಿ
ಮುರುಕಿ ಮೈಲಿಗೆ ತೊಳೆದು ಮುಂದಕ್ಕೆ ಚಾಚುವಂಥ

ತಾರಕ ಬ್ರಹ್ಮನ ಬಂಡೆ ನೀರ್ದಂಡೆ ಮಾಡಿ
ಮೂರು ಮೂರುತಿ ಎಂಬ ಏಟನೆ ಹೊಡೆದು
ಬೇರೆ ಪನ್ನೀರಲ್ಲಿ ದೂರ ದೂರ ಸೆಳೆದು
ಭೇರಿನಾದದ ಬಿಸಿಲಿಗೆ ಒಣಗಿಸುವಂಥ

ಘಟ್ಟಿಸಿ ಗಳಿಗೆ ಮಾಡಿ ಮನೆಗೆ ತಂದು
ಮೂರು ಮುಂಡಾಸುಗಳ ಮೂಲಿಗೆ ಇಟ್ಟು
ಆರು ಹಚ್ಚಡವ ಹಾರಿಸಿ ಬಿಟ್ಟೆವು
ಧೀರ ಕೂಡಲೂರೇಶನ ಮೆಚ್ಚಿಸುವಂಥ

೨. ಪಂಡಿತ

ಪಂಡಿತ ಪಂಡಿತರೆಂದು ಹೇಳಿಕೊಂಬರು ಜಗದಿ
ಪಂಡಿತರಿವರೆಂಥ ಪಂಡಿತರೇ ?
ಪಂಡಿತರಾದವರು ಪರಬ್ರಹ್ಮ ತಾವೆಂದು
ಖಂಡಿತ ತಿಳಿಯಬೇಕು ಪಂಡಿತರವರೇ

ವಾಸನೆ ಅಳಿಯದೆ ಕ್ಲೇಶವ ಕಳೆಯದೆ
ಪಾಶಬದ್ಧರೆಲ್ಲ ಪಂಡಿತರೆ ?
ಈಶನು ತಾನೆಂದು ತಿಳಿಯದ ಮೂರ್ಖರು

ಆಸೆಬುರುಕರೆಲ್ಲ ಪಂಡಿತರೇ ?
ನಾಶವಾಗುವ ದೇಹ ಸ್ಥಿರವಾಗಿ ನಂಬಿದ
ಹೇಸಿ ಮನುಜರೆಲ್ಲ ಪಂಡಿತರೆ ?

ಅಮರ ಛಂದಸ್ಸು ನಿಘಂಟು ನಾನಾರ್ಥ
ಸಮನಿಸದೋದಲು ಪಂಡಿತರೆ ?
ಭೂಮಿಯಲಿ ಪರಿಪರಿ ಗ್ರಂಥವ ಬರೆದು
ಅಸಮರೆನಿಸಿದವರೆಲ್ಲ ಪಂಡಿತರೆ ?
ರಮಣಿಗೆ ಮನಸೋತು ನಾನಾ ಭಂಗಪಡುತಲಿ
ಯಮನ ವಶವಾದವರೆಲ್ಲ ಪಂಡಿತರೆ ?

ಕುಲಛಲಕೆ ಹೋರಾಡಿ ನೆಲಗತ್ತಲಾಗುವ
ಛಲಮಾರಿಗಳೆಲ್ಲ ಪಂಡಿತರೆ ?
ಹಲವು ದೇಶವ ತಿರುಗಿ ನಾನಾ ಭಾಷೆಯ ಕಲಿತು
ಬಲು ಶಾಣೆರಾದವರು ಪಂಡಿತರೆ ?
ಸುಲಭದಿ ಸೂಕ್ಷ್ಮದಿ ನಿಜವಸ್ತು ತಿಳಿಯದ
ಬಲು ಡಾಂಭಿಕರಿವರೆಲ್ಲ ಪಂಡಿತರೆ ?

ಅಕ್ಷರ ಕನ್ನಡ ಆರ್ಯ ಸಂಸ್ಕೃತ ತೆಲುಗು
ಶಿಕ್ಷಕರಿವರೆಲ್ಲ ಪಂಡಿತರೆ ?
ಲಕ್ಷ್ಯವ ಹಿಡಿದು ನಿರ್ಲಕ್ಷ್ಯಕ್ಕೆ ಬಾರದ
ಭಿಕ್ಷುಕರಿವರೆಲ್ಲ ಪಂಡಿತರೆ ?
ಸಾಕ್ಷಾತ್ ಕೂಡಲೂರೇಶನ ಹೊಂದದೆ ಇರುವ
ಮೋಕ್ಷಗೇಡಿಗಳೆಲ್ಲ ಪಂಡಿತರೆ ?

೧. ಬಿದ್ದಿಯಬೇ ಮುದುಕಿ

ಶಿಶುನಾಳ ಶರೀಫ

ಬಿದ್ದಿಯಬೇ ಮುದುಕೀ
ನೀ ದಿನ ಹೋದಾಕಿ ಇರು ಬಲು ಜ್ವಾಕಿ
ಬಿದ್ದಿಯಬೇ ಮುದುಕೀ ||ಪಲ್ಲ|

ಸದ್ಯಕಿರು ಹುಲಗುರು ಸಂತಿ
ಗದ್ದಲದೊಳಗ ಯಾತಕ ನಿಂತಿ
ಬಿದ್ದು ಒದ್ದಾಡಿದರ ಎಬಿಸುವರ್‍ಯಾರಿಲ್ಲ
ಬುದ್ದಿಗೇಡಿ ಮುದುಕೀ ನೀನು !
ಬಿದ್ದಿಯಬೇ ಮುದುಕೀ || ೧ ||

ಬುಟ್ಟಿಯೊಳಗ ಪಟ್ಟೇವನಿಟ್ಟಿ
ಉಟ್ಟಿರದೊಳಗ ರೊಕ್ಕಾನಿಟ್ಟಿ
ಕೆಟ್ಟಗಂಟೀಚೌಡ್ಯಾರು ಬಂದು
ಕತ್ತರಿಸಿಕೊಂಡು ಹೋದಾರ ಮುದುಕೀ ।
ಬಿದ್ದಿಯಬೇ ಮುದುಕೀ ||೨ ||

ಶಿಶುವಿನಾಳಧೀಶನ ಮುಂದೆ
ಕೊಸರಿಕೊಸರಿ ಹೋಗದಿರು
ಹಸನವಿಲ್ಲ ಹರೆಯವು ಮೀರಿದ
ಪಿಸುರು ಪಿಚ್ಚುಗಣ್ಣಿನ ಮುದುಕೀ ।
ಬಿದ್ದಿಯಬೇ ಮುದುಕೀ || ೩||

೨. ಮಾಯದ ಸೂಜಿ

ಸೂಜಿಯೆ ನೀನು ಸೂಜಿಯೇ
ಈ ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ

ಹರಿಯ ಶಿರದಮ್ಯಾಲೆ ಸೂಜಿಯೇ
ಮೆರದಂಥ ಹರನ ಕಪಾಲದಿ ಬೆರದಂಥ ಸೂಜಿಯೇ

ಮರವಿಯ ಅರವಿಯ ಹೊಲಿವಂಥ ಸೂಜಿಯೇ
ಮರ ಮೋಸವಾಗಿ ಮಾಯದ ಸೂಜಿಯೇ
ತಂಪುಳ್ಳವುಕ್ಕಿನೋಳ್ ಹುಟ್ಟಿದ ಸೂಜಿಯೇ
ಶಿಂಪಿಗರಣ್ಣಗೆ ಬಲವಾದ ಸೂಜಿಯೇ
ಇಂಪುಳ್ಳ ದಾರಕ್ಕೆ ಸೊಂಪುಗೂಡಿಸುವಂಥ
ಕಂಪನಿ ಸರಕಾರ ವಶವಾದ ಸೂಜಿಯೇ

ಅಂಗಳ ಬೈಲೊಳ ಹೋದಂಥ ಸೂಜಿಯೇ
ಶಿಂಗಾರದಂಗಿಯ ಹೊಲಿವಂಥ ಸೂಜಿಯೇ
ತುಂಗಶಿಶುನಾಳಧೀಶನ ಸೇವಕ
ರಂಗಿಲಿ ಹುಡುಕಲು ಶಿಗದಂಥ ಸೂಜಿಯೇ

೩. ಮನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ।
ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ
ದಾರಿಗಟ್ಟಿಮಾಳ್ಪರಿಲ್ಲ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರೆ

ಮುರುಕು ತೊಲೆಯ ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕು ಚಪ್ಪರ ಜೇರು ಗಿಂಡಿ
ಮೇಲಕೇರಿ ಮೆಟ್ಟಲಾರೆ

ಕರಕಿ ಹುಲ್ಲು ಕಸವು ಹತ್ತಿ
ದುರಿತ ಭವದಿ ಇರಬಿ ಮುತ್ತಿ
ಜಲದಿ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಈಗ ಶಿಶುನಾಳ ಗ್ರಾಮಕ
ಮೇಘ ರಾಜ ಒಲಿದು ಬಂದ

೪. ಬುದ್ಧಿವಂತರು ತಿಳಿದು

ಏನ ಕೊಡ ಏನ ಕೊಡವ
ಹುಬ್ಬಳ್ಳಿ ಮಾಟ ಏನ ಚೆಂದುಳ್ಳ ಕೊಡವ ?

ತಿಕ್ಕಿಲ್ಲ ಬೆಳಗಿಲ್ಲ ತಳತಳ ಹೊಳಿತದ
ಕಂಚೆಂದಲ್ಲ ತಾಮ್ರದ್ದಲ್ಲ ಮೀರಿ ಮೀರಿ ಮಿಂಚುತದ

ಆರುಮಂದಿ ಅಕ್ಕತಂಗ್ಯಾರು ಮೀರಿ ಮಿಂಚಿದ ಕೊಡ
ಮೂರು ಮಂದಿ ಮುತ್ತೈದೆಯರು ಲೋಲಾಡಿದ ಕೊಡ

ಶಿವರಾತ್ರಿ ಜಾತ್ರೆಗೆ ಹೋಗಿ ಸಿದ್ಧರಾಮನ ದರ್ಶನವಾಗಿ
ಮಳವ್ವ ಬಾಜಾರದಲ್ಲಿ ಬಾಳಿ ಹೋತವ್ವಕೊಡ

ಆರುಮಂದಿ ಅಕ್ಕತಂಗ್ಯಾರು ಜತ್ತಿಲೆ ನೀರಿಗೆ ಹೋಗಿ
ಜಗ್ರನೆ ಜಾರಿ ಬಿದ್ದು ಸಿಗದ್ಹಂಗ ಹೋತವ್ವ ಕೊಡ

ಶಿಶುನಾಳಧೀಶನು ತಿದ್ದಿಮಾಡಿದ ಕೊಡ
ಬುದ್ಧಿವಂತರು ತಿಳಿದು ನೋಡಿರಿ ಈ ಕೊಡ

೧. ಒಳಗೇನು ಸುಖವಿಲ್ಲ !

ಬಾಲಲೀಲಾ ಮಹಂತ ಶಿವಯೋಗಿ

ನೀನೆಲ್ಲಿ ? ನಿನ್ನ ದೇಶೆಲ್ಲಿ ? ಕೇಳಲೆ ರಾಜ
ನಾನೆಲ್ಲಿ ನಾನಿರುವ ಸುಡುಗಾಡ ಮಠವೆಲ್ಲಿ ?
ವಿನಾಶಪಾಶದಲಿ ಬಿಗಿದೆನ್ನಕಟ್ಟಿದೆಯೊ ?
ಕಳ್ಳರನು ಕಟ್ಟುವರೂಡಿ

ಬಾಲ ಬ್ರಹ್ಮಿಯು ನಾನು ಬಳಸಿ ಬ್ರಹ್ಮಿಯು ನೀನು
ಬಹಳ ಹೇಳುವುದೇನು ತಿಳಿವಳಿಕೆ ರಾಜನಿಗೆ
ಮೇಲೆ ಚಂದದ ಸುಖವು ಒಳಗೇನು ಸುಖವಿಲ್ಲ
ಮೈಸೂರ ಮೈಚೂರವೋ

ನಮ್ಮ ಸುಖ ದುಃಖಗಳ ಕೇಳುವರು ಯಾರಿಲ್ಲ
ನಮ್ಮ ಸುಖ ಮೂಕ ಸಕ್ಕರೆ ಮೆದ್ದ ಪರಿಯಂತೆ
ನಮ್ಮ ದುಃಖವು ಕಣ್ಗೆ ಚೇಳೂರಿದಂತಿಹುದು
ಹುರುಳಿಲ್ಲವಲೆ ರಾಜನೆ

ಹಂದರದಿ ಬಳ್ಳಿ ಸುವರ್ಣದಿಂದಲಿ ರತ್ನ
ಗಂಧ ಪರಿಮಳ ಪುಷ್ಪ ಸುಗಂಧದಲಿ ಲಿಂಗ
ಚೆಂದವಾಗಿಹ ಭಾವ ಹ್ಯಾಗೋ ಹಾಗೆ ನೋಡು
ನಿಮ್ಮಿಂದ ನಮ ಚೆಂದವು

ಚೆಂದದಿಂ ಕೇಳ್ ರಾಜ ಕರದ ಕುಂಬಳ ಬುರುಡೆ
ಗುದದ ಲಂಗುಟವೆರಡು ಪೂರ್ವದಲ್ಲಿರುತಿಹವು
ಇದನಷ್ಟು ನಮ್ಮ ಮುದುಕವ್ವ ಮಾಡಿದಳು
ಸರಿಸರ್ವಾಲಂಕಾರಗಳನು

ಊರಿಗೊಂದಡಕೆಗೆ ಒಂದು ನ್ಯಾಯವೆಂಬ ಪರಿ
ದೂರ ಚೆಂದವು ನಮದು ಸರಿಬಾರದಾರಿಗೆಯು
ಮಾರಾರಿ ಶಿವ ಮಾಡಿದಾಟವಿದು ತಿಳಿಯದು
ಏನಂತ ಕರೆಸಿಕೊಂಡೆ ?

ಯಾರು ಹೇಳಿದರು ನಿನಗೇಕೆ ಕರೆಸಿದನಮ್ಮ
ಬೇರು ಬುನಾದಿ ಹಿಂಗ್ಯೆತಿ ನೋಡಲೆ ರಾಜ
ಸೋರು ಸುಂಬಳ ಮಗುವು
ತಂದೆ ತಾಯಿಗೆ ಹಿತವು ಜಗಕೆ ವ್ಯತ್ಯಾಸಲೀಲಾ

ವಸುಧಿಪನೆ ನಿನ್ನ ಮೈಸೂರೆಂಬ ಬೆಲ್ಲದ
ಮುಸುರಿ ಗಡಿಗೆಗೆ ಲಕ್ಷಗಟ್ಟಲೆ ಭಿಕ್ಷುಕರೆಂಬ
ಸಸಿನೆಮಕ್ಷಕ ದಂಡು ಮುಸುಕಿಹುದದೇನೆಂಬೆ
ಮುತ್ತಿಗೆಯ ಹಾಕಿದಂತೆ

ಶಸಿಧರನ ವಾಹನಂಶಿಕವಾದ ಕಾರಣಂ
ಬಿಸಜಭವ ಮುಖ್ಯರಿಗೆ ದೊರಕದಿಹ ಭಕ್ತಿಯ ವಾಸನೆಯು
ಪಸರಿಸಿತು ಜಗದಗಲ ನಿನ್ನಯ ಭಕ್ತರ ಬಂಧು ನೀನೆ

ಇರದೆ ನಂಜಾಖ್ಯ ವೆಂಕಟರಾಯ ಕೇಳಿರೈ
ಮೂರುವರೆ ಮೊಳಗೀಬು ನಾವಿರುವ ಸ್ಥಳ ನೋಡಿ
ದೊರೆಕೊಟ್ಟ ರಥ
ಮೇಣೆ ಛತ್ರ ಚಾಮರಗಳನೆಲ್ಲಿ ಮಡಗಿಕೊಳಲಿ ?

ತರಬೇಡೆಂದರೆ ತಂದಿರೂರರ್ಗೆ ಮೆರಸಿದಿರಿ
ತೀರೋಯ್ತು ಗುರುಕರುಣ ದೊರೆ ಭಕ್ತಿ ವೈಭವವು
ತಿರಿಗೊಯ್ಯಿರಿ ಚೆಂದಲ್ಲ
ದೊಡ್ಡ ಸ್ಥಳ ಸುಸರಿಗಳು ಸಣ್ಣಸ್ಥಲಕೇನು ಚೆಂದ ?

೨. ಅರಸುವ ಜನರಿಗೆ

ಎಲ್ಲಾ ರೂಪವು ತಾನಂತೆ ಶಿವ
ಎಲ್ಲೆಲ್ಲಿಯೂ ತಾನಿಹನಂತೆ
ಅಲ್ಲಲ್ಲರಸುತ ಗುಡಿಗಳ ತಿರುಗುವ
ಕಳ್ಳಜನರಿಗೆ ಕಲ್ಲಂತೆ ಶಿವ

ಕಣ್ಣೆಂಬುದು ತನಗಿಲ್ಲವಂತೆ ಶಿವ
ಕಣ್ಣಿಗೆ ಕಾಣಿಸದಿಹನಂತೆ

ಕಣ್ಣು ತೆರೆದು ತನ್ನರಸುವ ಜನರಿಗೆ
ಬಣ್ಣ ಬಣ್ಣಗಳಾಗಿಹನಂತೆ

ದೃಶ್ಯಾದೃಶ್ಯವು ತಾನಂತೆ ಶಿವ
ದೃಶ್ಯಾದ್ವೈತಗಳೆರಡರಂತೆ
ದೃಶ್ಯಾದ್ವೈತಗಳೆರಡರ ನಡುವೆ
ಶಾಶ್ವತ ರೂಪವು ತಾನಂತೆ

ಶಂಕರಾನಂದವು ತಾನಂತೆ ಶಿವ
ಕಿಂಕರರೊಳು ಸಾರಿಹನಂತೆ
ಬಿಂಕನು ಮುರಿಸುವ ಕಿಂಕರರಿಗೆ ಗುರು
ಮುರುಘೇಶ ರೂಪವು ತಾನಂತೆ

೩. ಶಿವಯೋಗಿ

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ

ಇರುವೊಂದು ಕನ್ನಡಿಯ ನೂರಾರು ಜನ ಪಿಡಿಯೆ
ಸರಳವಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಮತಭೇದದವರು ದುರ್ಮತಿಯಿಂದ ಯತಿವರೆಗೆ
ಸ್ತುತಿನಿಂದೆ ಮಾಡಿದರೆ ಅವರಿಗೆ ತಿರುಗುವವು
ಯತಿವರನು ತಾ ತನ್ನ ಪಥದಲ್ಲಿ ಇರುವನು
ಕ್ಷತ್ರಿಯ ಜನರ ಪಾಪಪುಣ್ಯ ಫಲ ಪರೀಕ್ಷೆ

ಕುಲಛಲವ ಹಿಡಿದಿರುವ ಕಲಕು ಮನದವರಲ್ಲಿ
ತಿಳಿವಳಿಕೆ ಶಿವ ಚಂದ್ರನು ಕಾಣುವ ಪರಿಯೆಂತು
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ
ಸಲೆ ಮಹಂತಲಿಂಗ ಚಿತ್ಸೂರ್ಯ ಕಾಣುವನು

೧. ಜಾತಿಭೇದದ ಪಾತಕ

ಕೈವಾರ ನಾರೇಯಣಪ್ಪ

ಈ ದೇಹದೊಳಗಿರುವ ವಿಷ ಕಳೆಯಬೇಕು
ವಿಷ ಕಳೆದು ಸುಜ್ಞಾನ ಪಥದೊಳಿರು ಮನವೇ

ಮಾತಾಪಿತರೆಂಬೊ ಮೋಹ ಬಿಡಬೇಕು
ಮನ್ಮಥನ ಬಾಣಗಳಿಗಂಜದಿರಬೇಕು
ಅಜ್ಞಾನಿ ಜನರ ದುಸ್ಸಂಗ ಬಿಡಬೇಕು
ಆತ್ಮಾರ್ಥವರಿತು ಹರಿಯ ನೆನೆ ಮನವೇ

ಮೂರು ಆಯುಧಾರೆಂಟು ಮೂರ್ಖರ ಬಿಡಬೇಕು
ಸತಿ ಸುತ ಹಿತ ಬಂಧುಜನರ ಬಿಡಬೇಕು
ಜಾತಿ ಭೇದವ ಮಾಡೊ ಪಾತಕರ ಬಿಡಬೇಕು
ಅನುದಿನವು ಗುರುಧ್ಯಾನ ಮಾಡುತಿರು ಮನವೇ

ನಡೆನುಡಿಗೆ ನರಹರಿಯ ನಾಮ ಭಜಿಸಲಿಬೇಕು
ಜಾತಿ ಜನ್ಮಗಳೊಂದು ಸಮಕೂಡಬೇಕು
ಕೈವಾರಾಧಿಪನ ದಾಸ ದಾಸನಾಗಿರಬೇಕು
ಅಮರ ನಾರೇಯಣ ಸ್ವಾಮಿಯ ಭಜಿಸು ಮನವೇ

೨. ಆತ್ಮದ ಆನಂದ

ನಾಶವಾದರು ಬೇಗ ನೆಂಟರಿಷ್ಟರು
ಈ ದೇಹದ ಮನೆಯಲ್ಲಿದ್ದ ದುರ್ಜನರು

ಬಹಳ ಕೋಪಗಾರ ಗಂಡನು ಬಿಟ್ಟನು
ಮೂದೇವಿ ಮೈದುನನು ಮೃತನಾದನು
ಮಾಯೆಯು ಹೆಚ್ಚಿದ ಮಾವನು ಹೋದನು
ಅತ್ತೆ ಘಾತುಕಿಮುಂಡೆ ಹತಳಾದಳು

ಆರಂಭಗಾರನವನೊಬ್ಬನಿದ್ದನು
ಭಂಗಿಯೆಂಬೊ ಭಾವನೊಬ್ಬನು
ಏನ ಹೇಳಲಿ ಇವರೆಲ್ಲ ಕಾಡಿಸಿಯೆನ್ನನು
ಭ್ರಷ್ಟರಾಗಿ ಹೋದರು ಇಷ್ಟೂ ಮಂದಿ
ಅಂಜಲೇಕೆ ಇನ್ನು ಅಮರ ನಾರೇಯಣ
ದಾಸನ ದಾಸರಿಗೆ ದಾಸನಾಗಿ
ಸತ್ತು ಹುಟ್ಟುವಂಥ ಸಂಕಟವೇನಿಲ್ಲ
ಆನಂದವಾಯಿತೋ ಆತ್ಮದಲ್ಲಿ

೧. ನಿಜವೆ ನಿರ್ಗುಣ

ಚಲವಾದಿ ಚಂದಪ್ಪ

ಮಾಡಿದೆ ಹೊಲ ಮಾಡಿದೆ
ಮಾಡಿದೆ ಹೊಲ ಮಾಡಿದೆ
ಹೊಲಸ ಹೊರಗೆ ದೂಡಿದೆ
ಮಾಡಿದೆ ಹೊಲ ಮಾಡಿದೆ

ನೆಲವಿಲ್ದ ಹೊಲ ನಾ ಮಾಡಿದೆ
ಬೀಜವಿಲ್ದ ಬರಿ ಬಿತ್ಯಾಡಿದೆ
ಜಲವಿಲ್ದ ಬೆಳೆ ಬೆಳೆದಾಡಿದೆ
ಫಲವಿಲ್ದ ಒಕ್ಕಲಾಡಿದೆ

ಗಾಳಿ ಇಲ್ದ ತೂರಿದೆ
ರಾಶಿ ಇಲ್ದ ಹೇರಿದೆ
ಹಸನಾಗಿ ಬೆಳೆ ಹದಾ ನಾ ಮಾಡಿದೆ
ನಿಜವೆ ನಿರ್ಗುಣದೊಳು ಸೇರಿದೆ
ನಿರಭಿಮಾನಿಯಾಗಿ ನೋಡಿದೆ

ಕರ್ತೃ ಕಾಯಕ ಮಾಡಿದೆ
ವರ ವಿವೇಕ ನೋಡಿದೆ
ವಿರತ ವಿಶ್ವದೊಳಾಡಿದೆ
ಬಯಕೆ ತೃಪ್ತಿ ಬೇಡಿದೆ
ಆನಂದದಾಟ ಆಡಿದೆ
ಶಿಶುನಾಳ ಶರೀಫಾಗಿ ಹಾಡಿದೆ
ಆತ್ಮಾನಾತ್ಮ ಅನುಭವ ಕೂಡಿದೆ

೨. ಏಳು ಸಮುದ್ರಕಿಂತ ಹೊರಗ !

ಒಂದಿನಾ ಆಶ್ಚರ್ಯವಾಯಿತೊ ಎನಗ
ನಾ ಹೊಲಕ ಮನಿಗೆ ಹೋಗಿಬರುವ ದಾರ್‍ಯಾಗ
ಪಕ್ಷಿ ಒಂದು ಹಾರಿಹೋಗುತಿತ್ತೊ ಮ್ಯಾಗ
ಅದರ ವರ್ಣಾ ನೋಡಿ ಹೇಳತೇನಿ ನಿಮಗ

ಪಕ್ಕಾರೆಕ್ಕಿ ಇದ್ದಿಲ್ಲ ಹಕ್ಕಿಮೈಮ್ಯಾಗ
ಬೆಂಕಿಕೆಂಡದಂತೆ ಚೊಕ್ಕ ಕಾಣಿಸುತ್ತಿತ್ತೊ ಮ್ಯಾಗ
ಸಣ್ಣದಲ್ಲೊ ಶರಣಾ ಪಕ್ಷಿ ಜಗದಾಗ
ಬೆಂಕಿ ತಿಂದು ಬೆಂಕಿ ಕಾರುತ್ತಿತ್ತೋ ಒಳಗ ಹೊರಗ

ಎಂಬತ್ತನಾಲ್ಕು ಲಕ್ಷ ಜೀವರಾಶಿಯೊಳಗ
ಪಕ್ಷಿ ಬಾಳ ಶ್ರೇಷ್ಠ ಅಂತಾರ ಹತ್ತು ದಿಕ್ಕಿನೊಳಗ
ಗುರ್ತು ಇದ್ದರ ಗುಪ್ತ ಕೇಳತೇನಿ ನಿಮಗ
ಗುರುಪುತ್ರಗ ತೋರುತದ ಗುರುಮಾರ್ಗ

ಉದ್ದ ಅಗಲ ಆಕಾಶದಕಿಂತಲೂ ಮ್ಯಾಗ
ಅಗಲಿಗೆ ಏಳುಸಮುದ್ರಕಿಂತ ಎಷ್ಟೊ ಹೊರಗ
ಲಕ್ಷಗೊಟ್ಟು ಪಕ್ಷಿ ಹೆಸರ ಹೇಳೊ ನನಗ
ಶಿಶುನಾಳ ಶರೀಫರು ಸದ್ಯಕ್ಕ ಹಸ್ತಾ ಇಡತಾರೊ ನಿನಗ

೧. ಸಾವಿನ ಗುಂಡಿ

ಅಜ್ಞಾತ ತತ್ತ್ವಪದಕಾರರು

ಎಲ್ಲ ನಮ್ಮಲ್ಲಿ ನಂಬುವಿರಲ್ಲ
ಅವಗುಣ ಹೋಗಲಿಲ್ಲ
ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಗಳ ನುಡಿಯುವಿರಲ್ಲ

ಗುರುಗಳೆನುತ ತಿರುಗುವಿರೆಲ್ಲ
ಗುರುತನ ತನಗಿಲ್ಲ
ಸಾಧುಗಳೆಂದು ಹೇಳುವಿರೆಲ್ಲ
ಸಾವಿನ ಗುಂಡಿಲಿ ಬೀಳುವಿರಲ್ಲ

ಬ್ರಹ್ಮನೆಂದು ಎಣಿಸಿದಿರೆಲ್ಲ
ಹಮ್ಮನು ಬಿಡಲಿಲ್ಲ
ಕಾವಿಯನುಟ್ಟು ತಿರುಗುವಿರೆಲ್ಲ
ಕಾಮನ ಬಿಡಲಿಲ್ಲ

ಪರಿಪರಿ ದೇಶವ ತಿರುಗಿದರಿಲ್ಲ
ಪೊರೆಯುವರ್‍ಯಾರಿಲ್ಲ
ಒಮ್ಮನ ಗುರುವಿನ ಪಾದ ಕಮಲಕೆ
ಎರಗದೆ ನೀನಿಲ್ಲ

೨. ಸುಮ್ಮನಿರು ನಾಲಗೆ

ಸುಮ್ಮನಿರು ನಾಲಗೆ ಸುಮ್ಮನಿರು ನಾಲಗೆ
ಸಾಕ್ಷಾತ ನಾಲಗೆ ಸುಮ್ಮನಿರು
ಸುಮ್ಮನಿದ್ದರೆ ನೀನು ಬ್ರಹ್ಮನಾಗುವಿ
ಸುಮ್ಮನಿದ್ದೆನೆಂಬ ಹಮ್ಮನಳಿದು

ಪರರ ನಿಂದಿಸಬೇಡ ಪರವಸ್ತು ಮರೆಯಬೇಡ
ಪರತರಾನಂದವನು ಬಿಡಲೇ ಬೇಡ
ಪರರು ಎನ್ನವರೆಂದು ಭೇದ ಮಾಡಲೆ ಬೇಡ
ಪರಕೆ ಪರವಾದ ಪರವಸ್ತು ನೀನು

ಕೋಪ ತಾಪವು ಬೇಡ ಕೋಪದವರೆನ ಬೇಡ
ಕೋಪದವರ ಕೂಡ ಸಹವಾಸ ಬೇಡ
ಕೋಪತಾಪವು ಮೀರಿ ಸೋಪಾನವನೇರಿ
ಭೂಪ ಚಿದ್ರೂಪನು ತಾನೆ ಆಗಿ

ಶಾಂತ ಗುರುವಿನ ಹೊಂದಿ ಶಾಂತಗಣದೊಳಗಾಡಿ
ಶಾಂತನಾಗಿದ್ದರೆ ಶಾಂತಿಯಹುದು
ಶಾಂತ ನಿರುಪಾಧಿಯ ಕಾಂತಿಯೊಳು ಮನಮುಳುಗಿ
ಶಾಂತ ಸರ್ವಾಂತರ್ಯಾಮಿಯಾಗಿ

ಅಭ್ಯಾಸಗಳು

ತತ್ವಪದಗಳು

ತತ್ವಪದಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವವೆನಿಸಿದ ಅನುಭಾವ ಸಾಹಿತ್ಯ ಎಂದು ಗುರುತಿಸಲ್ಪಟ್ಟಿವೆ. ತತ್ವಪದಕಾರರ ಪರಂಪರೆಯನ್ನು ೧೨ನೇ ಶತಮಾನದ ಶಿವಶರಣರ ಕಾಲಘಟ್ಟದಿಂದ ಊಹಿಸಬಹುದಾಗಿದೆ. ಆದರೂ ಹೊಸಗನ್ನಡ ಕಾವ್ಯದ ಅರುಣೋದಯಕ್ಕೆ ಅಂದರೆ, ೧೭ನೇ ಶತಮಾನದಿಂದ ೧೯ನೇ ಶತಮಾನದ ಕೊನೆಯವರೆಗೆ ಸ್ಪಷ್ಟವಾಗಿ ಅದರ ರೂಪ-ಧ್ವನಿಗಳನ್ನು ಗುರುತಿಸಬಹುದಾಗಿದೆ. ಕನ್ನಡ ಕಾವ್ಯಕ್ಕೆ ಹೊಸಹಾದಿಗೆ ನಾಂದಿ ಹಾಡಿ, ಸಾಂಪ್ರದಾಯಿಕ ಸ್ವರೂಪವನ್ನು ಬದಲಿಸಿದ ಅಚ್ಚ ದೇಸೀ ಸಂಸ್ಕೃತಿಯ ಅಭಿವ್ಯಕ್ತಿಗಳೇ ತತ್ವಪದಗಳು.

ಅಕ್ಷರ ವಂಚಿತ ಜನಪದರು ತಮ್ಮ ಬದುಕಿನ ಅಗಾಧವಾದ ಅನುಭವದ ಮೂಲಕವೇ ಕಂಡುಕೊಂಡ ಅನುಭಾವ ಜಗತ್ತಿನ ಕಾಣ್ಕೆಗಳು ಅವು. ಮನುಕುಲದ

ಏಕತೆಗಾಗಿ ಧ್ಯಾನಿಸುವಂತೆ ಹುಟ್ಟಿಕೊಂಡ ಈ ತತ್ವಪದಗಳು ಜಾತಿ-ಮತ, ಲಿಂಗ-ವರ್ಗಭೇದ ಹಾಗೂ ಧಾರ್ಮಿಕ ಮೌಢ್ಯಗಳ ಎಲ್ಲೆ ಮೀರಿ ಬದುಕನ್ನು ಹಸನುಗೊಳಿಸುವ ಪರಿಶುದ್ಧ ಮನಸ್ಸಿನ ಪಾರದರ್ಶಕ ಅಭಿವ್ಯಕ್ತಿಗಳಾಗಿವೆ. ಪರಂಪರಾನುಗತ ಜ್ಞಾನ ಹಾಗೂ ವಿಸ್ತಾರವಾದ ಲೋಕಾನುಭವದ ಸೂಕ್ಷ್ಮಾತಿಸೂಕ್ಷ್ಮ ಚಿಂತನೆಯ ಮೂಲಕ ಮೌಲ್ಯಗಳ ತಡಕಾಟ, ದಿನನಿತ್ಯದ ಬದುಕಿನ ಸಣ್ಣಪುಟ್ಟ ವಿವರಗಳ ಮೂಲಕವೇ ಅನುಭಾವದ ಒಳಬೆಳಕನ್ನು ಮೂಡಿಸುವ ಹಂಬಲ ಎಲ್ಲವೂ ಈ ತತ್ವಪದಗಳಲ್ಲಿ ಅಡಗಿರುವುದನ್ನು ಕಾಣಬಹುದಾಗಿದೆ.

ಕವಿ-ಕಾವ್ಯಪರಿಚಯ

ಮುಪ್ಪಿನಷಡಕ್ಷರಿ

ಕವಿಚರಿತೆಕಾರರ ಪ್ರಕಾರ ಮುಪ್ಪಿನಷಡಕ್ಷರಿಯ ಕಾಲ ಕ್ರಿ.ಶ. ೧೬೫೦. ಮೈಸೂರು ಜಿಲ್ಲೆಯಳಂದೂರು ತಾಲ್ಲೂಕಿನ ಎರಗಂಬಳ್ಳಿಯ ಸಿದ್ದಲಿಂಗರ ಶಿಷ್ಯ ಎಂಬುದು ಲಭ್ಯ ವಿವರಗಳಿಂದ ತಿಳಿದುಬರುತ್ತದೆ. ಇವರ ಪೂರ್ವಾಶ್ರಮದ ವಿವರಗಳು ಸ್ಪಷ್ಟವಾಗಿಲ್ಲ. 'ಷಡಕ್ಷರಿಲಿಂಗ' 'ಷಡಕ್ಷರಾಂಕ' ಎನ್ನುವುದು ಇವರ ರಚನೆಗಳ ಅಂಕಿತ.

ಬದುಕಿನಲ್ಲಿನ ಸತ್ಯ, ಜ್ಞಾನ, ತಪಸ್ಸು, ಮೌನ, ನಿತ್ಯಕ್ಷಮೆ, ಇಂದ್ರಿಯ ನಿಗ್ರಹ, ಶಾಂತಿ, ಎಂಬ ಉತ್ತಮ ಗುಣಗಳನ್ನು ಅರಿತಾಗ ಮನಸ್ಸು ಪಕ್ವಗೊಳ್ಳುತ್ತದೆ. ವಿವೇಕಿಯಾದವರು ತಮ್ಮನ್ನೇ ತಾವು ಅರಿಯಬೇಕೆಂಬ ಎಚ್ಚರ ಮುಪ್ಪಿನ ಷಡಕ್ಷರಿಯವರ ಈ ತತ್ವಪದಗಳಲ್ಲಿದೆ.

ಸರ್ಪಭೂಷಣ ಶಿವಯೋಗಿ

ಕ್ರಿ.ಶ. ಸು. ೧೭೯೫ ಇವರ ಜೀವಿತ ಕಾಲವೆಂದು ಗುರುತಿಸಲಾಗಿದೆ. ಸರ್ಪಭೂಷಣ ಶಿವಯೋಗಿಗಳು ಬೆಂಗಳೂರಿಗೆ ಸಮೀಪದ ಚಿಕ್ಕಬಾಣಾವರ ಗ್ರಾಮದವರು. ಸಪ್ಪಣ್ಣ ಎಂಬುದು ಇವರ ಇನ್ನೊಂದು ಜನಪ್ರಿಯ ಹೆಸರು. 'ಕೈವಲ್ಯ ಕಲ್ಪವಲ್ಲರಿ' ಕೃತಿಯಿಂದಾಗಿ ಕನ್ನಡ ಅನುಭಾವಿ ಪರಂಪರೆಯಲ್ಲಿ ಮುಖ್ಯ ಕವಿಯಾಗಿದ್ದಾರೆ. 'ಜ್ಞಾನಶತಕ' ಇವರ ಸಂಸ್ಕೃತ ಕೃತಿ. ಲಭ್ಯವಿರುವ ಮಾಹಿತಿಯ ಪ್ರಕಾರ ವ್ಯಾಪಾರೀ ಕುಟುಂಬದವರಾಗಿದ್ದ ಇವರ ತಂದೆ ಮಲ್ಲಿಕಾರ್ಜುನ ತಾಯಿ ಚನ್ನಮ್ಮ.

ಮನುಷ್ಯರ ಬದುಕಿನ ಆಲೋಚನಾಕ್ರಮ ಹಾಗೂ ಜೀವನಕ್ರಮ ಹೇಗಿರಬೇಕೆಂಬುದನ್ನು ಸರ್ವಭೂಷಣ ಶಿವಯೋಗಿಗಳು ತಮ್ಮ ತತ್ವಪದಗಳಲ್ಲಿ ಹೇಳಿದ್ದಾರೆ. ಮನುಷ್ಯನಾದವನು ತಮ್ಮ ದೇಹ – ಮನಸ್ಸುಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ದೇಹದ ಪೋಷಣೆಗೆ ರುಚಿಕಟ್ಟಾದ, ಆರೋಗ್ಯಪೂರ್ಣವಾದ ಆಹಾರ ಎಷ್ಟು ಮುಖ್ಯವೋ ಮನಸ್ಸಿನ ಪೋಷಣೆಗೆ ಆರೋಗ್ಯಪೂರ್ಣವಾದ ವಿಚಾರ, ಸಜ್ಜನರ ಸಹವಾಸವೂ ಅಷ್ಟೇ ಮುಖ್ಯ. ಲೋಕಾನುಭವದೊಂದಿಗೆ ಅನುಭಾವದ ಪಾಕವೂ ಬೆರೆಯಬೇಕೆಂಬ ಎಚ್ಚರಿಕೆಯ ದನಿ ಇಲ್ಲಿದೆ.

ಕಡಕೋಳ ಮಡಿವಾಳಪ್ಪ

ಗಂಗಮ್ಮನೆಂಬ ವಿಧವೆಯ ಮಗನಾಗಿ ಹುಟ್ಟಿದ ಇವರು ಕ್ರಿ.ಶ.ಸು. ೧೭೮೦ರಿಂದ ೧೮೫೫ರವರೆಗಿನ ಕಾಲದಲ್ಲಿ ಆಗಿಹೋದ ಹೈದರಾಬಾದ್‌ನ ಕರ್ನಾಟಕ ಪ್ರಾಂತ್ಯದ ಮಹತ್ವದ ಅನುಭಾವಿ ಕವಿ. ಮಡಿವಾಳಪ್ಪನವರ ಪೂರ್ವಜರು ಬಿಜಾಪುರ ಜಿಲ್ಲೆಯ ಇಂಡಿ ಪ್ರಾಂತ್ಯದಿಂದ ಗುಲಬರ್ಗಾ ಜಿಲ್ಲೆಯ ಬಿದನೂರಿಗೆ ಬಂದವರು. ಕಲಬುರ್ಗಿಯ ಶರಣ ಬಸವೇಶ್ವರರು ಮಡಿವಾಳಪ್ಪನವರ ಸಮಕಾಲೀನರು. ಮಹಂತ, ಮಹಂತೇಶ ಎನ್ನುವ ಅಂಕಿತದೊಂದಿಗೆ ತತ್ವಪದಗಳನ್ನು ಹಾಗೂ ವಚನಗಳನ್ನು ರಚಿಸಿದ್ದಾರೆ.

ಮಾತಿನ ಮಹತ್ವವನ್ನು ಕುರಿತ ಇಲ್ಲಿನ ತತ್ವಪದಗಳು ಪ್ರಸ್ತುತ ಸಂದರ್ಭಕ್ಕೆ ಮುಖ್ಯವೆನಿಸುತ್ತವೆ.

ಕೂಡಲೂರು ಬಸವಲಿಂಗ ಶರಣರು

ಕೂಡಲೂರು ಬಸವಲಿಂಗ ಶರಣರು ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಬಳೆಚಕ್ರ ಗ್ರಾಮದ ಗಂಗಾಂಬೆ ಮತ್ತು ಮಹಾದೇವಪ್ಪ ಎಂಬ ದಂಪತಿಗಳ ಮಗ. ಇವರು ೧೮ನೇ ಶತಮಾನದ ಕೊನೆಯಲ್ಲಿ ಜೀವಿಸಿದ್ದ ತತ್ವಪದಕಾರರು. ಕೂಡಲೂರೇಶ ಎಂಬುದು ಇವರ ತತ್ವಪದಗಳ ಮುದ್ರಿಕೆ. ಇವರು ತಮ್ಮ ಕೊನೆಗಾಲವನ್ನು ರಾಯಚೂರು ಜಿಲ್ಲೆಯ ಗಬ್ಬೂರಿಗೆ ಸಮೀಪದಲ್ಲಿರುವ ಖಾನಾಪುರದಲ್ಲಿ ಕಳೆದರೆಂದು ತಿಳಿದು ಬರುತ್ತದೆ.

ಬದುಕಿನ ಬಗೆಗಿನ ಸ್ವಚ್ಛತೆಯನ್ನು ಕುರಿತು ಆಡುತ್ತಲೇ ಅನುಭಾವದೆಡೆಗೆ ಸಾಗುವ 'ಅಗಸರೋ ನಾವು' ತತ್ತ್ವಪದದಲ್ಲಿದೆ. ಒಣ ಪಾಂಡಿತ್ಯ ಮತ್ತು ಪಾಂಡಿತ್ಯದ ಅಹಂನಲ್ಲಿ

ಮೆರೆಯುವ ಪಂಡಿತರನ್ನು ಬಸವಲಿಂಗ ಶರಣರು ತರಾಟೆಗೆ ತೆಗೆದುಕೊಂಡಿದ್ದಾರೆ. ವಚನ ಸಾಹಿತ್ಯದ ಕಾಲದಿಂದಲೂ ನಮ್ಮ ಕನ್ನಡ ಪರಂಪರೆಯಲ್ಲಿ ಹೃದಯಹೀನವೂ ನಿಷ್ಕ್ರಿಯವೂ ಆದ ಪಾಂಡಿತ್ಯದ ಬಗ್ಗೆ ಇರುವ ತಿರಸ್ಕಾರವು ಕೂಡಲೂರ ಶರಣರಲ್ಲಿ ಮತ್ತೊಮ್ಮೆ ಆಸ್ಫೋಟಿಸಿದೆ.

ಶಿಶುನಾಳ ಶರೀಫ (೦೭-೦೩-೧೮೧೯ ರಿಂದ ೦೭-೦೩-೧೮೮೯)

ಹಜರತ್ ಇಮಾಂ ಸಾಹೇಬ ಮತ್ತು ಹಾಜುಮ್ ದಂಪತಿಗಳ ಮಗನಾದ ಶರೀಫರ ಪೂರ್ಣ ಹೆಸರು ಮಹಮ್ಮದ್ ಶರೀಫ. ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುನಾಳ ಗ್ರಾಮದಲ್ಲಿ ಜನನ. ಇವರ ಗುರು ಗೋವಿಂದಭಟ್ಟರು. ಮೂಲತಃ ಕೃಷಿ ಕುಟುಂಬದವರಾದ ಶರೀಫರು ಕನ್ನಡ ಉಪಾಧ್ಯಾಯರಾಗಿ ಕೆಲ ಕಾಲ ಕೆಲಸ ಮಾಡಿ ಆನಂತರ ಆಧ್ಯಾತ್ಮಿಕ ಸೆಳೆತದಿಂದ ಭಕ್ತಿ, ಧ್ಯಾನ, ಭಜನೆ, ಪ್ರಾರ್ಥನೆ, ಬೋಧೆ, ಸಂಚಾರ ಇತ್ಯಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬಾಲಲೀಲಾ ಮಹಾಂತ ಶಿವಯೋಗಿ, ಕಲ್ಲುಮಠದ ಸಂಗಮೇಶ, ಅಂಕಲ್ಗಿಯ ಅಡವಿಸ್ವಾಮಿ, ಗರಗದ ಮಡಿವಾಳಪ್ಪ ನವಲಗುಂದದ ನಾಗಲಿಂಗ ಇವರೆಲ್ಲ ಶರೀಫರ ಸಮಕಾಲೀನರು.

ಶರೀಫರು ತಾವಾಗಿಯೇ ಪದಗಳನ್ನೆಲ್ಲ ಬರೆದಿಡುವ ಪರಿಪಾಠ ಇಟ್ಟುಕೊಂಡಿರಲಿಲ್ಲ. ಶಿಗ್ಗಾಂವ ತಾಲೂಕಿನ ಗುಡಿಗೇರಿಯ ಕುಂಬಾರ ಬಸಪ್ಪ ಮತ್ತು ಆತನ ಮಗಳು ಶರೀಫರು ಹಾಡುತ್ತಿದ್ದ ಪದಗಳನ್ನು ಬರೆದಿಡುತ್ತಿದ್ದರು. ಕರ್ನಾಟಕದ ಕಬೀರ, ಶರೀಫಜ್ಜ, ಶರೀಫ ಸಾಹೇಬ, ಸಂತ ಶಿಶುನಾಳ ಶರೀಫ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಇವರು ಹಲವಾರು ತತ್ತ್ವಪದ, ಲಾವಣಿ, ಅನುಭಾವ ಗೀತೆಗಳನ್ನು ರಚಿಸಿದ್ದಾರೆ. ಬೋಧೆ, ಗೇಯಲಯ, ಅನುಭಾವಿಕತೆ, ವಿಡಂಬನೆ, ಪ್ರತಿರೋಧ ಮುಂತಾದವು ಇವರ ಪದಗಳ ಮುಖ್ಯ ಲಕ್ಷಣಗಳಾಗಿವೆ.

ಜಾತಿ-ಮತಗಳ ಗಡಿಯನ್ನು ದಾಟಿ ನಿಂತ ಈ ಅನುಭಾವಿ ಅವಧೂತರ ಪದಗಳು ಮೇಲು ನೋಟಕ್ಕೆ ನಮ್ಮ ದೈನಂದಿನ ಬದುಕಿನ ಸಂಗತಿಗಳನ್ನು ನಿರೂಪಿಸುವಂತೆ ಕಂಡರೂ ಆಳದಲ್ಲಿ ವ್ಯವಸ್ಥೆಯ ವಿರೋಧವನ್ನು, ಬದುಕಿನ ಸಾರವನ್ನು, ಜೊತೆಗೆ ತಮ್ಮದೇ ಆದ ತಾತ್ವಿಕ ಅರ್ಥವನ್ನು ಒಳಗೊಂಡಿರುತ್ತವೆ. ದೈನಂದಿನ ಸಂಗತಿಗಳೇ ಅನುಭಾವಿಕ ಮೆರುಗನ್ನು ಪಡೆದು ಪಾರಮಾರ್ಥ ದೃಷ್ಟಿಯ ರೂಪಕ ಪ್ರತಿಮೆಗಳಾಗಿ ಬಿಡುತ್ತವೆ.

ತತ್ವಬೋಧನೆ, ಹರೆಯವುಳ್ಳ ಮತ್ತು ಹರೆಯ ಮೀರಿದವರ ತಲೆಮಾರುಗಳ ಅಂತರ, ಧನದಾಹ ಮತ್ತು ಭಕ್ತಿ, ವ್ಯಾಪಾರೀ ಮನೋಭಾವ, ದಗಾಕೋರತನ ಹಾಗೂ ಅವುಗಳ ಬಗೆಗಿನ ಪ್ರತಿರೋಧ, ಸಮಾಜದ ಗತಿಶೀಲತೆಯ ಕುರಿತ ಎಚ್ಚರ ಮತ್ತು ಜಗದ

ಜಂಜಡಗಳ ಬಗೆಗಿನ ಒಂದು ರೂಪಕಚಿತ್ರ 'ಬಿದ್ದಿಯಬೇ ಮುದುಕಿ'. ಪಕ್ವಗೊಳ್ಳದ ಮನಸ್ಸು , ಹಸನುಗೊಳ್ಳದ ಬದುಕಿನ ಚಿತ್ರಣ 'ಮನೆಯ ಮಾಳಿಗೆ' ಯಲ್ಲಿದೆ. ಮನುಷ್ಯರೊಳಗಿನ ಅಜ್ಞಾನ, ಅರಿಷಡ್ವರ್ಗಗಳೇ ಮುಂದಾಗಿ 'ಕೊಡ'ವಾಗಿ ಮಿಂಚುವ, ಅದು ನಾಶವಾಗುವ ಇದನ್ನರಿತವರಿಗೆ ಮಾತ್ರ ಅರಿವಾಗುವ ಪರಿ 'ಬುದ್ಧಿವಂತರು ತಿಳಿದು' ಪದದಲ್ಲಿದೆ. ಸೂಜಿಯ ಮಹತ್ವ ಎಲೆಮರೆಯ ಕಾಯಂತೆ. ದೇಹದೊಳಗಿನ ಆತ್ಮವೂ, ಆಧ್ಯಾತ್ಮವೂ ಹಾಗೆಯೇ.

ಬಾಲಲೀಲಾಮಹಂತಶಿವಯೋಗಿ

೧೮೨೩-೧೮೫೯ ರವರೆಗೆ ಬದುಕಿದ್ದ ಬಾಲಲೀಲಾ ಮಹಂತ ಶಿವಯೋಗಿಗಳು ವಿಜಾಪುರ ಜಿಲ್ಲೆಯ ಎರಿನಾಳ ಗ್ರಾಮದವರು. ಚಿಕ್ಕ ವಯಸ್ಸಿಗೆ ವೈರಾಗ್ಯ ಹೊಂದಿ ಶಿವಯೋಗಿಯಾಗಿ ಮುಳುಗುಂದದ ಮಠದಲ್ಲಿ ನೆಲೆಸಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಸರ್ಪಭೂಷಣಸ್ವಾಮಿಯವರ ಸಮಕಾಲೀನರಾಗಿದ್ದ ಇವರು, ಬ್ರಿಟಿಷರ ಆಡಳಿತ ಮತ್ತು ಸ್ಥಳೀಯ ರಾಜಪ್ರಭುತ್ವಗಳ ಕಡು ವಿರೋಧಿಯಾಗಿದ್ದರು.

ಈ ತತ್ವಪದಗಳು ೧೫೦ ವರ್ಷಗಳಷ್ಟು ಹಳೆಯದಾದರೂ ಇವು ಎತ್ತಿರುವ ಪ್ರಶ್ನೆಗಳು ನಮ್ಮ ಕಾಲದವೂ ಹೌದು. ಜಾಗತೀಕರಣದ ಈ ಹೊತ್ತಿನಲ್ಲಿ ಸರಕಾರಗಳು ಜನವಿರೋಧಿಯಾಗುತ್ತಿರುವಾಗ ಅಸಹಾಯಕ ಜನತೆ ರೋಷದಿಂದ ಕೇಳಬೇಕಾದ ಪ್ರಶ್ನೆಗಳು ಏನೇನಿವೆಯೋ ಅವೆಲ್ಲ ಇಲ್ಲಿ ಬೀಜರೂಪದಲ್ಲಿವೆ. ಜೊತೆಗೆ 'ಮನಸಿನಂತೆ ಮಾದೇವ' ಎಂಬಂತೆ ಮನಸಿನೊಳಗಣ ಭಾವಗಳ ದರ್ಶನವೂ ಇಲ್ಲಿದೆ.

ಕೈವಾರ ನಾರೇಯಣಪ್ಪ

೧೭೭೦-೧೮೮೦ರ ಅವಧಿಯಲ್ಲಿದ್ದ ಕೈವಾರ ನಾರೇಯಣಪ್ಪ ಅನುಭಾವಿ ತತ್ವಪದಕಾರ. ಕೈವಾರ ತಾತಯ್ಯನೆಂದೇ ಪ್ರಸಿದ್ಧರಾಗಿರುವ ಇವರು ಕೋಲಾರ ಜಿಲ್ಲೆಯವರು. ಬಳೆಗಾರ ವೃತ್ತಿಯವರಾದ ನಾರೇಯಣಪ್ಪನವರು ಅಮರ ನಾರೇಯಣ ಮುದ್ರಿಕೆ (ಅಂಕಿತ) ಯೊಂದಿಗೆ ತೆಲುಗು ಮತ್ತು ಕನ್ನಡ ಭಾಷೆಗಳೆರಡರಲ್ಲೂ ತತ್ವ ಪದಗಳನ್ನು ರಚಿಸಿದ್ದಾರೆ. ಇವರ ತತ್ವಪದಗಳು ನಾಡಿನಾದ್ಯಂತ ಜನಪ್ರಿಯವಾಗಿವೆ.

ಸಾಂಸಾರಿಕ ಸುಖಕ್ಕಿಂತ ಆಧ್ಯಾತ್ಮಿಕ ಸುಖವನ್ನರಸುವುದು ಮುಖ್ಯ. ಅದರಿಂದ ಆತ್ಮಾನಂದ ಲಭಿಸುತ್ತದೆಂಬುದನ್ನು ಈ ತತ್ವಪದಗಳು ಕಟ್ಟಿಕೊಡುತ್ತವೆ.

ಚಲವಾದಿ ಚಂದಪ್ಪ

ಚಂದಪ್ಪ (ಕಾಲ : ೧೮೧೬-೧೮೮೯) ಶಿಶುನಾಳ ಶರೀಫರ ನಂತರದ ಕಾಲದವನಿರಬೇಕೆಂದು ತಿಳಿದು ಬರುತ್ತದೆ. ನಿರ್ದಿಷ್ಟ ಮುದ್ರಿಕೆ / ಅಂಕಿತನಾಮಗಳಿಲ್ಲದ ಈತನ ತತ್ವಪದಗಳು ಸಾಂದರ್ಭಿಕ ಸ್ಫೂರ್ತಿಯಿಂದ ಹುಟ್ಟಿರುವಂತೆ ತೋರುತ್ತದೆ. ಈತನ ಹುಟ್ಟಿದೂರು ಧಾರವಾಡ ಜಿಲ್ಲೆಯ ಹೆಬ್ಬಳ್ಳಿ.

ಹೊಸಗನ್ನಡ ಲಯಕ್ಕೆ ಹತ್ತಿರವುಳ್ಳ ಲಯ ಪ್ರಸ್ತುತ ತತ್ತ್ವಪದಗಳಲ್ಲಿವೆ. ಒಂದರಲ್ಲಿ ಆತ್ಮಾನುಭವವನ್ನು ಅನುಭವಿಸಿದ ಆನುಭಾವಿಕ ಸುಖ ಕಂಡರೆ ಮತ್ತೊಂದು ಬೇಂದ್ರೆಯವರ 'ಹಕ್ಕಿಹಾರಿತು ನೋಡಿದಿರಾ ?' ಕವಿತೆಯನ್ನು ನೆನಪಿಸುತ್ತದೆ. ಕಾಲ ಪಕ್ಷಿಯನ್ನು ಕುರಿತ ಚಿಂತನೆಯಿದೆ.

ಅಜ್ಞಾತ ತತ್ವಪದಕಾರರು

'ಸುಮ್ಮನಿರು ನಾಲಗೆ' ಹಾಗೂ 'ಸಾವಿನ ಗುಂಡಿ' ಈ ಎರಡೂ ತತ್ವಪದಗಳಿಗೆ ತತ್ವಪದಕಾರರು ಯಾರೆಂದು ತಿಳಿದಿಲ್ಲ. ಇವು ಗುರುವಿನ ಮಹತ್ವವನ್ನು ಕುರಿತು ಹೇಳುತ್ತವೆ. ಬರಿ ಮಾತಿಗಿಂತ ಆಡಿದ ಮಾತನ್ನು ಕಾರ್ಯರೂಪಕ್ಕೆ ತರುವುದು ಮುಖ್ಯ. ಅನಗತ್ಯ ಮಾತು, ಅಹಂಕಾರ, ಕೋಪ, ತಾಪಗಳನ್ನು ಮೀರದೆ ಪ್ರಶಾಂತ ಚಿತ್ತವನ್ನು ಹೊಂದಲು ಸಾಧ್ಯವಿಲ್ಲ ಎಂಬುದನ್ನು ಸೂಚಿಸುವ ಇವು ಆಧುನಿಕ ಜಗತ್ತಿಗೆ ನೇರವಾಗಿ ಸಂಬಂಧಿಸಿದುದಾಗಿದೆ.

ಶಬ್ದಾರ್ಥ :

ಬಯಲು = ಶೂನ್ಯ, ಬರಿದು ; ಭ್ರಾಂತು = ತಪ್ಪು ತಿಳಿವಳಿಕೆ , ಭ್ರಮೆ , ಭ್ರಾಂತಿಗೆ ಒಳಗಾಗುವುದು ; ಬನ್ನಬಡು = ಕಷ್ಟಪ(ಬ)ಡು, ತೊಂದರೆಗೊಳಗಾಗು ; ನಸಿ = ಸೊರಗು, ಕ್ಷೀಣವಾಗು, ಬಡವಾಗು ; ವಸುಧೆ = ಭೂಮಿ, ಪೃಥ್ವಿ, ವಸುಂಧರೆ ; ದಮ = ಇಂದ್ರಿಯ ನಿಗ್ರಹ, ಸಸಿನೆ = ನೇರವಾಗಿ , ಯೋಗ್ಯವಾಗಿ, ಕ್ಷೇಮವಾಗಿ, ಸುಮ್ಮನೆ, ಮೌನವಾಗಿ, ಸರಳವಾಗಿ ; ಕಿಸುಕುಳ = ಕೊಳೆ, ಹೊಲಸು, ಹೇಯವಾದ ; ಒಸೆ = ಒಲಿ, ಮೆಚ್ಚು ; ಅನುಭಾವ = ಆತ್ಮಾನುಭವ , ಅತೀಂದ್ರಿಯವಾದ ಅನುಭವ; ತನು = ದೇಹ, ಶರೀರ; ಭಾಂಡ = ಪಾತ್ರೆ ; ಜಂಜಡ = ತೊಂದರೆ , ಕಷ್ಟ ವ್ಯಥೆ, ಚಿಂತೆ; ಘನ = ಶ್ರೇಷ್ಠ; ವಿರತಿ = ವಿರಕ್ತಿ, ಕಾಷ್ಠ=ಸೌದೆ, ಕಟ್ಟಿಗೆ ; ದುರಿತ = ಪಾಪ ; ಶಮ= ನೆಮ್ಮದಿ,

ಶಾಂತಸ್ಥಿತಿ, ಆತ್ಮಸಂಯಮ, ಮನೋನಿಗ್ರಹ; ಕರಿಕೆ= ಗರಿಕೆ ಹುಲ್ಲು (ಕಳೆ) ಕಾಕ= ದುಷ್ಟ ನೀಚ , ಕಾಗೆ ; ಆಸಿ = ಆಸೆ ; ಉಸಲ = ಉಸಲಿ(ಳಿ) ಹೆಸರು, ಕಡಲೆ ಮೊದಲಾದ ಕಾಳನ್ನು ಬೇಯಿಸಿ ಸಂಬಾರ / ಒಗ್ಗರಣೆ ಹಾಕಿದ ತಿನಿಸು, ಗುಗ್ಗುರಿ, (ಇಲ್ಲಿ ಉಸಲ ಬಿಟ್ಟು ಅಂದರೆ ಉಪವಾಸವಿದ್ದು) ; ಸೋಹಂ = ತಾನೇ ಪರಮಾತ್ಮ ಎಂಬ ಭಾವನೆ; ಪಟ್ಟಚರಮೂರ್ತಿ =ಪಟ್ಟದ ಆಸೆಯೂ ಬೇಕು, ಭೋಗದ ಲಾಲಸೆಯೂ ಬೇಕು ; ಮುಂಡಾಸು = ರುಮಾಲು, ಪೇಟ; ಹಚ್ಚಡ = ಹೊದಿಕೆ; ಕ್ಲೇಶ = ಕಷ್ಟ; ತ್ರಿಗುಣ-೩ ಗುಣಗಳು-ಸತ್ತ್ವ, ರಜಸ್ಸು ಮತ್ತು ತಮಸ್ಸು (ಇಲ್ಲಿ ಈ ಮೂರು ಗುಣಗಳನ್ನು ಮುಂಡಾಸಿಗೆ ಹೋಲಿಸಲಾಗಿದೆ; ಆರು ಹಚ್ಚಡ = ಅರಿಷಡ್ವರ್ಗಗಳು, ಷಟ್ + ಅರಿ= (ದೇಹಕ್ಕಿರುವ) ಆರು ಶತ್ರುಗಳು-ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರ ; ಅರವಿ = ಬಟ್ಟೆ ಸವುಳು=ಸವಳು, ಉಪ್ಪು, ಉಪ್ಪಿನ ಅಂಶವುಳ್ಳ ಮಣ್ಣು; ಅಬ್ಬೆ=ಅಮ್ಮ; ಉಟ್ಟಿರ= ಮಡಿಲು, ಉಡಿಗಂಟು; ಗಂಟೀ ಚೌಡ್ಯಾರು =ಗಂಟು ಕದಿಯುವವರು ; ಪಟ್ಟೇವು = ವಸ್ತ್ರ, ಬಟ್ಟೆ; ರೊಕ್ಕ =ಹಣ; ಹಸನ = ಶುಭ್ರ; ಜೇರು=ನಿಶ್ಶಕ್ತಿ, ದುರ್ಬಲತೆ; ಗಿಂಡಿ =ಕಿರಿದಾದ ಬಾಯುಳ್ಳ ಪಾತ್ರೆ; ಶಿಂಪಿಗ = ಬಟ್ಟೆ ಹೊಲೆಯುವವ, ದರ್ಜಿ ; ಕಂಪನಿ ಸರಕಾರ =ಬ್ರಿಟಿಷ್ ಸರ್ಕಾರ; ಬೈಲು = ಬಯಲು ; ಆರು ಮಂದಿ ಅಕ್ಕತಂಗಿಯರು = ಅರಿಷಡ್ವರ್ಗಗಳು (ಕಾಮ, ಕ್ರೋಧ,ಲೋಭ, ಮೋಹ, ಮದ, ಮತ್ಸರ) ; ಮೂರು ಮಂದಿ ಮುತ್ತೈದೆಯರು ; ತ್ರಿಗುಣ = ಸತ್ವ, ರಜಸ್ಸು, ತಮಸ್ಸು; ಶಶಿಧರ = ಶಿವ (ಶಶಿ = ಚಂದ್ರ – ಚಂದ್ರನನ್ನು ಧರಿಸಿದವ) ; ಬಿಸಜ = ನೀರಿನಲ್ಲಿ ಹುಟ್ಟಿದುದು, ಕಮಲ ; ಬಿಸಜಭವ = ಕಮಲದಲ್ಲಿ ಹುಟ್ಟಿದವ ಬ್ರಹ್ಮ; ದ್ವೈತ = ಎರಡು, ಜೊತೆ; ಕಿಂಕರ = ಸೇವಕ; ಚಿತ್ಸೂರ್ಯ = ಚಿತ್ +ಸೂರ್ಯ = ಮನಸ್ಸಿನ ಸೂರ್ಯ, ಸೂರ್ಯಸ್ಪಷ್ಟತೆ, ಮನಸಿನೊಳಗಿದ್ದದ್ದು ; ಮಾರಾರಿ = ಮಾರ (ಮನ್ಮಥ) +ಅರಿ = (ಶತ್ರು) = ಮನ್ಮಥನ ಶತ್ರು, ಶಿವ ; ಸುಸರಿ= ಸುಸರ, ಸ್ನೇಹ, ಗೆಳೆತನ, ಹೊಂದಾಣಿಕೆ ; ಮಾಯೆ =ಮೋಸ, ಕಪಟ , ಗಾರುಡಿ, ಇಂದ್ರಜಾಲ, ಭ್ರಮೆ, ಭ್ರಾಂತಿ, ವ್ಯಾಮೋಹ; ಭಂಗಿ =ವಕ್ರತೆ, ತಂತ್ರ, ಉಪಾಯ ರೀತಿ, ಬಗೆ, ವಿಧಾನ, ಅಮಲು ಮತ್ತು ಮಾದಕತೆ; ಪಕ್ಷಿ = ಆತ್ಮವನ್ನು ಒಂದು ಪಕ್ಷಿಯ ರೂಪದಲ್ಲಿ ಚಿತ್ರಿಸಲಾಗಿದೆ. ಆತ್ಮಪಕ್ಷಿಯ ಸ್ವರೂಪ ಇಲ್ಲಿದೆ. ಲೋಕದ ಜಂಜಡಗಳನ್ನು ಮೀರಿ ಕಂಡುಕೊಳ್ಳುವ ಅನುಭಾವಿಕ ಆತ್ಮಪಕ್ಷಿಯಿದು, ಆತ್ಮ = ಜೀವ, ಚೇತನ, ಧರ್ಮ; ಚಿದ್ರೂಪ =ಚಿತ್ + ರೂಪ = ಚೈತನ್ಯ ಸ್ವರೂಪ; ಹಮ್ಮು =ಗರ್ವ , ಸೊಕ್ಕು, ಮದ, ಅಹಂಕಾರ.

ಟಿಪ್ಪಣಿಗಳು

೧. ಸಂತ , ಯೋಗಿ, ಯತಿ = ಯೋಗಿ ಮತ್ತು ಯತಿ ಎರಡೂ ಶಬ್ದಗಳು ನಮ್ಮಲ್ಲಿ ಒಂದೇ ಅರ್ಥದಲ್ಲಿ ಬಳಕೆಯಲ್ಲಿದ್ದವು. ಆದರೆ ಇಂಗ್ಲಿಷ್‌ನ ಸೈಂಟ್ ಪದವು ರೂಪಾಂತರಗೊಂಡು ಸಂತ ಎಂದಾಗಿ ಬಂದಿದೆ. ಯೋಗಿ,ಯತಿ ಎಂಬ ಅರ್ಥದಲ್ಲೇ ಇದನ್ನು ಬಳಸಲಾಗುತ್ತದೆ. ಈ ಮೂರೂ ಶಬ್ದಗಳನ್ನು ಇಂದು ಸಮಾನಾರ್ಥಕವಾಗಿ ಬಳಸಲಾಗುತ್ತಿದೆ.

೨. ಅನುಭಾವಿ, ನಿಸ್ಸಂಗಿ = ಸಂಸಾರದ ಕೌಟುಂಬಿಕ ಸಂಬಂಧಗಳನ್ನು ತೊರೆದವನನ್ನು ನಿಸ್ಸಂಗಿ ಎನ್ನಲಾಗುತ್ತದೆ. ಭಕ್ತಿಮಾರ್ಗದ ಮೂಲಕ ಬಾಳುತ್ತ ಅಧ್ಯಾತ್ಮ ಶೋಧನೆಯಲ್ಲಿ ತನ್ನನ್ನು ತೊಡಗಿಸಿಕೊಂಡವರನ್ನು ಅನುಭಾವಿ ಎನ್ನಲಾಗುತ್ತದೆ.

೩. ಬಾಲ ಬ್ರಹ್ಮಚಾರಿಯಾದ ಶಿವಯೋಗಿಗಳು ಮುಮ್ಮಡಿ ಕೃಷ್ಣರಾಜ ಒಡೆಯರು ನಂಜಾಖ್ಯ ಮತ್ತು ವೆಂಕಟರಾಯರ ಮೂಲಕ ಕಳುಹಿಸಿದ ವಸ್ತು ಒಡವೆಗಳನ್ನು ತಿರಸ್ಕರಿಸುತ್ತಾರೆ. ಆ ಪ್ರಸಂಗವನ್ನು ಕುರಿತ ತತ್ತ್ವಪದ 'ಒಳಗೇನು ಸುಖವಿಲ್ಲ!' ಇಲ್ಲಿನ ಭಾವ – ಭಾಷೆಗಳು ಆಧುನಿಕವಾಗಿದ್ದು ಪ್ರಸ್ತುತವೂ ಆಗಿವೆ.

ಸಂದರ್ಭ ಬಯಸುವ ವಾಕ್ಯಗಳು

೧. ಮುನ್ನಿನಂತೆ ಹೋಗಿ ತೊಟ್ಟು ಹತ್ತಬಲ್ಲುದೆ ?

೨. ಮುನ್ನಿನಂತೆ ಲೋಕದವರ ಕೂಡಬಲ್ಲನೆ ?

೩. ಭವಕೆ ಹೋಗಲವರು ತನಗೆ ಕೊರತೆಯಪ್ಪುದೆ ?

೪. ಶರೀರನೆಂದೆಂಬುವ ಹೊಲನ ಹಸನ ಮಾಡಿ.

೫. ಮನದ ಜಂಜಡವೆಂಬ ಮುಸುರೆಯ ತೊಳೆದು

೬. ಮಾತು ಕಲಿಯಬೇಕು

೭. ಆಸಿ ಅಳಿಯಬೇಕು ಮನಸಿನ ಹೇಸಿಗೆ ತೊಳೆಯಬೇಕು

೮. ಬಾಯಿಲೊಂದು ಆಡ್ತೀರಿ ! ಮನಸಿನೊಳಗೊಂದು ಮಾಡ್ತೀರಿ

೯. ಶೀಲವಂತರಂತೀರಿ । ಸುಳ್ಳೆ ಶೀಲ ಮಾಡ್ತೀರಿ

೧೦. ಈಶನು ತಾನೆಂದು ತಿಳಿಯದ ಮೂರ್ಖರು ಆಸೆಬುರುಕರೆಲ್ಲ ಪಂಡಿತರೆ ?

೧೧. ಹಲವು ದೇಶವ ತಿರುಗಿ ನಾನಾ ಭಾಷೆಯ ಕಲಿತು ಬಲುಶಾಣೆರಾದವರು ಪಂಡಿತರೆ?

೧೨. ಸುಲಭದಿ ಸೂಕ್ಷ್ಮದಿ ನಿಜವಸ್ತು ತಿಳಿಯದ ಬಲು ಡಾಂಭಿಕರಿವರೆಲ್ಲ ಪಂಡಿತರೆ?

೧೩. ಅಕ್ಷರ ಕನ್ನಡ ಆರ್ಯ ಸಂಸ್ಕೃತ ತೆಲಗು ಶಿಕ್ಷಕರಿವರೆಲ್ಲ ಪಂಡಿತರೆ?

೧೪. ಗದ್ದಲದೊಳಗ ಯಾತಕ ನಿಂತಿ

೧೫. ಕೊಸರಿ ಕೊಸರಿ ಹೋಗದಿರು

೧೬. ಮರವಿಯ ಅರವಿಯ ಹೊಲಿವಂಥ ಸೂಜಿಯೇ

೧೭. ಇಂಪುಳ್ಳ ದಾರಕ್ಕೆ ಸೊಂಪುಗೂಡಿಸುವಂಥ

೧೮. ಅಜ್ಞಾನದಿಂದ ಸೋರುತಿಹುದು ಮನೆಯ ಮಾಳಿಗೆ

೧೯. ಹರಕು ಚಪ್ಪರ ಜೇಕು ಗಿಂಡಿ, ಮೇಲಕೇರಿ ಮೆಟ್ಟಲಾರೆ

೨೦. ಕಂಚಿಂದಲ್ಲ ತಾಮ್ರದ್ದಲ್ಲ, ಮೀರಿ ಮೀರಿ ಮಿಂಚುತದ

೨೧. ಮೇಲೆ ಚೆಂದದ ಸುಖವು ಒಳಗೇನು ಸುಖವಿಲ್ಲ

೨೨. ನಮ್ಮ ಸುಖ ಮೂಕ ಸಕ್ಕರೆ ಮೆದ್ದ ಪರಿಯಂತೆ

೨೩. ಕಣ್ಣು ತೆರೆದು ತನ್ನರಸುವ ಜನರಿಗೆ ಬಣ್ಣ ಬಣ್ಣಗಳಾಗಿಹನಂತೆ

೨೪. ಅವರವರ ಭಕ್ತಿಗೆ ಅವರವರ ಭಾವಕ್ಕೆ

೨೫. ಕುಲಛಲವ ಹಿಡಿದಿರುವ ಕಲಕು ಮನದವರಲ್ಲಿ

೨೬. ಮಾರಾರಿ ಶಿವ ಮಾಡಿದಾಟವಿದು ತಿಳಿಯದು.

೨೭. ಮಾತಾ–ಪಿತರೆಂಬೋ ಮೋಹ ಬಿಡಬೇಕು

೨೮. ಅಜ್ಞಾನಿ ಜನರ ದುಸ್ಸಂಗ ಬಿಡಬೇಕು

೨೯. ಆತ್ಮಾರ್ಥವನರಿತು ಹರಿಯ ನೆನೆ ಮನವೇ

೩೦. ಜಾತಿ ಧರ್ಮವ ಮಾಡೋ ಪಾತಕರ ಬಿಡಬೇಕು

೩೧. ಏನ ಹೇಳಲಿ ಇವರೆಲ್ಲ ಕಾಡಿಸಿಯೆನ್ನನು

೩೨. ಬೆಂಕಿ ತಿಂದು ಬೆಂಕಿ ಕಾರುತ್ತಿತ್ತೋ ಒಳಗ ಹೊರಗ

೩೩. ಗುರುಪುತ್ರಗ ತೋರುತದ ಗುರುಮಾರ್ಗ

೩೪. ಅಗಲಿಗೆ ಏಳು ಸಮುದ್ರಕಿಂತ ಎಷ್ಟೋ ಹೊರಗೆ

೩೫. ನಿಜವೆ ನಿರ್ಗುಣದೊಳು ಸೇರಿದೆ

೩೬. ಜಲವಿಲ್ಲ ಬೆಳೆ ಬೆಳೆದಾಡಿದೆ

೩೭. ಕಾವಿಯನುಟ್ಟು ತಿರುಗುವಿರೆಲ್ಲ

೩೮. ಸಾವಿನ ಗುಂಡಿಲಿ ಬೀಳುವಿರಲ್ಲ

೩೯. ಪರರ ನಿಂದಿಸಬೇಡ

೪೦. ಪರರು ಎನ್ನುವರೆಂದು ಭೇದ ಮಾಡಲೇ ಬೇಡ

೪೧. ಕೋಪತಾಪವು ಬೇಡ

ಪ್ರಶ್ನೆಗಳು

೧. ತಮ್ಮನ್ನು ತಾವು ಅರಿಯಬೇಕಾದರೆ ವಿವೇಕಿಯಾದವರ ಎಚ್ಚರ ಹೇಗಿರಬೇಕು?

೨ 'ಶಿವನ ನಿಜವನ್ನು ತಾನು ಅರಿಯಬೇಕೆಂದರೆ ಬಯಲ ಭ್ರಾಂತನ್ನು ಬಿಡಬೇಕು ಎಂಬ ವಿಚಾರವನ್ನು ಮುಪ್ಪಿನ ಷಡಕ್ಷರಿ ತಮ್ಮ ತತ್ವಪದದಲ್ಲಿ ನಿರೂಪಿಸಿರುವ ಬಗೆ ಹೇಗೆ ?

೩. 'ಶರೀರವೆಂಬ ಹೊಲವನ್ನು ಹಸನು ಮಾಡಿ' – ಏನು ಮಾಡಬೇಕೆಂದು ಶಿವಯೋಗಿಗಳು ಹೇಳುತ್ತಿದ್ದಾರೆ ?

೪. ಅನುಭಾವದಡಿಗೆಯ ರುಚಿಯ ಮೂಲಕ ಮೋಕ್ಷವನ್ನು ಸಂಪಾದಿಸಬಹುದಾದ ಮಾರ್ಗ ಯಾವುದು?

೫. ಅನುಭಾವಿಗಳೆಲ್ಲ ಕೂಡಿ ಮೋಕ್ಷವೆಂಬ ಪಾಕವನ್ನು ಸವಿದುಣ್ಣಲು ಮಾಡಬೇಕಾದುದೇನು? '

೬. ಮೋಕ್ಷ ಸಂಪಾದನೆಗೆ ಸರ್ಪಭೂಷಣ ಶಿವಯೋಗಿಗಳು ಏನು ಮಾಡ ಬೇಕೆನ್ನುತ್ತಾರೆ?

೭. ಮಾತಿನ ನೀತಿಯನ್ನು ಕುರಿತು ಕಡಕೋಳ ಮಡಿವಾಳಪ್ಪನವರ ತತ್ವಪದವೇನು ಹೇಳುತ್ತದೆ ?

೮. ತತ್ತ್ವದ ಅರ್ಥ ತಿಳಿಯಲು ಮಾತಿನ ನೀತಿ ಹೇಗೆ ಸಹಕಾರಿಯಾಗುತ್ತದೆ?

೯. 'ಸುಳ್ಳೆ ಶೀಲ ಮಾಡುವ' ಜನರ ಮನಸ್ಥಿತಿಯನ್ನು ಕುರಿತು ಬರೆಯಿರಿ.

೧೦. ಒಣ ಪಾಂಡಿತ್ಯ ಹಾಗೂ ಪಾಂಡಿತ್ಯದ ಅಹಮಿಕೆಯಲ್ಲಿ ಮೆರೆಯುವ ಪಂಡಿತರನ್ನು ಬಸವಲಿಂಗ ಶರಣರು ತರಾಟೆಗೆ ತೆಗೆದುಕೊಂಡಿರುವುದು ಹೇಗೆ ?

೧೧. ಕಡಲೂರೇಶನನ್ನು ಮೆಚ್ಚಿಸುವಂಥ ಅಗಸರೆಂಬ ರೂಪಕ 'ಅಗಸರೋ ನಾವು ಅಗಸರೋ' ತತ್ವಪದದಲ್ಲಿ ಹೇಗೆ ಮೂಡಿಬಂದಿದೆ ?

೧೨. ಪಕ್ವಗೊಳ್ಳದ ಮನಸ್ಸು, ಹಸನಗೊಳ್ಳದ ಬದುಕಿನ ಚಿತ್ರಣ 'ಮನೆಯ ಮಾಳಿಗೆ' ಪದದಲ್ಲಿ ಹೇಗೆ ಮೂಡಿ ಬಂದಿದೆ ?

೧೩. 'ಕೊಡ' ಏನನ್ನು ಸಂಕೇತಿಸುತ್ತಿದೆ ? ಬುದ್ದಿವಂತರು 'ಕೊಡ'ವನ್ನು ಹೇಗೆ ತಿಳಿದುನೋಡಬೇಕೆಂದು ಶರೀಫರು ಹೇಳುತ್ತಾರೆ?

೧೪. ಸೂಜಿಯ ಮಹತ್ವವನ್ನು ತಿಳಿಸಿ.

೧೫. 'ಬಿದ್ದಿಯಬೇ ಮುದುಕಿ' ತತ್ತ್ವಪದದ ಸಾರವನ್ನು ಸಂಗ್ರಹಿಸಿ ಬರೆಯಿರಿ.

೧೬. ಸುಖವೆಂಬುದು ಕೇವಲ ಭೌತಿಕ ವಸ್ತುಗಳಲ್ಲಿಲ್ಲವೆಂಬುದು 'ಒಳಗೇನು ಸುಖವಿಲ್ಲ' ಎಂಬ ತತ್ವಪದದಲ್ಲಿ ಹೇಗೆ ಮೂಡಿಬಂದಿದೆ?

೧೭. 'ತಿರಿಗೊಯ್ಯಿರಿ ಚೆಂದಲ್ಲ, ದೊಡ್ಡಸ್ಥಳ ಸುಸರಿಗಳು ಸಣ್ಣಸ್ಥಲಗಳೇನು ಚೆಂದ?' ಈ ಸಾಲಿನ ಮೂಲಕ ಇಡೀ ತತ್ವಪದ ಹೇಳುವುದೇನು?

೧೮. ಅರಸುವ ಜನರಿಗೆ ಶಿವನ ರೂಪು ಕಾಣುವುದು ಹೇಗೆ ?

೧೯. 'ಅವರವರ ಭಕ್ತಿಗೆ, ಅವರವರ ಭಾವಕ್ಕೆ' ಶಿವ ಕಾಣುವ ಪರಿ ಹೇಗೆ? ಬಾಲಲೀಲಾ ಮಹಂತ ಶಿವಯೋಗಿಗಳ ತತ್ವಪದಗಳ ಹಿನ್ನೆಲೆಯಲ್ಲಿ ವಿವರಿಸಿ.

೨೦. ಸಾಂಸಾರಿಕ ಸುಖಕ್ಕಿಂತ ಆಧ್ಯಾತ್ಮಿಕ ಸುಖವೇ ನಿಜವಾದ ಸುಖ ಎಂಬುದು 'ಆತ್ಮನ ಆನಂದ' ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ?

೨೧. 'ಜಾತಿಭೇದದ ಪಾತಕ ' ತತ್ವಪದದ ಮೂಲಕ ಕೈವಾರ ನಾರೇಯಣಪ್ಪ ಹೇಳುತ್ತಿರುವುದು ಏನು?

೨೨. ಆತ್ಮಾನಾತ್ಮ ಅನುಭವವನ್ನು 'ನಿಜವೆ ನಿರ್ಗುಣ' ತತ್ವಪದ ನಿರೂಪಿಸುವ ಬಗೆ ಹೇಗೆ ?

೧೩. ಬೆಳೆ ಬೆಳೆಯುವ ರೂಪಕವನ್ನು ಯಾವುದಕ್ಕೆ ಹೋಲಿಸಲಾಗಿದೆ?

೧೪. 'ಏಳು ಸಮುದ್ರಕ್ಕಿಂತ ಹೊರಗಿರುವ ಪಕ್ಷಿ'ಯನ್ನು ಚಲವಾದಿ ಚಂದಪ್ಪ ತಮ್ಮ ತತ್ತ್ವಪದದಲ್ಲಿ ಕಾಣಿಸುವ ಬಗೆ ಹೇಗೆ ?

೧೫. ಇಲ್ಲಿಯ ಪಕ್ಷಿ ಯಾವುದಕ್ಕೆ ಸಂಕೇತ ? ವಿವರಿಸಿ.

೧೬. 'ಗುರುಪುತ್ರಗೆ ಗುರು ಮಾರ್ಗತೋರುವ' ಪಕ್ಷಿಯ ಸ್ವರೂಪ ಎಂಥದು ?

೧೭. 'ಸಾವಿನ ಗುಂಡಿ ತತ್ವಪದ ಹೇಳುತ್ತಿರುವುದೇನು?

೧೮. 'ಸುಮ್ಮನಿದ್ದರೆ ನೀನು ಬ್ರಹ್ಮನಾಗುವಿ ಎಂದು ನಾಲಗೆಗೆ ಹೇಳುತ್ತಿರುವುದೇಕೆ?

೧೯. ಭೂಪ ಚಿದ್ರೂಪನು ತಾನೆ ಆಗುವುದು ಯಾವಾಗ?

೨೦. 'ಸಾವಿನ ಗುಂಡಿ'ಗೆ ಬೀಳದಿರಲು ಹೇಗಿರಬೇಕೆಂದು ತತ್ವಪದಕಾರ ಬಯಸುತ್ತಾನೆ?

ಸರ್ವಜ್ಞನ ವಚನಗಳು

ಸರ್ವಜ್ಞನ ತ್ರಿಪದಿಗಳು

೧. ಅನ್ನವನಿಕ್ಕುವುದು । ನನ್ನಿಯ ನುಡಿಯುವುದು
ತನ್ನಂತೆ ಪರರ ಬಗೆವುದು ಸ್ವರ್ಗ ತಾ
ಬಿನ್ನಾಣವಲ್ಲ ಸರ್ವಜ್ಞ॥

೨. ಕೊಟ್ಟುದು ತನಗೆ ಬಯ್ತಿಟ್ಟುದ್ದುಪರರಿಗೆ
ಕೊಟ್ಟುದು ಕೆಟ್ಟಿತೆನಬೇಡವದು ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ॥

೩. ಆಡದೇ ಮಾಡುವನು । ರೂಢಿಯೊಳಗುತ್ತಮನು
ಆಡಿ ಮಾಡುವನು ಮಧ್ಯಮನು ಅಧಮನು ತಾ
ನಾಡಿಯಾಗಿ ಮಾಡ ಸರ್ವಜ್ಞ॥

೪. ಹಸಿವಿಲ್ಲದುಣ ಬೇಡ । ಹಸಿದು ಮತ್ತಿರಬೇಡ
ಬಿಸಿ ಬೇಡ ತಂಗಳವು ಬೇಡ ವೈದ್ಯನ
ಗಸಣಿಯೇ ಬೇಡ ಸರ್ವಜ್ಞ॥

೫. ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವಗ್ನಿಯೊಂದೇ ಇರುತಿರಲು ಕುಲಗೋತ್ರ
ನಡುವೆ ಎತ್ತಣದು? ಸರ್ವಜ್ಞ॥

೬. ಜಾತಿ ಹೀನರ ಮನೆಯ । ಜ್ಯೋತಿ ತಾ ಹೀನವೆ ?
ಜಾತಿ ವಿಜಾತಿ ಎನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ॥

೭. ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ । ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ॥

೮. ನಿತ್ಯ ನೇಮಗಳೇಕೆ । ಮತ್ತೆ ಪೂಜೆಗಳೇಕೆ
ನೆತ್ತಿ ಬೋಳೇಕೆ ಜಡೆಯೇಕೆ ಅರಿದು ನೆರೆ
ಸತ್ಯ ಉಳ್ಳವಗೆ ಸರ್ವಜ್ಞ॥

೯. ಅಟ್ಟ ಪಾಕದ ರುಚಿಯ । ಸಟ್ಟುಗ ಬಲ್ಲುದೇ
ಶ್ರೇಷ್ಠರುಗಳೆಂದು ಎನಬೇಡ ಅರಿವಿನ
ಬಟ್ಟೆ ಬೇರೆಂದ ಸರ್ವಜ್ಞ॥

೧೦. ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರಲಿ ಆಡಿ ಕಲಿಕಲಿತು ವಿದ್ಯದ
ಪರ್ವತವಾದ ಸರ್ವಜ್ಞ॥

೧೧. ಸಜ್ಜನರ ಸಂಗ ತಾ । ಹೆಜ್ಜೇನ ಕೊಡನಂತೆ
ದುರ್ಜನರ ಕೂಟವಣು ಮಾತ್ರ ಬಚ್ಚಲು
ಬಜ್ಜರದಂತೆ ಸರ್ವಜ್ಞ॥

೧೨. ಗುರುವ ನಿಂದಿಸಬೇಡ । ಪರವ ಹಳಿಯಲು ಬೇಡ
ಬರೆವವರ ಕೂಡೆ ಹಗೆ ಬೇಡ ಬಂಗಾರ
ದೆರವು ತರಬೇಡ ಸರ್ವಜ್ಞ॥

೧೩. ರಸಿಕನಾಡಿದ ಮಾತು । ಶಶಿ ಉದಯವಾದಂತೆ
ರಸಿಕನಲ್ಲದವನ ಬರಿಮಾತು ಕಿವಿಯೊಳಗೆ ಕೂ
ರ್ದಸಿಯು ಬಡಿದಂತೆ ಸರ್ವಜ್ಞ॥

೧೪. ಮಾತಿಂದೆ ನಗೆ ನುಡಿಯು । ಮಾತಿಂದೆ ಕೊಲೆ ಹಗೆಯೂ
ಮಾತಿಂದೆ ಸರ್ವರಿಗೆಯುಪಚಾರ ಲೋಕಕ್ಕೆ
ಮಾತೆ ಮಾಣಿಕ್ಯವು ಸರ್ವಜ್ಞ॥

೧೫. ಇದ್ದಲ್ಲಿ ಸಲುವ ಹೋಗಿದ್ದಲ್ಲಿಯೂ ಸಲುವ
ವಿದ್ಯೆಯ ಕಲಿತ ಬಡವ ತಾ ಗಿರಿಯ ಮೇ
ಲಿದ್ದರೂ ಸಲುವ ಸರ್ವಜ್ಞ॥

೧೬. ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು
ಮಾತ ತಾನರಿಯದಧಮಂಗೆ ಮಾಣಿಕವು
ತೂತು ಬಿದ್ದಂತೆ ಸರ್ವಜ್ಞ॥

೧೭. ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲರಿಯರು, ಗುರುವಿಂದ
ಬಂಧುಗಳು ಉಂಟೆ ಸರ್ವಜ್ಞ॥

೧೮. ಜ್ಞಾನದಿಂ ಮೇಲಿಲ್ಲ ಶ್ವಾನನಿಂ ಕೀಳಿಲ್ಲ
ಭಾನುವಿಂದಧಿಕ ಬೆಳಗಿಲ್ಲ ಜಗದೊಳಗೆ
ಜ್ಞಾನವೇ ಮಿಗಿಲು ಸರ್ವಜ್ಞ॥

೧೯. ಉತ್ತಮರು ಪಾಲ್ಗಡಲೊಳೆತ್ತಿಹರೆ ಜನ್ಮವನು
ಉತ್ತಮರು ಅಧಮರೆನಬೇಡ ಹೊಲೆಯಿಲ್ಲ
ದುತ್ತಮರು ಎಲ್ಲಿ ಸರ್ವಜ್ಞ॥

೨೦. ಜಾತಿ ಜಾತಿಗೆ ವೈರ, ನೀತಿ ಮೂರ್ಖಗೆ ವೈರ
ಪಾತಕವು ವೈರ ಸುಜನರ್ಗೆ ; ಅರಿದಂಗೆ
ಏತರದು ವೈರ ಸರ್ವಜ್ಞ॥

ಕವಿ–ಕಾವ್ಯ ವಿಚಾರ

ಸರ್ವಜ್ಞ

ಸುಮಾರು ೧೬ನೇ ಶತಮಾನದ ಆದಿಭಾಗದಲ್ಲಿದ್ದ ಸರ್ವಜ್ಞ ಜನತೆಯ ಜನಪ್ರಿಯ ಕವಿ. ಇವನು ತನಗೆ ಜನ್ಮವಿತ್ತ ತಂದೆ–ತಾಯಿಯರನ್ನು ನಿರಾಕರಿಸಿ ತಾನು 'ಚಂದ್ರಶೇಖರನ ವರಪುತ್ರ' ಎಂದೇ ಕರೆದುಕೊಂಡಿದ್ದಾನೆ. ಈತನ ವೈಯಕ್ತಿಕ ಜೀವನದ ಸಂಗತಿಗಳಾವುವೂ ಸ್ಪಷ್ಟವಿಲ್ಲ. ತನ್ನ ತಂದೆತಾಯಿಯರು ಮಾಳ–ಮಾಳಿ ಎಂದೂ, ತನ್ನ ಊರು ಧಾರವಾಡದ ಹತ್ತಿರದ ಅಂಬಲೂರೆಂದೂ ಈತ ತನ್ನದೊಂದು ತ್ರಿಪದಿಯಲ್ಲಿ ಹೇಳಿಕೊಂಡಿದ್ದಾನೆ. ಸರ್ವಜ್ಞನ ಒಂದೊಂದು ತ್ರಿಪದಿಗಳು ಸ್ವಯಂಪೂರ್ಣ ಮುಕ್ತಕಗಳು. ಇವುಗಳನ್ನು ವಚನಗಳೆಂದೂ ಕರೆಯುತ್ತಾರೆ, ಈತನ ಹೆಸರಿನಲ್ಲಿಯೇ ಸುಮಾರು ಎರಡು ಸಾವಿರಕ್ಕೂ ಮಿಕ್ಕು ರಚನೆಗಳು ದೊರೆಯುತ್ತವೆ. ಆದರೆ ವಿದ್ವಾಂಸರು ಒಂದು

ಸಾವಿರದಷ್ಟು ತ್ರಿಪದಿಗಳು ಮಾತ್ರ ಇವನದಾಗಿದ್ದು ಮಿಕ್ಕವು ಪ್ರಕ್ಷೇಪವಿರಬೇಕೆಂದು ಅಭಿಪ್ರಾಯಪಡುತಾರೆ. ಸೃಷ್ಟಿ ಗುರು, ವಿದ್ಯೆ, ಜ್ಞಾನ, ವೈದ್ಯ, ವೇದಾಂತ, ನೀತಿ, ಮನೆವಾರ್ತೆ, ವ್ಯವಸಾಯ, ವಿವಿಧ ವೃತ್ತಿ - ವ್ಯವಹಾರಗಳು, ಕಾಮಶಾಸ್ತ್ರ, ರಾಜ್ಯಶಾಸ್ತ್ರ ಸಮಾಜ, ಜ್ಯೋತಿಷ್ಯ ಮುಂತಾದವೆಲ್ಲ ಇವನ ತ್ರಿಪದಿಗಳಿಗೆ ವಸ್ತುಗಳಾಗಿವೆ.

ತೀವ್ರವಾದ ವ್ಯಂಗ್ಯ, ವಿಡಂಬನೆ, ಮೊನಚಾದ ಟೀಕೆ, ಚಿಕಿತ್ಸಕ ಮನೋಭಾವ ಇವುಗಳಿಂದ ಕೂಡಿದ ನಿರಾಡಂಬರ ಶೈಲಿ ಇವನದು. ಸಾಮಾನ್ಯರ ಬದುಕು ಇವುಗಳಿಂದ ಹಸನಾಗಬೇಕೆಂಬುದು ಅವನ ಆಶಯ. ಈತ ವೀರಶೈವ ಧರ್ಮದ ಅನುಯಾಯಿ ಯಾದರೂ, ಸ್ವಧರ್ಮ- ಪರಧರ್ಮವೆಂಬ ಭೇದವಿಲ್ಲದೆ, ಸಂದರ್ಭಾನುಸಾರ ನಿರ್ಭೀತನಾಗಿ ಟೀಕೆಗಳನ್ನು ಮಾಡುವುದರಿಂದ, ಇವನದು ವಿಶಾಲವಾದ ಮತಾತೀತ ಧೋರಣೆಯಾಗಿದೆ.

ಇಲ್ಲಿ ನಿಗದಿತ ಪಠ್ಯದಲ್ಲಿ ಅನ್ನ -ಹಸಿವು-ದಾನ, ಮಾತು-ವಿದ್ಯೆ , ಜ್ಞಾನ-ಗುರು-ಅರಿವು, ಜಾತಿ -ಕುಲ ಇಂಥ ವಿಷಯಗಳ ಮಹತ್ವವನ್ನು ಕುರಿತ ತ್ರಿಪದಿಗಳನ್ನು ವಿಂಗಡಿಸಿ ಕೊಡಲಾಗಿದೆ. ಇವು ಮುಖ್ಯವಾಗಿ ನೀತಿಪ್ರದವಾಗಿವೆ. ಸರಳವಾದ ಪದ ಬಳಕೆ, ಉಚಿತ ಅಲಂಕಾರಗಳ ಪ್ರಯೋಗ, ಪ್ರಾಸಬದ್ಧತೆ, ಪುನರಾವರ್ತನೆ ಬಯಸುವ ತ್ರಿಪದಿಯಂತಹ ಚಿಕ್ಕ ಛಂದೋಬಂಧ - ಇವೆಲ್ಲಾ ಸದಾ ನೆನಪಿನಲ್ಲಿ ಉಳಿಯಲು, ಮನನ ಮಾಡಲು ಸಹಕಾರಿಯಾದ ಗುಣಗಳಾಗಿವೆ. ಇಂದಿಗೂ ಕನ್ನಡಿಗರು ಇಂಥ ತ್ರಿಪದಿಗಳನ್ನು ಗಾದೆ ಮಾತುಗಳಷ್ಟೇ ಸರಳವಾಗಿ, ಪ್ರಾಸಂಗಿಕವಾಗಿ ಬಳಸುತ್ತಾರೆ ಎಂಬುದೇ ಸರ್ವಜ್ಞನ ಪ್ರಸ್ತುತತೆಗೂ , ಜನಪ್ರಿಯತೆಗೂ ಸಾಕ್ಷಿಯಾಗಿದೆ.

ಶಬ್ದಾರ್ಥ :

ಕೂರ್ದ್ದಸಿ = ಹರಿತವಾದ ಕತ್ತಿ (ಕೂರ್ =ಹರಿತವಾದ, ಅಸಿ = ಕತ್ತಿ) ; ಧಾತ =ಬ್ರಹ್ಮ; ಸಾರಾಯ = ಸಾರಾಂಶ ; ಎರವು = ಸಾಲ, ಕಡ ; ನನ್ನಿ = ಸತ್ಯ, ನಿಜ; ಗಸಣಿ = ಗೊಡವೆ, ಗೋಜು , ತೊಂದರೆ , ಕೋಟಲೆ ; ಬಜ್ಜರ = ನವರತ್ನಗಳಲ್ಲಿ ಒಂದು ವಜ್ರ ; ಅಟ್ಟು = ಅಡುಗೆ ಮಾಡು ; ಸಟ್ಟುಗ =ಸೌಟು.

ಸಂದರ್ಭ ಬಯಸುವ ವಾಕ್ಯಗಳು ;

೧. ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು

೨. ದೇವನೊಲಿದಾತನೇ ಜಾತ

೩. ಅಟ್ಟ ಪಾಕದ ರುಚಿಯ ಸಟ್ಟಗ ಬಲ್ಲುದೇ

೪. ಗುರುವ ನಿಂದಿಸಬೇಡ ಪರವ ಹಳಿಯಲು ಬೇಡ.

೫. ಲೋಕಕ್ಕೆ ಮಾತೆ ಮಾಣಿಕವು

ಪ್ರಶ್ನೆಗಳು

೧. ಅನ್ನದಾನವನ್ನು ಕುರಿತು ಸರ್ವಜ್ಞನ ವಚನಗಳಲ್ಲಿ ಕಂಡುಬರುವ ವಿಚಾರಗಳೇನು?

೨. ಜಾತಿ–ಕುಲವನ್ನು ಕುರಿತಂತೆ ಸರ್ವಜ್ಞನ ಅಭಿಪ್ರಾಯವೇನು?

೩. ಸರ್ವಜ್ಞನ ವಚನಗಳನ್ನು ಕುರಿತು ಬರೆಯಿರಿ.

೪. ಸರ್ವಜ್ಞನ ವಚನಗಳು ಇಂದಿಗೂ ಪ್ರಸ್ತುತವೆ ? ಹೇಗೆ ? ವಿಚಾರ ಮಾಡಿ.

೫. ಸರ್ವಜ್ಞನ ವಚನಗಳಿಂದ ನಿಜಕ್ಕೂ ಏನಾದರೂ ಪ್ರಯೋಜನವಿದೆಯೇ ? ಇದ್ದರೆ ಅವನ ವಚನಗಳ ಆಧಾರದಿಂದ ಚರ್ಚಿಸಿ.

೬. ಮಾತಿನ ಮಹತ್ವವನ್ನು ಕುರಿತು ಸರ್ವಜ್ಞನ ನಿಲುವುಗಳೇನು?

ಜಾನಪದ

ಗರತಿಯ ಹಾಡು

೧. ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳಹೊರಗ ! ಆಡಿದರ
ಬೀಸಣಿಕೆ ಗಾಳಿ ಸುಳಿದಾವ

೨. ಆಡಿ ಬಾ ಎನ ಕಂದ । ಅಂಗಾಲ ತೊಳೆದೇನು
ತೆಂಗೀನ ಕಾಯಿ ತಿಳಿನೀರ । ತಕ್ಕೊಂಡು
ಬಂಗಾರ ಮಾರಿ ತೊಳೆದೇನು

೩. ತೊಟ್ಟೀಲ ಹೊತ್ಕೊಂಡು ತವರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತಂಗ್ಯಮ್ಮ
ತಿಟ್ಹತ್ತಿ ತಿರುಗಿ ನೋಡ್ಯಾಳ

೪. ಹರಳ ಎಲೆ ಮುದ್ದು ಬೆಳ್ಳಿ ತಾವರೆ ಮುದ್ದು
ಹಣ್ಣುಳ್ಳ ಮರಕೆ ಗಿಣಿ ಮುದ್ದು । ಕಂದಯ್ಯ
ನೀ ಮುದ್ದು ನಮ್ಮ ಮನೆಗೆಲ್ಲ

೫. ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಕೆ ಗಾಳಿ ಸುಳಿದಾವ

೬. ತೊಟ್ಟಿಲೊಳಗಿಂದ ಕಂದ ಬೆಟ್ಯಾಕೆ ಚೀಪೀತು
ಹೊಟ್ಟೆ ತುಂಬೀತೆ ಇದರಿಂದ । ರಾಮಾರು
ಬೆಟ್ಗೆ ತುಂಬಿದರು ಅಮೃತಾವ

೭. ತೊಟ್ಟಿಲ ಒಳಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಅಕ್ಕಳಿಸಿ ನಗುವೋನ । ನನ್ನಯ್ನ
ನೆತ್ತೀಲಿ ಕಂಡೆ ಹರಳೇಲೆ

೮. ತೊಟ್ಟಿಲೊಳಗಿನ ಕಂದ ತೋಳು ಬೀಸುವ ಚಂದ
ರಟ್ಟೆ ನೊಂದಾವು ಎಲೆ ಕಂದ । ನಿಮ್ಮವ್ವ
ದೃಷ್ಟಿ ಮುರಿಲಾಕ ತಿಳಿಯಾಳು

೯. ಬಾಳೆ ಹಣ್ಣಿನಂತೆ ಬಾಲಾನ ಮೈಚೆಂದ
ಏನುಂಡು ಈ ಮಗನ ನೀ ಹಡೆದೆ । ತವರ್ಮನೆ
ಹಾಲುಂಡು ಹಸುರು ಬಳೆಯುಟ್ಟು

೧೦. ಸಂಜೆ ಸಿರಿದೇವಿ ಬಂದ್ಹೋಗು ಮನೆಗಂಟ
ಮಂದಲಿಗ್ಯಾವೆ ಮರುಗಾವೆ । ನೀ ಕೊಟ್ಟ
ಕಂದಯ್ಯನಿದೆ ತೊಡೆಮ್ಯಾಲೆ

೧೧. ಯಾತ ಯಾತರ ಗಾಳಿ ಎಲೆಯ ತೋಟದ ಗಾಳಿ
ಸುತ್ತಾಲು ಗಾಳಿ ಸುಳಿಗಾಳಿ । ನನ್ನಯ್ಯ
ತೊಟ್ಟಿಲ ಗಾಳಿ ಮನೆ ತುಂಬ

೧೨. ಯಾತಕಳುತಾನೆಂದು ಎಲ್ಲಾರು ಕೇಳ್ಯಾರು
ಕಾಯದ ಹಾಲಕೆನೆ ಬೇಡಿ । ಕಂದಯ್ಯ
ಕಾಡಿ ಕೈ ಬಿಟ್ಟು ಇಳಿಯಾನು

೧೩. ನಡೆದು ಬಾ ಕಂದಯ್ಯ ನಡಗೀಯ ನೋಡೇನು
ಪದುಮದ ಪಾದ ಬಲಗಾಲು । ಕಂದಯ್ಗೆ
ಕಿರುಗೆಜ್ಜೆ ಇಡಿಸಿ ನೋಡೇನು

೧೪. ಹಸಿರಂಗಿ ತೊಡಿಸಿದೆ ಹಾಲ್ಗಡಗ ಇಡಸೀದೆ
ಹಳ್ಳಕ ನೀನು ಬರಬೇಡ । ನನಕಂದ
ಬೆಳ್ಳಕ್ಕಿ ಹಿಂಡು ಬೆದರ್‍ಯಾವು

೧೫. ಗುಬ್ಬಿ ನನ ಕಂದಯ್ನ ಗೆಜ್ಜೆ ಸಪ್ಪುಳ ಕೇಳಿ
ನಿಬ್ಬಣದೆತ್ತು ಬೆದರ್‍ಯಾವು । ಬೆಟ್ಟ ಸೇರಿ
ಮಧ್ಯಾಹ್ನ ಮೇವ ಮರೆತಾವೊ

೧೬. ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ಕಂದ
ಜ್ಯೋತಿಯೆ ಆಗು ಜಗಕೆಲ್ಲ

೧೭. ಬಡತನ ನನಗಿರಲಿ ಬಾಳು ಮಕ್ಕಳಿಗಿರಲಿ
ಮ್ಯಾಗ ಗುರುವಿನ ದಯವಿರಲಿ । ಭಗವಂತ
ಬಡತನದ ಚಿಂತಿ ನಿನಗಿರಲಿ

೧೮. ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ । ಭೂಮ್ತಾಯ
ಎದ್ದೊಂದು ಗಳಿಗಿ ನೆನೆದೇನ

೧೯. ಸುಮ್ಮನೆ ಬೀಸಿದರ ಬೀಳದು ಈ ಕಲ್ಲು
ನಾಗಸೊರದಂತೆ ದನಿಯೆತ್ತಿ । ಹಾಡಿದರ
ಗಮ್ಮನೆ ಬೀಳ್ವಾದು ಈ ಕಲ್ಲು

೨೦. ಎಳ ಹಲ್ಲು ಅಡವ್ಯಾಗ ತಿಳಿನೀರು ಕೊಳದಾಗ
ಬಲವುಳ್ಳ ನಾಯಿ ಸಾಕ್ಯಾನ । ನನ ತಮ್ಮ
ಒನಪೀಲೆ ಕುರಿಯ ಕಾಯ್ದಾನ

೨೧. ಅಣ್ಣಾನ ಹೊಲದಾಗ ಬೆಳ್ಳಾನ ಬಿಳಿಜೋಳ
ಮೆಲ್ಲಕ ಮೆಲಿಯೊ ಗಿಣಿರಾಮ । ಅಣ್ಣನ
ಕಲ್ಲು ಬಂದಾವು ಕಡಿಗಾಗೊ

೨೨. ತಂಗೀಯ ಕರಕೊಂಡು ಕೆಂದೀನ ಹೊಡಕೊಂಡು
ತಂಗಿ ಮಕ್ಕಳಿಗೆ ಬಿಸಲೆಂದು । ತಮ್ಮಯ್ಯ
ವಲ್ಲಿ ಮುಂಜೆರಗ ಹಿಡಿದಾನೆ

೨೩. ಚಿಂಚಲ ದಾರ್‍ಯಾಗ ಮಿಂಚೋದು ಏನಣ್ಣ
ಕಂಚುಗಾರಣ್ಣ ತಿದಿಯೂದಿ । ಚಿಂಚೂಲಿ
ಮಾಯಾವ್ವಗ ಕಳಸ ಮಾಡ್ಯಾನ

೨೪. ಯಾರೀಗಿ ಯಾರಿಲ್ಲ ಈ ಮನಕ ಧೀರಿಲ್ಲ
ಆರಣ್ಯದಾಗ ಪರದೇಶಿ । ಸತ್ತರ
ಯಾರೀಗಿ ದುಃಖ ಹಡೆದವ್ವ

೨೫. ಹೆಣ್ಣೆತ್ತ ಮನೆಯು ಭಿನ್ನ ಭಕುತವಾದೋ
ಬಣ್ಣ ಬರೆದಿವ್ನಿ ನಡುಮನೆಗೆ। ತಾಯಮ್ಮ
ಬಣ್ಣ ನೋಡಿ ನಮ್ಮ ಮರೆಯಮ್ಮ

೨೬. ಮನವೊಂದು ಮಾಣೀಕ ಏನಂದ ಘಾತಕ
ನಾನೊಂದ ನನ್ನ ಮನ ನೊಂದ। ಕೈಯಾನ
ಬಿಳಿಯೆಲಿ ಬಾಡಿ ರುಜ ಹಾಕಿ

೨೭. ನದಿಯ ದಂಡೀ ಮ್ಯಾಲ ಎಳೆಯ ಸವತೀಕಾಯಿ
ಕಡಿಯಂದರ್‍ಹ್ಯಾಂಗ ಕಡಿಯಲೆ। ಆ ಮಾತ
ಮರಿಯಂದರ್‍ಹ್ಯಾಂಗ ಮರೆಯಲೆ

೨೮. ಹೆಣ್ಣು ಆಗುದಕಿಂತ ಮಣ್ಣು ಆಗುದು ಲೇಸು
ಮಣ್ಣೀನ ಮ್ಯಾಲ ಮರವಾಗಿ। ಇದ್ದರ
ಬಂದವರಿಗೆಲ್ಲ ನೆರಳವ್ವ ॥

೨೯. ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ
ತೋಟದ ಹೂವ ತಲೆತುಂಬ। ಇಟಕೊಂಡು
ಊಟದ ಚಿಂತಿ ಮರೆತಾನು

೩೦. ಕೆಲಸ ಮಾಡಿದರ ಸರಸವಾಡೀದ್ಹಂಗ
ಅಲಸಂದಿಕಾಳ ಸುಲಿದ್ಹಂಗ। ಕಂಡವನ
ಕೆಲಸ ನೋಡತ್ತಿ ಕಳುಹಾಳ

೩೧. ಅವರೀಗಿ ಅವರಣ್ಣ ಅವಲಕ್ಕಿ ಕಳುಹ್ಯಾನ
ನಮ್ಮಣ್ಣನೇನು ಬಡವಾನ। ಕ್ಯಾದಿಗಿ
ಗರಿಯೊಳಗೆ ಘಳಗಿ ಕಳುಹ್ಯಾನ

೩೨. ಅಚ್ಚ ಮಲ್ಲಿಗಿ ಹೂವ ಮುಟ್ಟಿ ಮಾರುವ ಜಾಣ
ನಾ ಕೊಳುವೆನಿದರ ಬೆಲೆ ಹೇಳೋ। ತಂಗೀಗಿ
ಸುರುಳಿಗೂದಲದ ಸುಗುಣೇಗಿ

೩೩. ಗಂಡ ಸತ್ತವ್ವಗ ರಂಡೆ ಮುಂಡೆನ ಬೇಡ
ಕಂದನ ಹಿಡಿದು ತಪಹಾಳ। ಅವಳೀಗೆ
ಗಂಗಾದೇವೆಂದು ಕರಿಬೇಕ

೩೪. ಕಪ್ಪು ಹೆಂಡತಿಯಂತ ಕರಕರಿ ಮಾಡಬ್ಯಾಡ
ನೀರಲದ ಹಣ್ಣು ಬಲು ಕಪ್ಪು। ಇದ್ದರು
ತಿಂದು ನೋಡಿದರ ರುಚಿ ಭಾಳ

೩೫. ಕೆಂಪು ಹೆಂಡತಿಯೆಂದು ಸಂತೋಷ ಪಡಬ್ಯಾಡ
ಅತ್ತೀಯ ಹಣ್ಣು ಅತಿ ಕೆಂಪು। ಇದ್ದರು
ಒಡೆದು ನೋಡಿದರ ಹುಳ ಭಾಳ

೩೬. ಬಂಗಾರ ಬಳಿಯಿಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗ ಸ್ಥಿರವಲ್ಲ। ಮದ್ಯಾಣ
ಬಿಸಿಲು ಹೊಳ್ಳುವುದು ತಡವಲ್ಲ

೩೭. ಮಂದಿ ಮಂದೀಯೆಂದು ಮಂದಿ ನಂಬಲಿ ಹೋದ
ಮಂದಿ ಬಿಟ್ಟಾರ ನಡುನೀರು । ಮಲ್ಲಯ್ಯ
ತಂದಿ ನನ ಕೈಯ ಬಿಡಬ್ಯಾಡ

೩೮. ಕರುಣ ಬಂದರ ಕಾಯೊ ಮರಣ ಬಂದರ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ । ಕಾಶಿಲಿಂಗ
ಕಡೆತನಕ ಕಾಯೋ ಅಭಿಮಾನ

೩೯. ಶರಣೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದೆ ಶಿವನ ಮಡದಿಗೆ। ಗೌರಮಗೆ
ಶರಣೆಂದು ಕಲ್ಲು ಹಿಡಿದೇನು

೪೦. ಉಂಗೂರ ಉಡದಾರ ಮುರಿದರ ಮಾಡಿಸಬಹುದು
ಮಡದಿ ಸತ್ತರ ತರಬಹುದು। ಹಡೆದಂಥ
ತಂದೆತಾಯೆಲ್ಲಿ ಸಿಕ್ಕಾರ।

೪೧. ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ । ಕುಡಿಯಂಗ
ಹಬ್ಬಲಿ ಅವರ ರಸಬಳ್ಳಿ

ಕೆರೆಗೆಹಾರ

೧

ಕಲ್ಲನಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗ್ಗಿ ತಗಸ್ಯಾರು
ಹೊತ್ತಿಗ್ಗಿ ತಗಸ್ಯಾರು ಜೋಯಿಸ ಕೇಳ್ಯಾರು
''ದೇವರಲ್ಲ ದಿಂಡ್ರಲ್ಲ ದೆವ್ವಲ್ಲ ಬೂತಲ್ಲ''
ಹಿರಿಸೊಸಿ ಮಲ್ಲವನ ಹಾರವ ಕೊಡಬೇಕು''
ಹಾರವ ಕೊಟ್ರೆ ನೀರು ಬೀಳೂವಂದ್ರೂ
''ಹಿರಿ ಸೊಸಿನ್ನ ಕೊಟ್ಟರೆ ಹಿರಿತನಕೆ ಯಾರಿಲ್ಲ''
''ಕಡೆ ಸೊಸೆ ಭಾಗೀರತಿನ್ನ ಹಾರವ ಕೊಡಬೇಕು''
ಹಾರ ಕೊಡಬೇಕಂತ ಮಾತಾತು ಮನೆಯಾಗ

೨

ಸಣ್ಣ ಸೊಸಿ ಭಾಗೀರತಿ ತವರುಮನೆಗೆ ಹೊಂಟಾಳು
''ಅತ್ತೆವ್ವಾ ನಾ ನಮ್ಮ ತವರುಮನೆಗೆ ಹೋಗತೀನು''
''ಸರ‍್ರನೆ ಹೋಗವ್ವಾ ಭರ‍್ರನೆ ಬಾರವ್ವಾ ''
''ಸಣ್ಣ ಸೊಸಿ ಭಾಗೀರತಿ ತವರುಮನೆಗೆ ಹೋದಾಳು
ಮನೆ ಮುಂದ ಹೋಗುದಕ ಅವರಪ್ಪ ಬಂದಾನು
''ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವ ?''
''ಬಾಡಿದ ಮಾರ‍್ಯಾಕ ಕಣ್ಣಾಗ ನೀರ‍್ಯಾಕ ''
''ನಮ್ಮಾವ ನಮ್ಮತ್ತೆ ಬ್ಯಾರೆ ಇಡುತಾರಂತೆ''
''ಇಟ್ಟರ ಇಡಲೇಳು ಹೊಲಮನಿ ಕೊಡತೇನು''
''ಹೊಲಮನಿ ಒಯ್ದು ಹೊಳೆ ದಂಡ್ಯಾಗ್ಹಾಕಪ್ಪ''
ಅತ್ತತ್ತ ಹೋಗುತಲೆ ಅವರವ್ವ ಬಂದಳು.
''ಎಂದಿಲ್ಲದ ಭಾಗೀರತಿ ಇಂದ್ಯಾಕಳುತಾ ಬಂದೆ ?''

''ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ''
'ಇಟ್ಟರ ಇಡಲೇಳು ವಾಲಿಜೋಡು ಕೊಡುತೇನು''
''ವಾಲಿಯ ಜೋಡೊಯ್ದು ಒಲಿಯಾಗ ಹಾಕವ್ವ ''
ಮುಂದಕತ್ತ ಹೋಗುತಲೆ ಅವರಕ್ಕ ಬಂದಳು.
ಅವರಕ್ಕ ಬಂದಾಳು ಭಾಗೀರತಿನ್ನ ಕೇಳ್ಯಾಳು
''ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ದುಕ್ಕ?''
''ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ''
'ಇಟ್ಟರೆ ಇಡಲೇಳು ಮಕ್ಕಳ ಜೋಡಿಗೆ ಕಳವತೇನು''
''ಮಕ್ಕಳಿಲ್ಲದ್ದರೇನಕ್ಕ ದುಕ್ಕ ಕಳದಾವೇನ ''
ಸಣ್ಣ ಸೊಸಿ ಭಾಗೀರತಿ ತವರುಮನೆಯ ಬಿಟ್ಟು
ತವರುಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು
ತಲೆಬಾಗಿಲದಾಗ ಗೆಳತಿನ್ನ ಕಂಡಳು
''ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ಅಳುವು?''
''ಅಂಜಿ ಹೇಳಲೆ ಗೆಳತಿ'' ''ಅಳುಕಿ ಹೇಳಲೆ ಗೆಳತಿ''
''ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ ''
''ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತೆ''
''ಕೊಟ್ಟರ ಕೊಡಲೇಳು ಇಟ್ಹಾಂಗ ಇರಬೇಕು''
ಸರ್‍ರನೆ ಹೋದಳು ಭರ್‍ರನೆ ಬಂದಳು.

೩

ಬ್ಯಾಳಿಯ ಹಸಮಾಡ್ತ ಬಿಟ್ಟಳು ಕಣ್ಣೀರ
''ಎಂದಿಲ್ಲದ ಭಾಗೀರತಿ ಇಂದ್ಯಾಕು ಕಣ್ಣೀರು''?
''ಬ್ಯಾಳ್ಯಾಗಿನ ಹಳ್ಳುಬಂದು ಕಣ್ಣಾಗೆರಚಿದವು ಮಾವಾ''
ಅಕ್ಕಿಯ ಹಸಮಾಡ್ತ ಉಕ್ಯಾವು ಕಣ್ಣೀರು''
''ಎಂದಿಲ್ಲದ ಭಾಗೀರತಿ ಇಂದ್ಯಾಕು ಕಣ್ಣೀರು''
''ಅಕ್ಯಾಗಿನ ಹಳ್ಳೊಂದು ಕಣ್ಣಾಗ ಬಿತ್ತತ್ತಿ''
ಉಕ್ಕುವ ನೀರಾಗ ಅಕ್ಕಿಯ ಸುರುವ್ಯಾರು
ಸಕ್ಕರಿ ಹಾಲಾಗ ಸ್ಯಾವಿಗಿ ಸುರವ್ಯಾರ
ಹತ್ತು ಕೊಪ್ಪರಿಗೆ ನೀರು ಉಕ್ಕಿ ಮಳ್ಳತಿತ್ತು

"ನಿಂಗವ್ವ ಜಳಕ ಮಾಡs ನೀಲವ್ವ ಜಳಕ ಮಾಡs"
ನಿಂಗವ್ವ "ನಾವೊಲ್ಲೆ" ನೀಲವ್ವ "ನಾವೊಲ್ಲೆ"
"ಗಂಗವ್ವ ಜಳಕ ಮಾಡs ಗವರವ್ವ ಜಳಕ ಮಾಡs"
ಗಂಗವ್ವ "ನಾವೊಲ್ಲೆ" ಗವರವ್ವ "ನಾವೊಲ್ಲೆ"
"ಸಣ್ಣ ಸೊಸಿ ಬಾಗವ್ವ ನೀನರೆ ಜಳಕ ಮಾಡs"
ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಬಂಗಾರ ಬುಟ್ಟಿ ತುಂಬ್ಯಾಳು
ಬಂಗಾರ ಬುಟ್ಟಿ ತುಂಬ್ಯಾಳು ಸಿಂಗಾರಸಿಂಬಿ ಮಾಡ್ಯಾಳು
ಸಿಂಗಾರಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು
ಮುಂದ ಮುಂದ ಭಾಗೀರತಿ ಹಿಂದ್ಹಿಂದ ಎಲ್ಲಾರು
ಗಂಗಿ ಪೂಜೆ ಮಾಡ್ಯಾರs ಬೆಲಪತ್ರಿ ಏರಿಸ್ಯಾರs
ಬೆಲಪತ್ರಿ ಏರಿಸ್ಯಾರs ಈಬತ್ತೀ ಧರಿಸ್ಯಾರs
ಸೀರಿ ಕುಬಸಾ ಏರಿಸ್ಯಾರ ಹೂವಿನ ದಂಡಿ ಮುಡಿಸ್ಯಾರs
ಹೂವಿನ ದಂಡಿ ಮುಡಿಸ್ಯಾರ ನೇವಿದಿ ಮಾಡ್ಯಾರs
ನೇವದಿ ಮಾಡ್ಯಾರು ಎಲ್ಲಾರು ಉಂಡಾರು
ಎಲ್ಲಾರು ಉಂಡಾರು ಉಳಿದದ್ದು ತುಂಬ್ಯಾರು
ಉಳಿದದ್ದು ತುಂಬ್ಯಾರು ಬಂಗಾರಬುಟ್ಟಿ ಹೊತ್ತಾರು
ಬುಟ್ಟಿ ಹೊತ್ತು ನಡೆದಾರು ಬಂಗಾರಬಟ್ಲ ಮರತರು.
"ಗಂಗವ್ವ ನೀ ಹೋಗ ! ಗವರವ್ವ ನೀ ಹೋಗ !"
ಗಂಗವ್ವ "ನಾವೊಲ್ಲೆ" ! ಗವರವ್ವ "ನಾವೊಲ್ಲೆ"
"ನಿಂಗವ್ವ ನೀ ಹೋಗ ! ನೀಲವ್ವ ನೀ ಹೋಗs !"
ನಿಂಗವ್ವ "ನಾವೊಲ್ಲೆ" ! ನೀಲವ್ವ "ನಾವೊಲ್ಲೆ"
"ಸಣ್ಣ ಸೊಸಿ ಭಾಗೀರತಿ ನೀ ತರಹೋಗವ್ವ"
ಸಣ್ಣ ಸೊಸಿ ಭಾಗೀರತಿ ಬಿರಿ ಬಿರಿ ನಡೆದಾಳು
ಬಿರಿ ಬಿರಿ ಹೋದಳು ಬಂಗಾರಬಟ್ಲು ತೊಗೊಂಡಳು
ಒಂದು ಮೆಟ್ಲೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ

ನಾಲ್ಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಳು

೪

ಗಂಡ ಮಾದೇವರಾಯ ದಂಡಿನಾಗ್ಯೆದಾನು
ದಂಡಿನಾಗ್ಯೆದಾನು ಕಂಡನು ಕೆಟ್ಟ ಕನಸ
ಸೆಲ್ಯ ಸುಟ್ಟಾಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ಹಾಂಗಾತು.
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಒತ್ತಾರ ಬಂದಾನ ಮನೆಗೆ
ಬಂದ ಮಾದೇವನ ತಂದೆತಾಯಿ ನೋಡಿದರು.
''ಗಂಗವ್ವ ನೀರ ಕೊಡ ಗವರವ್ವ ನೀರ ಕೊಡ''
''ಗಂಗವ್ವ ನೀರ ಕೊಡುದ್ಯಾಕ? ಗವರವ್ವ ನೀರ ಕೊಡುದ್ಯಾಕ?''
''ನನ್ನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ ''
''ನಿನ್ನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ''

೫

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನತ್ತೆಯ ಮನೆಗೆ
ಬಂದಿರು ಅಳಿಯನ ನೋಡಿ ಅಂದಳು ಅತ್ತೆವ್ವ
''ನಿಂಬೆವ್ವ ನೀರ್ ಕೊಡ್ರು ನೀಲವ್ವ ನೀರ್ ಕೊಡ್ರು!''
ನಿಂಬೆವ್ವ ನೀರ್ ಕೊಡುದ್ಯಾಕ ? ನೀಲವ್ವ ನೀರ್ ಕೊಡುದ್ಯಾಕ ?
''ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳತ್ತೀ ?''
''ನಿನ ಮಡದಿ ಭಾಗೀರತಿ ಗೆಣತಿ ಮನೆಗೆ ಹೋಗ್ಯಾಳಪ್ಪ!''
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಗೆಣತಿ ಮನೆಗೆ ಸ್ವಾರಿ.
ಬಂದಿರು ಮಾದೇವನ ಕಂಡಾಳು ಗೆಣತೆವ್ವ

''ಬಾಳವ್ವ ನೀರ್ ಕೊಡ ಬಸವ್ವ ನೀರ್ ಕೊಡ''
''ಬಾಳವ್ವ ನೀರ್ ಕೊಡುದ್ಯಾಕs ಬಸವ್ವ ನೀರ್ ಕೊಡುದ್ಯಾಕ?''
''ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳಕ್ಕ?''
''ನಿನ್ನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ
ನಿಮ್ಮಪ್ಪ ನಿಮ್ಮವ್ವ ಕೆರೆಗ್ಹಾರ ಕೊಟ್ಟರಂತs''
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ,
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು ;
''ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ ?
ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟಗೊಳ್ಳೋ ಮುತ್ತೈದೆ ಎಲ್ಲಿಗ್ಹೋದೆ''
ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟನು ಕಣ್ಣೀರು ಹಾರಿದ ಕೆರೆ ನೀರಾಗ.

ಮಳೀ ಹಾಡು

ಬಣ್ಣದ ಗುಬ್ಬ್ಯಾರು ಮಳಿರಾಜಾ ! ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳಿರಾಜಾ

ಒಕ್ಕಲಗೇರ‍್ಯಾಗ ಮಳಿರಾಜಾ! ಅವರು
ಮಕ್ಕಳ ಮಾರ‍್ಯಾರ ಮಳಿರಾಜಾ
ಮಕ್ಕಳ ಮಾರಿಽ ರೊಕ್ಕಾ ಹಿಡಕೊಂಡು
ಭತ್ತಂತಽ ತಿರಗ್ಯಾರ ಮಳಿರಾಜಾ

ಸೊಲಗಿ ಹಿಟ್ಟಿನಾಗ ಮಳಿರಾಜಾ ! ಅವರು
ಸುಣ್ಣನ್ನು ಕೂಡಿಸ್ಯಾರ ಮಳಿರಾಜ
ಹಸ್ತು ಬಂದಕ್ಯಾರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ

ಗಿದ್ದನ ಅಕ್ಕ್ಯಾಗ ಮಳಿರಾಜಾ ! ಅವರು
ಅಪ್ಪುವನ್ನು ಕೂಡಿಸ್ಯಾರ ಮಳಿರಾಜಾ
ಸಣ್ಣ ಕೂಸಿಗೆ ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಯಾವ ಮಳಿರಾಜಾ

ಗಂಡುಳ್ಳ ಬಾಲ್ಯಾರು ಮಳಿರಾಜಾ ! ಅವರು
ಭಿಕ್ಷಾಕ ಹೊರಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ಯದ ದಿನ ಬಂದು ಮಳಿರಾಜಾ

ಸ್ವಾತಿಯ ಮಳಿ ಬಂದು ಮಳಿರಾಜಾ ! ಸುತ್ತ
ದೇಶಾಕ ಆಗ್ಯಾದ ಮಳಿರಾಜಾ
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ

ಭೀಷ್ಮರಿಗೆ ಓತಿ ಶ್ಯಾಪ ಕೊಟ್ಟ ಪರ್ವ

ಪಾಂಚಾಲನಗರವ ಬುಟ್ಟು ಪಾಂಡವರು
ಹಸ್ತಿನಪುರಕೆ ಬಂದ ಸುದ್ದಿ ಕೇಳಿ
ಊರಾದ ಊರೆ ಬಂದು ಅವ್ರ ನೋಡಿತು
ಇದರಿಂದ ಸಂತೋಷಪಟ್ಟ ಭೀಷ್ಮರು !
ಪಾಂಡವರು ಬದುಕುಳಿದಿರೋದು ಮಾತ್ರವಲ್ಲ
ತಮ್ಮ ಪರಾಕ್ರಮದಿಂದ
ರಾಜಾಧಿರಾಜರುಗಳನ್ನೆಲ್ಲ ಗೆದ್ದು
ದ್ರೋಪತಿಯನ್ನು ಮದುವೆಯಾಗಿದ್ದಾರೆ
ಈ ಜಿನದ ಸಂತೋಷ
ನನ್ನ ಮಾತೆ ಗಂಗಾಭವಾನಿಯನ್ನು
ನೋಡಬೇಕು ಅನ್ನೋ ಆಸೆ ಹುಟ್ಟುಸ್ತಾ ಅದೆ
ಅದ್ಕೆ ನಾಳೆ ಜಿನ ಕೋಳ್ಕೂಗೋವತ್ಗೆ ಗಂಗಾನದಿಗೆ ಹೋಗಿ
ಮಿಂದು ಮಡಿಯುಟ್ಟು ಪೂಜೆ ಪುನಸ್ಕಾರಗಳನ್ನು ಮಾಡಿ
ಬರಬೇಕು
ಅಂತ್ಹೇಳಿ ಭೀಷ್ಮರು ಮನುಗಿಕೊಂಡಾರು
ಕೈಲಾಸದಲ್ಲಿ ಕೋಳಿ ಕೂಗೋ ಹೊತ್ತಾಯ್ತು।

ಮುಂಗೋಳಿ ಕೂಗುವಾಗ ಮೂಡು ಕೆಂಪೇರುವಾಗ
ಹಸ್ತಿನಪುರದಲ್ಲಿ ಎಲ್ಲರಿಗೂ ದೊಡ್ಡೋರು
ಎಲ್ಲರಿಗೂ ದೊಡ್ಡೋರು ಮಾನ್ಯವರು ಭೀಷ್ಮರು
ಬಲದ ಮಗ್ಗುಲಲೆದ್ದು ಹಾಸಿಗೆ ಬಿಟ್ಟಾರು
ಗಂಗಾಭವಾನಿಯ ಶಿವಸೊರಣೆ ಮಾಡಿದರು।
ಕಾವಿ ಕಾಮಂಡಲು ಹಿಡಿದು ದೊಣ್ಣೆಯ ನೂರಿಕೊಂಡು
ತಮ್ಮ ತಾಯಿ ಗಂಗಾದೇವಿ ದರ್ಶನವ ಪಡೀಬೇಕು
ಗಂಗಾನದಿಯಲ್ಲಿ ಮಿಂದು ಮಡಿಯುಟ್ಟು ಬರಬೇಕು
ಹಂಗಂತ ಭೀಷ್ಮರು ದಾಪುಗಾಲು ಹಾಕೂತ
ದೊಣ್ಣೆ ಊರಿಕೊಂಡು
ದಡದಡನೆ ಬರುವಾಗ

ಸರಸರನೆ ಬರುತ್ತಿತ್ತು ಓತಿಕ್ಯಾತವೊಂದು ।
ಓತಿ ಬರುತಿರುವಾದು ಭೀಷ್ಮರಿಗೆ ತಿಳಿಯಾದು
ಊರಿದ ದೊಣ್ಣೆಯ ತುದಿಗೆ ಸಿಕ್ಕಿತು ಓತಿ
ದೊಣ್ಣೇಗೆ ಸಿಕ್ಕೀದ ಓತಿ ಒದ್ದಾಡಿತು
ಒದ್ದಾಡೋ ಓತಿ ಕಂಡು ಭೀಷ್ಮರು ಮನದಲ್ಲಿ ।
ಥೂ ! ಈ ಹಾಳು ಅಮ್ಟೊದ್ದ ಬಂದು
ಊರಿದ ದೊಣ್ಣೇಗೆ ಸಿಕ್ಕಿ ಹಿಂಗೆ ಒದ್ದಾಡ್ತಾ ಅದಲ್ಲ
ಇದ್ರ ಮನೆ ಕಾಯ್ವಾಗ

ಬೆಳಗೆಯೆ ಇದು ಎಂಥ ಕೆಟ್ಟ ಸಕುನಾವು
ಎಂದುಕೊಂಡು ಮನದಲ್ಲಿ ದೊಣ್ಣೆಯ ತುದಿಯಿಂದ
ದೊಣ್ಣೇಯ ತುದಿಯಿಂದ ಓತಿಯ ಚಿಮ್ಮಿದರು ।
ಓತಿಯಾದ್ರು ರೊಟ್ಟಿಮುಳ್ಳಿನ ಮ್ಯಾಲೆ ಬಿತ್ತು
ಓತಿಯ ಮೈಯಾದ ಮೈಯೆಲ್ಲ ಶಿವನೆ
ರೊಟ್ಟಿಮುಳ್ಳಿಗೆ ಸಿಕ್ಕಿ ವಿಲವಿಲ ಒದ್ದಾಡಿತು ।
ಭೀಷ್ಮರು ಮುಂದಕೆ ಹೆಜ್ಜೆ ಎತ್ತಿಡುವಾಗ
ನಿಲ್ರಪ್ಪ ಭೀಷ್ಮರೆ ನೀವು ದೊಡ್ಡ ಮನುಷ್ಯರು
ರೀ ಸ್ವಾಮಿ ಹಂಗೇ ಹೋಯ್ತಾ ಇದ್ದೀರಲ್ಲ
ನಿಲ್ಲಿ ಸ್ವಾಮಿ ನಿಲ್ಲಿ
ಮಾಡಾದು ಮಾಡ್ಬುಟ್ಟು ಏನೂ ಕಾಣ್ದವುರಂಗೆ
ಕತ್ ಬಗ್ಗುಸ್ಕಂಡೋಯ್ತಿದ್ದೀರಲ್ಲ
ಇದು ನ್ಯಾಯವೇನ್ರಪ್ಪ
ನಿಮ್ಮಂಥೋರು ಏನ್ ಮಾಡುದ್ರು ಸೈ ಅನ್ಕೋಂಡಿದ್ದೀರಾ ?
ನಾನು ನಿಮ್ ಊರುಗೋಲ್ಗೆ ಸಿಕ್ಕಿಬಿದ್ದೆನಲ್ಲಪ್ಪ
ಅದು ಮಾತ್ರ ನಿಮ್ಮ ತಪ್ಪಲ್ಲ ಭೀಷ್ಮರೆ
ಒದ್ದಾಡುತ್ತಿದ್ದ ನನ್ನ ಕೋಲಿನಿಂದ ಚಿಮ್ಮಿದ್ದು
ರೊಟ್ಟಿ ಮುಳ್ಳಿಗೆ ಸಿಕ್ಕಿ ರಣಗಾಯವಾದದ್ದು
ತಪ್ಪು ಇದನ್ನೊಪ್ಪಿಕೊಳ್ಳಿರಪ್ಪ
ನಾನು ಸಾಯುವಾಗ ರೊಟ್ಟಿ ಮುಳ್ಳು ಮೈಗೆಲ್ಲ ಚುಚ್ಚೀತು

ಮೈಗೆಲ್ಲ ಚುಚ್ಚಿ ರಣರಂಪವಾಯಿತು
ಇಂಥ ಸಾವನು ನಾನು ಕಾಣುತಿವ್ನಿ ಭೀಷ್ಮರೆ
ನಾನು ಸಾಯೋವಾಗ ಹೆಂಗೆ ಮುಳ್ಳು ಮೇಲೊರಗಿವ್ನೋ
ಹಂಗೆ ನಿಮ್ಮ ಕಡೆಗಾಲ್ಕೆ ಮುಳ್ಳುಮ್ಯಾಲೆ ಒರುಗಪ್ಪ
ಮುಳ್ಳುಗಳ ಮೇಲೆ ನೀ ಒರಗಿ ಸಾಯಪ್ಪ
ಇಂತೆಂಬೋ ಸಾಪವ ಕೊಟ್ಟೀತು ಓತಿ ।

ಅಯ್ಯೋ ಶಿವನೆ
ಈ ಅಪ್ಪೆಗೊದ್ದ ಎಂತ ಶ್ಯಾಪವನ್ನು ಕೊಟ್ಟುಬುಡ್ತು
ತಪ್ಪುಯಾವುದು ? ತಪ್ಪಿಲ್ಲದ್ದು ಯಾವುದು ?
ಅಯ್ಯೋ ಭಗವಂತ
ಆ ವಿಧಿನಿಯಾಮ ಯಾವ ರೀತಿ ಇದೆಯೋ
ಆ ರೀತಿಯೇ ಆಗಲಿ

ಓತಿ ಮಾತನು ಕೇಳಿ ನಡುಗೀದ ಭೀಷ್ಮರು
ತಪ್ಪನ್ನು ಒಪ್ಪಿಕೊಳ್ಳಬೇಕೆಂದು ಬಂದರು
ಓತಿಯಾದ್ರೆ ಭೀಷ್ಮರ ಕಣ್ಣೆತ್ತಿ ನೋಡಲಿಲ್ಲ
ಶಿವಶಿವಾ ಶಿವಯೆಂದು ಪ್ರಾಣವ ಬುಟ್ಟೀತು
ಭೀಷ್ಮರ ಪಾಳೀಗೆ ಶ್ಯಾಪವೊಂದು ಅಂಟೀತು
ಶಿವನೆ ತಿಳಿದು ಮಾಡುವ ಕರ್ಮ ಒಂದು ಬಗೆ ಬ್ರಾದಿ
ತಿಳಿದು ನೋಡುವ ಕರ್ಮಕಿನ್ನೊಂದು ಬ್ರಾದಿ
ಅಂತೇಳಿ ಭೀಷ್ಮರು ಗಂಗಾನದಿಗೆ ಬಂದು
ಸ್ನಾನಮಡಿಗಳ ಮಾಡಿ ಗಂಗಮ್ಮ ತಾಯಿಯ
ದರ್ಶಣೆಯ ಪಡುಕೊಂಡು ಹಸ್ತಿನಪುರಕೆ
ದಿಮ್ಮಗೆ ಬಂದು ಮನೆ ಸೇರಿಕೊಂಡರು.

ಕವಿ-ಕಾವ್ಯ ವಿಚಾರ

ಜನಪದ ಕಾವ್ಯ

ಓದು-ಬರಹ ಬಾರದ ಸಾಮಾನ್ಯ ಜನರ ಅನುಭವದ ಅಭಿವ್ಯಕ್ತಿ ರೂಪವೇ ಜನಪದ ಸಾಹಿತ್ಯ. ಅಭಿವ್ಯಕ್ತಿ ಎಂಬುದು ಸೃಜನಶೀಲ ಮನಸ್ಸಿನ ಸಹಜ ಸ್ಥಿತಿ. ಬದುಕಲ್ಲಿ ಕಂಡುಂಡು ಅನುಭವಿಸಿದ ಎಲ್ಲವೂ ಇಲ್ಲಿ ವಸ್ತುವೇ. ನೋವು, ನಲಿವು, ಪ್ರೀತಿ-ಪ್ರೇಮ, ಭಕ್ತಿ-ನೀತಿ ಮುಂತಾದವುಗಳು ಇಲ್ಲಿ ಕಥೆಯಾಗುತ್ತವೆ. ಹಾಡಾಗುತ್ತವೆ. ಒಗಟು, ನಾಟಕವೂ ಆಗುತ್ತವೆ. ಹೀಗೆ ಅಜ್ಞಾತದಿಂದ ರಚಿತವಾದ ಈ ಸಾಹಿತ್ಯ. 'ಜನಪದ ಸಾಹಿತ್ಯ' ಎಂದೇ ಪ್ರಸಿದ್ಧಿಯಾಗಿದೆ. ಜನರ ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಸಾಹಿತ್ಯವಾಗಿದೆ.

ಜನಪದ ಕಾವ್ಯದಲ್ಲಿ ವೈವಿಧ್ಯಮಯ ಛಂದಸ್ಸಿದೆ. ಅದರಲ್ಲಿ ತ್ರಿಪದಿಗೆ ಮೊದಲಸ್ಥಾನ, ಕಥನ ಕ್ರಮದಲ್ಲೂ ಹಿಂದೆ ಬಿದ್ದಿಲ್ಲ. ಮುಖ್ಯವಾಗಿ ಇದು ಹಾಡುವ ಕೇಳುವ ಕೃತಿ. ಇಲ್ಲಿ ಸಣ್ಣ ಸಣ್ಣ ಸಂಗತಿಗಳ ಮೂಲಕವೇ ಮಹತ್ತನ್ನು ಕಾಣಿಸುವ ಪರಿ ದೊಡ್ಡದು. ಬದುಕಿನ ಪ್ರತಿನಿತ್ಯದ ಭಾವಗಳು ಇಲ್ಲಿವೆ. ಇವು ಬದುಕಿನ ಪ್ರಕ್ರಿಯೆಯಲ್ಲೇ ಹುಟ್ಟಿಕೊಂಡ ಸಹಜವಾದ ದೇಸೀ ಗೀತೆಗಳು.

ಜಾನಪದ ಕಾವ್ಯದಲ್ಲಿ ವೈವಿಧ್ಯಮಯ ಛಂದಸ್ಸಿದ್ದರೂ ತ್ರಿಪದಿಗೆ ಅಗ್ರಸ್ಥಾನ ಸಲ್ಲುತ್ತದೆ. ಹಾಡುಗಬ್ಬವಾದ ತ್ರಿಪದಿಯ ಹೆಸರೇ ಸೂಚಿಸುವಂತೆ (ತ್ರಿ = ಮೂರು, ಪದಿ =ಸಾಲು) ಮೂರು ಪಾದಗಳಿಂದ ಕೂಡಿವೆ. ಸರಳವೂ, ಸುಂದರವೂ, ಸುಲಲಿತವೂ ಆದ ಬಂಧ. ನಡಿಗೆ ಇದಕ್ಕಿದೆ.

ಪ್ರಸ್ತುತ 'ಜ್ಯೋತಿಯೆ ಆಗು ಜಗಕೆಲ್ಲ' ಎನ್ನುವ ಕಾವ್ಯ ಭಾಗದಲ್ಲಿ ತಾಯಿಯ ವಾತ್ಸಲ್ಯಭಾವ, ಅಣ್ಣ-ತಂಗಿ ಸಂಬಂಧದಲ್ಲಿರುವ ವಿಶೇಷ ಅಭಿಮಾನ, ಹೆಣ್ಣಿನೊಳಗಿನ ಸಂಕಟ, ತಳಮಳಗಳು, ತವರು ಮನೆಯ ಬಗೆಗೆ, ವಿಶೇಷವಾಗಿ ತಾಯಿಯ ಬಗೆಗಿನ ಪ್ರೀತಿ, ದೈವ- ಗುರುವಿಗೆ ಶರಣು ಹೋಗುವ ಪರಿ ಎಲ್ಲವೂ ಇವೆ.

ಕೆರೆಗೆ ಹಾರ

ಇದೊಂದು ಜಾನಪದ ಕಥನಗೀತ. ಜನಪದರಲ್ಲಿನ ಮೂಢನಂಬಿಕೆಯಿಂದಾಗಿ ಬಲಿಯಾದ ಹೆಣ್ಣು ಮಗಳೊಬ್ಬಳ ದಾರುಣ ಚಿತ್ರ ಇದರಲ್ಲಿದೆ. ಇದರ ಹಿಂದೆ ಸಮುದಾಯದ ಒಳಿತಿನ ನಂಬಿಕೆಯೂ ಇದೆ. ಇಲ್ಲಿ ತ್ಯಾಗ – ಬಲಿದಾನಗಳು ಹಾಸು

ಹೊಕ್ಕಾಗಿರುವುದನ್ನು ಗಮನಿಸಬಹುದು. ಪುರೋಹಿತಶಾಹಿ ವ್ಯವಸ್ಥೆಯ ನಂಬಿಕೆಗಳಿಂದಾಗಿ ಮುಗ್ಧ ಜೀವವನ್ನು ಬಲಿ ತೆಗೆದುಕೊಳ್ಳುವ ಚಿತ್ರಣ ಮನ ಕಲಕುತ್ತದೆ.

ಭೀಷ್ಮರಿಗೆ ಓತಿ ಶ್ಯಾಪ ಕೊಟ್ಟ ಪರ್ವ

ಶಿಷ್ಟ ಸಾಹಿತ್ಯ ಪರಂಪರೆಯ ಗ್ರಹಿಕೆಗಿಂತ ಭಿನ್ನವಾದ ಗ್ರಹಿಕೆಯೊಂದು ಇಲ್ಲಿದೆ. ದೊಡ್ಡವರು ತಪ್ಪು ಮಾಡಿದಾಗ ಸಾಮಾನ್ಯ ಜನರು ಎದುರಾಡದೆ ಸಹಿಸಿಕೊಳ್ಳುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಆದರೆ ಇಲ್ಲಿ ಅಪರೂಪದ ಪ್ರಸಂಗವೊಂದಿದೆ. ಕಾಣದೆ ತಪ್ಪಾಗಬಹುದು, ಅದಕ್ಕೆ ಕ್ಷಮೆಯುಂಟು. ಕಂಡೂ ಕಂಡು ತಿಳಿದು ಮಾಡುವ ತಪ್ಪು ಅಕ್ಷಮ್ಯವೆಂಬ ಪಾಠವನ್ನು ಓತಿ ಭೀಷ್ಮರಿಗೆ ಹೇಳುತ್ತದೆ. ಶಾಪ ಒಂದು ಆಶಯ ಮಾತ್ರ. ಓತಿಯ ಶಾಪ ನಿಜವಾಗುವುದು ಕಾಕತಾಳೀಯವಾದರೂ ಇಂಥ ತಪ್ಪು ಶಿಕ್ಷಾರ್ಹ ವೆಂಬುದನ್ನು ಇದು ಸೂಚಿಸುತ್ತದೆ.

ಪ್ರಸ್ತುತ ಕಾವ್ಯಭಾಗವನ್ನು 'ಜನಪದ ಮಹಾಭಾರತ' ಕೃತಿಯಿಂದ ಆಯ್ದುಕೊಳ್ಳ ಲಾಗಿದೆ. ಕನ್ನಡದ ಯಾವುದೇ ಶ್ರೇಷ್ಠ ಕಾವ್ಯದಂತೆ ಗಂಭೀರವಾಗಿ ಅಧ್ಯಯನ ಮಾಡಬೇಕಾದ ಕೃತಿ ಇದಾಗಿದೆ.

ಶಬ್ದಾರ್ಥ :

ಮಂದಲಿಗೆ = ಚಾಪೆ ; ತವರ್ಬಣ್ಣ = ತವರಿನ ಸೀರೆ (ತಾಯಿ ಉಡಿಸಿದ ಸೀರೆ) ; ತಿಟ್ಟು= ದಿಣ್ಣೆ, ದಿಬ್ಬ, ಎತ್ತರದ ಪ್ರದೇಶ; ಬೆಟ್ಗೆ= ಬೆರಳಿಗೆ; ಮರುಗ= ಸುವಾಸನೆಯುಳ್ಳ ಪತ್ರೆ, ಒಂದು ಬಗೆಯ ಸಸ್ಯ ; ಅಕ್ಕಳಿಸಿ = ಹೊಟ್ಟೆಯನ್ನು ಒಳಕ್ಕೆ ಎಳೆದುಕೊಂಡು (ಜೋರಾಗಿ ನಗುವ ಬಗೆಯನ್ನು ಇಲ್ಲಿ ಸೂಚಿಸುವುದಾಗಿದೆ) ; ನಿಬ್ಬಣ = ಮೆರವಣಿಗೆ; ನಾಗಸೊರ = ನಾಗಸ್ವರ, ನಾದಸ್ವರ ; ಕೆಂದಿ =ಕೆಂಪುಹಸು; ಚಿಂಚಲ=ಒಂದು ಊರು/ ಸ್ಥಳದ ಹೆಸರು ; ಕಳುಹಾಳ = ಕಳಿಸುತ್ತಾಳಾ ? ಕಳಿಸುವುದಿಲ್ಲ ; ಕ್ಯಾದಿಗಿ ಗರಿ =ತಾಳೆ ಹೂವಿನ ಗರಿ ; ಘಳಗಿ =ಹೊಸ ಸೀರೆ ; ನೆಗೆಯೋಣಿ = ಓರಗಿತ್ತಿ ; ಸೆರೆಮುಕ್ಕ =ಒಂದು ಬೊಗಸೆ ; ಹೊತ್ತಿಗೆ ತೆಗೆಸು =ಶಾಸ್ತ್ರಕೇಳು; ಹಾರ =ಆಹಾರ, ಬಲಿ; ಈಬತ್ತಿ=ವಿಭೂತಿ ; ಬತ್ತಲಗುದುರೆ= ಜೀನು ಹಾಕದೆ ಇರುವ ಕುದುರೆ; ಗೆಣತಿ =ಗೆಳತಿ, ಸ್ನೇಹಿತೆ ; ಹಳ್ಳು =ಹರಳು ; ಸ್ವಾರಿ =ಸವಾರಿ ಜಿನ = ದಿನ ; ಸೊರಣೆ = ಸ್ಮರಣೆ ; ಸಕನ =ಶಕುನ ; ರೊಟ್ಟಿಮುಳ್ಳು = ಅಗಲವಾದ ಗುಂಡಗಿನ ಎಲೆ ತುಂಬಾ ಮುಳ್ಳುಳ್ಳ ಕಳ್ಳಿ ಗಿಡ (ಕ್ಯಾಕ್ಟಸ್) ; ಪಾಳೀಗೆ = ಪಾಲಿಗೆ ; ಅಪ್ಪೆಗೊದ್ದ = ಸ್ಥಳೀಯರು ಓತಿಗೆ ಬಳಸುವ ಪದ (ಇವೆಲ್ಲವೂ ಗ್ರಾಮ್ಯರೂಪದ ಪದಗಳು).

ಸಂದರ್ಭ ಬಯಸುವ ವಾಕ್ಯಗಳು

೧. ಬೆಟ್ಟೆ ತುಂಬಿದರು ಅಮೃತಾನ
೨. ರಟ್ಟೆ ನೊಂದಾವು ಎಲೆ ಕಂದ
೩. ತಂಗ್ಯಮ್ಮ ತಿಟ್ಹತ್ತಿ ತಿರುಗಿ ನೋಡ್ಯಾಳ
೪. ಜ್ಯೋತಿಯೆ ಆಗು ಜಗಕೆಲ್ಲ
೫. ಬಂಗಾರ ಬಳಿಯಿಟ್ಟು ಬೈಬ್ಯಾಡ ಬಡವರಿಗೆ
೬. ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು
೭. ಕರುಣ ಬಂದರ ಕಾಯೋ ಮರಣ ಬಂದರ ಒಯ್ಯೊ
೮. ಬಡತನ ನನಗಿರಲಿ ಬಾಳು ಮಕ್ಕಳಿಗಿರಲಿ
೯. ಹಣ್ಣುಳ್ಳ ಮರಕೆ ಗಿಣಿ ಮುದ್ದು । ಕಂದಯ್ಯ
೧೦. ಕೆಂಪು ಹೆಂಡತಿಯೆಂದು ಸಂತೋಷ ಪಡಬ್ಯಾಡ
೧೧. ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
೧೨. ಇಟ್ಟರೇ ಇಡಲೇಳು ಹೊಲಮನಿ ಕೊಡತೇನು
೧೩. ಒದ್ದಾಡಿ ಸತ್ತಾರ ಮಳಿರಾಜಾ
೧೪. ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
೧೫. ಹಸ್ತಿನಪುರದಲ್ಲಿ ಎಲ್ಲರಿಗೂ ದೊಡ್ಡೋರು
೧೬. ಓತಿ ಬರುತಿರುವಾದು ಭೀಷ್ಮರಿಗೆ ತಿಳಿಯಾದು
೧೭. ಊರಿದ ದೊಣ್ಣೆಯ ತುದಿಗೆ ಸಿಕ್ಕಿತು ಓತಿ
೧೮. ಬೆಳಗೆಯೆ ಇದು ಎಂಥ ಕೆಟ್ಟ ಸಕುನಾವು
೧೯. ನಿಮ್ಮಂಥೋರು ಏನು ಮಾಡುದ್ರೂ ಸೈ ಅಂದ್ಕೋಂಡಿದೀರಾ ?
೨೦. ಹಂಗೆ ನಿಮ್ಮ ಕಡೆಗಾಲ್ಕೆ ಮುಳ್ಳುಮ್ಯಾಲೆ ಒರುಗಪ್ಪ

ಪ್ರಶ್ನೆಗಳು

೧. ಮಗುವಿನ ಬಗೆಗೆ ತಾಯಿಯ ಆಶಯಗಳಾವುವು? ವಿವರಿಸಿ.

೨. ಮಗುವಿನ ಬಗೆಗಿನ ತಾಯಿಯ ವಾತ್ಸಲ್ಯವು ಎಂಥದು ?

೩. ನಗರದ ಆಧುನಿಕ ಜೀವನ ಪದ್ಧತಿಗಿಂತ ಜನಪದರು ಭೂಮಿತಾಯಿ ಕುಟುಂಬ ಕೆಲಸ ಮೊದಲಾದವುಗಳೊಂದಿಗೆ ಕಂಡುಕೊಂಡಿರುವ ಸಂಬಂಧ ಯಾವ ಬಗೆಯದು?

೪. ಹೆಣ್ಣಿನ ಸಂಕಟ ತಳಮಳಗಳು ಇಲ್ಲಿನ ತ್ರಿಪದಿಗಳಲ್ಲಿ ಹೇಗೆ ವ್ಯಕ್ತವಾಗಿವೆ ?

೫. ತಾಯಿಯ ಬಗೆಗಿನ ಪ್ರೀತಿ ಎಂಥದು? ತ್ರಿಪದಿಗಳ ಆಧಾರದಿಂದ ಉತ್ತರಿಸಿ.

೬. ದೈವ – ಗುರುವಿನ ಬಗೆಗೆ ಶರಣು ಹೋಗುವ ಪರಿ ಹೇಗೆ ಮೂಡಿಬಂದಿದೆ?

೭ ಅಣ್ಣ –ತಂಗಿಯರ ಸಂಬಂಧದಲ್ಲಿನ ವಿಶೇಷ ಅಭಿಮಾನವನ್ನು ಜನಪದರು ಕಟ್ಟಿಕೊಟ್ಟಿರುವ ಬಗೆ ಹೇಗೆ ?

೮. ಭಾಗೀರತಿಯ ಅಸಹಾಯಕ ಸ್ಥಿತಿಯು 'ಕೆರೆಗೆ ಹಾರ' ಪದ್ಯದಲ್ಲಿ ಹೇಗೆ ಚಿತ್ರಿತವಾಗಿದೆ?

೯. ಮಾದೇವನು ತನ್ನ ಹೆಂಡತಿಯ ಬಗ್ಗೆ ಹೊಂದಿದ್ದ ಪ್ರೀತಿ ಹೇಗೆ ವ್ಯಕ್ತವಾಗಿದೆ?

೧೦. ಭಾಗೀರತಿಯು ಕೆರೆಗೆ ಹಾರವಾದ ಸಂದರ್ಭವನ್ನು ವಿವರಿಸಿ.

೧೧. 'ಮಳೀಹಾಡು' ಪದ್ಯದಲ್ಲಿ ಚಿತ್ರಿತವಾಗಿರುವ ಬರದ ಭೀಕರತೆಯನ್ನು ವಿವರಿಸಿ.

೧೨. 'ಭೀಷ್ಮರಿಗೆ ಓತಿ ಕೊಟ್ಟ ಶಾಪ' ಈ ಕಾವ್ಯಭಾಗವನ್ನು ನಿಮ್ಮ ವಾಕ್ಯದಲ್ಲಿ ಸಂಗ್ರಹಿಸಿ ಕಥಾ ರೂಪದಲ್ಲಿ ಹೇಳಿ.

೧೩. 'ಭೀಷ್ಮರಿಗೆ ಓತಿ ಕೊಟ್ಟ ಶಾಪ' ಕಾವ್ಯಭಾಗದಲ್ಲಿರುವ ಸಾಮಾಜಿಕ ನ್ಯಾಯ ಯಾವುದು ?

ಗ್ರಂಥ ಋಣ

೧. ಶಿವ ಶರಣೆಯರ ವಚನ ಸಂಪುಟ –ಸಂ.ಡಾ. ವೀರಣ್ಣರಾಜೂರ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ವಚನ ಕಮ್ಮಟ : ಸಂ.ಕೆ. ಮರುಳಸಿದ್ಧಪ್ಪ , ಕಿ.ರಂ. ನಾಗರಾಜ. ಪ್ರಕಟಣೆ : ಪ್ರಸಾರಾಂಗ, ಬೆ.ವಿ.ವಿ. ಬೆಂಗಳೂರು.

೩. ಹಲವು ತೋಟದ ಹೂಗಳು : ಸಂ. ಪ್ರೊ. ಕಾಳೇಗೌಡ ನಾಗವಾರ, ಜಿ. ವಿ. ಆನಂದಮೂರ್ತಿ.

೪. ಪರಮಾರ್ಥ – ಡಾ|| ಎಲ್. ಬಸವರಾಜು, ಬೆಂ.ವಿ.ವಿ. ಬೆಂಗಳೂರು.

೫. ಕನ್ನಡ ಸಾಹಿತ್ಯ ಸಂಪುಟ – ಸಂ. ಪ್ರೊ. ಎಂ.ಜಿ. ಚಂದ್ರಶೇಖರಯ್ಯ, ಡಾ. ಜಿ.ಎಸ್. ರಮೇಶ್,ಡಾ. ಎನ್.ಎಸ್. ಸರಸ್ವತಿ.

೬. ಸಾವಿರಾರು ಕೀರ್ತನೆಗಳು : ಸಂ. ಪ್ರೊ. ವಿ.ವಿ. ನಾವಡ, ಡಾ. ಗಾಯತ್ರಿ ನಾವಡ.

೭. ಕಲ್ಲು ಸಕ್ಕರೆ ಕೊಳ್ಳಿರೋ : ಸಂ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.

೮. ಜನಪ್ರಿಯ ಕನ್ನಡ ಸಂಪುಟ: ಸಂ. ದೇ. ಜವರೇಗೌಡ, ಎಲ್.ಎಸ್.ಶೇಷಗಿರಿರಾವ್, ದೇವೇಂದ್ರ ಕುಮಾರ ಹಕಾರಿ, ಎಚ್.ಜೆ. ಲಕ್ಕಪ್ಪಗೌಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಶರಣರ ನೂರೊಂದು ವಚನಗಳು : ಸಂ. ಪ್ರಭುಶಂಕರ, ನಿವೇದಿತ ಪ್ರಕಾಶನ, ಮೈಸೂರು .

೧೦. ಜನಪದ ಮಹಾಭಾರತ : ಸಂಪಾದಕರು, ಸಂಗ್ರಹಕರು ಮತ್ತು ಪ್ರಕಾಶಕರು ಡಾ|| ಪಿ. ಕೆ. ರಾಜಶೇಖರ.

ಮಾದರಿ ಪ್ರಶ್ನೆಪತ್ರಿಕೆ

ಸಮಯ : ೩ ಗಂಟೆ   ಅಂಕಗಳು : ೧೦೦

೧. **ಕೆಳಗಿನವುಗಳಲ್ಲಿ ಒಂದು ಪದ್ಯದ ಭಾವವನ್ನು ವಿವರಿಸಿ**

೧ x ೧೦ =೧೦

ಅ) ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿತನದ ಕೇಡು !
ಮನದ ಕೋಪ ತನ್ನರುಹಿನ ಕೇಡು !
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ ।

ಆ) ನೆಂಟರ ಇಷ್ಟರ ಮರೆಸೋದು ರೊಕ್ಕ
ಕಂಟಕಗಳ ಪರಿಹರಿಸೋದು ರೊಕ್ಕ
ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ
ತುಂಟತನಗಳನು ಬಲಿಸೋದು ರೊಕ್ಕ

೨. **ನಾಲ್ಕಕ್ಕೆ ಸಂದರ್ಭೋಚಿತ ಟಿಪ್ಪಣಿ ಬರೆಯಿರಿ** **೪x೫=೨೦**

೧. ಅಳಿಮನದವನ ಭಕ್ತಿ ಇಂತಾಯಿತ್ತು
೨. ಶಬ್ದಕ್ಕೆ ನಾಚಿದೊಡೆಂತಯ್ಯ
೩. ಉಣ್ಣದೆ ಉಪವಾಸ ಇರುವರೆ
೪. ಬೆಲ್ಲದಂತೆ ಮಾತನಾಡಿ ಎಲ್ಲರನು ಮರಳುಮಾಡಿ
೫. ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
೬. ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು

೩. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ **೪x೫=೨೦**

೧. ಲಿಂಗ ೨. ಮಾಯೆ ೩. ಉಗಾಭೋಗ

೪. ಪುರಂದರದಾಸ ೫. ತ್ರಿಪದಿ ೬. ಶಿಶುನಾಳ ಶರೀಫ

೪. ಐದು ಪದಗಳಿಗೆ ಅರ್ಥ ಬರೆಯಿರಿ **೫x೧=೫**

ಕಳವೆ, ಒಡಲು, ಬೆಂತರ, ನಖಿ, ಹರವಿ, ಭೂಸುರ, ಡಂಬ ಮಂದಲಿಗೆ, ಕೂರ್ಡಿಸಿ , ಗಸಣಿ

೫. ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಿ **೩x೧೦=೩೦**

೧. ಭಕ್ತನಿಗೂ ಗುಹೇಶ್ವರ ಲಿಂಗಕ್ಕೂ ಇರಬೇಕಾದ ಸಂಬಂಧವನ್ನು ಅಲ್ಲಮ ಪ್ರಭುಗಳು ತಮ್ಮ ವಚನಗಳ ಮೂಲಕ ಹೇಗೆ ವ್ಯಕ್ತಪಡಿಸಿದ್ದಾರೆ? ವಿವರಿಸಿ.

೨. ಮಾಯೆಯ ಬಗ್ಗೆ ಅಕ್ಕಮಹಾದೇವಿಯವರ ನಿಲುವುಗಳೇನು?

೩. ಧರೆಯಲ್ಲಿರುವ ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಲು ಕಾರಣವೇನು?

೪. ಕುಲದ ಬಗ್ಗೆ ಕನಕದಾಸರ ಅಭಿಪ್ರಾಯಗಳೇನು?

೫. ಅನ್ನದಾನವನ್ನು ಕುರಿತು ಸರ್ವಜ್ಞ ತನ್ನ ವಚನಗಳಲ್ಲಿ ಏನೆಂದು ಹೇಳಿದ್ದಾನೆ?

೬. ಒಣಪಾಂಡಿತ್ಯ ಹಾಗೂ ಪಾಂಡಿತ್ಯದ ಅಹಮಿಕೆಯಿಂದ ಮೆರೆಯುವ ಪಂಡಿತರನ್ನು ಬಸವಲಿಂಗ ಶರಣರು ತರಾಟೆಗೆ ತೆಗೆದುಕೊಂಡಿರುವ ರೀತಿಯನ್ನು ವಿವರಿಸಿ.

೬. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿಮರ್ಶಾತ್ಮಕವಾಗಿ ಉತ್ತರಿಸಿ. **೧x೧೫=೧೫**

೧. ಪುರಂದರದಾಸರ ಕೀರ್ತನೆಗಳಲ್ಲಿ ಸಮಾಜ ವಿಡಂಬನೆ ಹೇಗೆ ಚಿತ್ರಿತಗೊಂಡಿದೆ? ವಿಮರ್ಶೆ ಮಾಡಿ.

೨. ಸಮಾಜದಲ್ಲಿರುವ ಲೋಪವನ್ನು ಕುರಿತಂತೆ ಬಸವಣ್ಣನವರ ನಿಲುವುಗಳೇನು? ಸ್ಪಷ್ಟಪಡಿಸಿ.

೩. 'ಭೀಷ್ಮರಿಗೆ ಓತಿ ಕೊಟ್ಟ ಶಾಪ' – ಈ ಕಾವ್ಯಭಾಗವನ್ನು ನಿಮ್ಮ ವಾಕ್ಯದಲ್ಲಿ ಸಂಗ್ರಹಿಸಿ ಕಥಾರೂಪಕ್ಕೆ ಬರೆಯಿರಿ.

'ಪ್ರವೇಶ' ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು.

ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮